ಆಗಸ್ಟ್ 31, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್ 2000

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಶ್ರದ್ಧಾ ಮತ್ತು ಭಕ್ತಿ ಕೇಂದ್ರ ಧರ್ಮಸ್ಥಳದಲ್ಲಿ ಏನಿದು ರಾದ್ಧಾಂತ?

## ‘ಮಾಸ್ಕ್‌ಮ್ಯಾನ್’ ಮಂಪರು ಪರೀಕ್ಷೆ ನಡೆದರೆ ಬುರುಡೆ ರಹಸ್ಯ ಹೊರಗೆ?







ಚಿನ್ನಯ್ಯ...ಎನ್ನಯ್ಯಾ!!





## ರಾಜಧಾನಿಯಲ್ಲಿ ‘ಡ್ರಗ್ಸ್’ ದಂಧೆ ಬಲು ಜೋರು!

## ಬ್ರೂಟಲ್ ಮರ್ಡರ್ ಇನ್ ಸಿದ್ದೇಶ್ವರ ಬಾರ್!





## ಕಾಕ್‌ಪಿಟ್ ರೊಮ್ಯಾನ್ಸ್!





## ಪ್ರೇಯಸಿಯನ್ನು ಕೊಂದು ತಾನೂ ಇರಿದುಕೊಂಡ!

## ಸಾಹಸಿ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರ

# ಸವಿನೆನಪಿನಲ್ಲಿ.....



1985ರಲ್ಲಿ ಪ್ರಕಟಣೆ ಆರಂಭಿಸಿದ 'ಪೊಲೀಸ್ ನ್ಯೂಸ್' ಇಂದಿಗೆ ನಿರಂತರ 42ನೇ ವರ್ಷದಲ್ಲಿ ಮುನ್ನಡೆದು 2000 ಸಂಚಿಕೆ ಮುದ್ರಣಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ನಾವು ನಮ್ಮ ಸಂಸ್ಥಾಪಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರನ್ನು ನೆನೆಯಬೇಕಾದ್ದು ನಮ್ಮ ಕರ್ತವ್ಯ ಅನ್ನಿಸಿತು.

ದಿನಾಂಕ 29-03-1954ರಂದು ಶ್ರೀ ಕೆ.ಪಿ. ಮಲ್ಲೇಶನ್ ಮತ್ತು ಸರಸ್ವತಮ್ಮನವರ ಸುಪುತ್ರರಾಗಿ ಕನಕಪುರದಲ್ಲಿ ಜನಿಸಿದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು 1974ರಲ್ಲಿ ಬಿಎಸ್ಸಿ ಪದವಿ ಪಡೆದು ನಂತರ ಕಾನೂನು ಶಿಕ್ಷಣ ಗಳಿಸಿ 1975ರಲ್ಲಿ 'ಶಿಕ್ಷಣ ಸುಧಾರಕ' ಪಾಕ್ಷಿಕವನ್ನು ಆರಂಭಿಸಿದ್ದ ಸಾಹಸಿಗಳು! ಮುಂದೆ 1980ರಲ್ಲಿ ಶ್ರೀಮತಿ ಅನ್ನಪೂರ್ಣಮ್ಮನವರ ಕೈ ಹಿಡಿದು ಸಾಂಸಾರಿಕ ಜೀವನಕ್ಕೆ ಪಾದಾರ್ಪಣೆಗೈದು ಮುತ್ತಿನಂಥಾ ಎರಡು ಮಕ್ಕಳ ಪಡೆದು ಪತ್ರಿಕೋದ್ಯಮದಲ್ಲಿ ಮುನ್ನಡೆಯಲು ಇಚ್ಛಿಸಿದಾಗ 1985ರಲ್ಲಿ ಜನ್ಮತಳೆದದ್ದೇ 'ಪೊಲೀಸ್ ನ್ಯೂಸ್' ಪಾಕ್ಷಿಕ! ಮೊದಲು ಪಾಕ್ಷಿಕವಾಗಿ ಆರಂಭವಾದ ಪತ್ರಿಕೆ 1987ರಲ್ಲಿ ವಾರಪತ್ರಿಕೆಯಾಗಿ ಬದಲಾಯಿತು. ಒಂದೇ ವರ್ಷದಲ್ಲಿ ಒಂದು ಲಕ್ಷ ಪ್ರಸಾರ, ಎರಡನೇ ವರ್ಷದಲ್ಲಿ ಒಂದೂವರೆ ಲಕ್ಷ ದಾಟಿದ್ದು ಕನ್ನಡ ಪತ್ರಿಕೋದ್ಯಮದಲ್ಲೇ ದಾಖಲೆ! 'ಪೊಲೀಸ್ ನ್ಯೂಸ್' ಭರ್ಜರಿ ಜಯ ಬೆನ್ನಲ್ಲೇ 'ಲೋಕವಾಣಿ' ದಿನಪತ್ರಿಕೆಯ ಮಾಲೀಕತ್ವ ಹುಡುಕಿಕೊಂಡು ಬಂದಿದ್ದು ಸುದೈವ! (ಹಿಂದೊಮ್ಮೆ ಅಲ್ಲಿ ನೌಕರಿ ಸಿಗದೆ ವಾಪಸ್ ಬಂದಿದ್ದು ದುರ್ದೈವ!) ಮುಂದೆ 1990ರಲ್ಲಿ ಮಂಗಳೂರು ನಗರದಲ್ಲಿ 'ಮಂಗಳೂರು ಮಿತ್ರ' ಸಂಜೆ ದೈನಿಕ ಆರಂಭಿಸಿದರು. 1992ರಲ್ಲಿ ಮುಂಬೈ ಮಹಾನಗರಕ್ಕೆ ಕಾಲಿಟ್ಟು ಅಲ್ಲಿನ ಹೊರನಾಡ ಕನ್ನಡಿಗರಿಗಾಗಿ 'ಕರ್ನಾಟಕ ಮಲ್ಲ' ದಿನಪತ್ರಿಕೆ ಸ್ಥಾಪಿಸಿದರು. 'ಕರ್ನಾಟಕ ಮಲ್ಲ' ಮುದ್ರಣಗೊಂಡ ಕೆಲವೇ ಗಂಟೆಗಳಲ್ಲಿ ಗಲ್ಫ್ ಕಂಟ್ರೀಸ್‌ನಲ್ಲೂ ಪ್ರಸಾರ ಕಂಡಿದ್ದು ಇತಿಹಾಸ. ಮಹಾರಾಷ್ಟ್ರ, ಗುಜರಾತ್ ಮತ್ತಿತರೆ ರಾಜ್ಯಗಳಲ್ಲಿಯೂ ಪ್ರಸಾರವಾಗಿದ್ದು 'ಕರ್ನಾಟಕ ಮಲ್ಲ'ನ ಹೆಮ್ಮೆ.

ಮುಂದೆ; 1996ರಲ್ಲಿ 'ಆದರ್ಶ ಗಂಡ ಹೆಂಡತಿ' ಎಂಬ ವೈದಕೀಯ ವಿಜ್ಞಾನ ಮಾಸಿಕ ಪತ್ರಿಕೆಯನ್ನು ಆರಂಭಿಸಿದ ಶ್ರೀ ಎಂ. ಮಲ್ಲಿಕಾರ್ಜುನಯ್ಯ ಇಲ್ಲೂ ಗೆಲುವು ದಾಖಲಿಸಿದರು. 1997ರಲ್ಲಿ 'ಕ್ರೀಡಾ ಸಮಯ' ಮಾಸಿಕವನ್ನು ಆರಂಭಿಸಿ ಕ್ರೀಡಾ ಲೋಕಕ್ಕೆ ಒಂದು ಕೊಡುಗೆ ನೀಡಿದ್ದರು. 1999ರಲ್ಲಿ 'ಶುಭದಿನ' ಎಂಬ ಪ್ರಪ್ರಥಮ ವಾಣಿಜ್ಯ ದೈನಿಕವನ್ನು ಆರಂಭಿಸಿದರು. 1999 ಜೂನ್‌ನಲ್ಲಿ 'ಸಿಟಿ ಟುಡೆ' ಎಂಬ ಇಂಗ್ಲೀಷ್ ಸಂಜೆ ದೈನಿಕವನ್ನೂ ಆರಂಭಿಸಿದ್ದರು. ದುರ್ದೈವವಶಾತ್; ಅದೇ ವರ್ಷ ಅವರಿಗೆ ಎರಡೂ ಮೂತ್ರ ಪಿಂಡಗಳು ವಿಫಲಗೊಂಡು ಅನಾರೋಗ್ಯದಿಂದ ಹಾಸಿಗೆ ಹಿಡಿದು 'ಶುಭದಿನ' ಹಾಗೂ 'ಸಿಟಿ ಟುಡೆ' ಎರಡೂ ಪತ್ರಿಕೆಗಳ ಪ್ರಕಟಣೆ ನಿಲ್ಲಿಸಬೇಕಾಯ್ತು.

ಗಮನೀಯ ಸಂಗತಿ ಏನೆಂದರೆ; 'ಪೊಲೀಸ್ ನ್ಯೂಸ್' ವಾರಪತ್ರಿಕೆ ಕನ್ನಡದಲ್ಲಿ ಮಾತ್ರವಲ್ಲದೆ ಕೆಲಕಾಲ ತಮಿಳು ಹಾಗೂ ಹಿಂದಿಯಲ್ಲೂ ಪ್ರಕಟಣೆ ಕಂಡಿತ್ತು. ಕೆಲಸದ ಒತ್ತಡದಿಂದ ನಿರಂತರ ಪ್ರಕಟಣೆ ಕಾಯ್ದುಕೊಳ್ಳಲಾಗಲಿಲ್ಲ. ಮಂಗಳೂರು ಮಿತ್ರ ಇಂದಿಗೂ ಬೇರೆಯವರ ಸಂಪಾದಕತ್ವದಲ್ಲಿ ಪ್ರಕಟಣೆಗೊಳ್ಳುತ್ತಿದ್ದು, 'ಕರ್ನಾಟಕ ಮಲ್ಲ'ದ ಗೌರವ ಸಂಪಾದಕತ್ವ ಮುಂದುವರೆದಿದೆ. ಕನ್ನಡ ವೈದ್ಯಕೀಯ ಸಾಹಿತ್ಯ ಪರಿಷತ್ತಿನ ಮುಖವಾಣಿಯಾದ 'ವೈದ್ಯಕೀಯ ಸಾಹಿತ್ಯ' ಮಾಸಪತ್ರಿಕೆಯ ಗೌರವ ಸಂಪಾದಕರಾಗಿ, ಧರ್ಮ, ಶೈಕ್ಷಣಿಕ ವಿಚಾರಗಳಿಗೆ ಮೀಸಲಾದ 'ದೇಗುಲ ಪ್ರಭೆ' ಮಾಸಪತ್ರಿಕೆಯ ಗೌರವ ಸಂಪಾದಕರಾಗಿ ರಾರಾಜಿಸಿದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರನ್ನು ಕನ್ನಡ ಸಾಹಿತ್ಯ ಲೋಕ ಎಂದಿಗೂ ಮರೆಯದು.

22-11-20025 ನಮ್ಮೆಲ್ಲರ ಪಾಲಿಗೆ ದುರ್ದೈವ.

ಆವತ್ತು ನಮ್ಮ ಅನ್ನದಾತರೂ ಮಹಾನ್ ಸಾಹಸಿಗಳೂ ಆದ ಲಯನ್ ಎಂ. ಮಲ್ಲಿಕಾರ್ಜುನಯ್ಯನವರು ಶಿವೈಕ್ಯರಾದರು. ಆದರೆ ಅವರು ತೋರಿದ ಹಾದಿ ನಮಗಿಂದಿಗೂ ಹಚ್ಚಹಸಿರಾಗಿದೆ, ಅನ್ನ ನೀಡುತ್ತಿದೆ. ಪ್ರಿಯ ಓದುಗರೇ, ಶ್ರೀ ಎಂ. ಮಲ್ಲಿಕಾರ್ಜುನಯ್ಯ ಅವರು ಮಾಡಿರುವ ಸಾಹಸಗಳು, ಸಾಧನೆಗಳು ಒಂದೆರಡಲ್ಲ. ಎಲ್ಲವನ್ನೂ ಒಂದೊಂದಾಗಿ ಇದೇ ಪುಟದಲ್ಲಿ ದಾಖಲಿಸುತ್ತಾ ಹೋಗಲಿದ್ದೇವೆ. ದಯವಿಟ್ಟು ಓದಿ. ಅದು ಇಂದಿನ ಯುವಪೀಳಿಗೆಗೆ ಮತ್ತು ನಿಮಗೆಲ್ಲಾ ಸ್ಫೂರ್ತಿಯಾಗದಿದ್ದರೆ ಕೇಳಿ....

## ಸಂದ ಗೌರವ, ಪ್ರಶಸ್ತಿ-ಪುರಸ್ಕಾರಗಳು

ಪತ್ರಿಕೋದ್ಯಮದಲ್ಲಿ ಸತತ 25 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಕಾಯಾ, ವಾಚಾ, ಮನಸಾ ತ್ರಿವಿಧ ಶುದ್ಧಿಯಿಂದ ದುಡಿಮೆ ಮಾಡಿದ ಫಲವಾಗಿ ಯಶಸ್ಸು ಕಂಡರು. ರಾಜ್ಯ ಹಾಗೂ ಹೊರ ದೇಶಗಳಲ್ಲಿ ಅನೇಕ ಸೇವಾ ಸಂಸ್ಥೆಗಳ ಸದಸ್ಯರಾಗಿ, ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಸೇವಾ ಸಂಸ್ಥೆಯಾದ 'ಲಯನ್ಸ್ ಕ್ಲಬ್ ಆಫ್ ಬೆಂಗಳೂರು' ಮೆಜೆಸ್ಟಿಕ್ ಶಾಖೆಯ ಅಧ್ಯಕ್ಷರಾಗಿದ್ದರು. 1989ರಲ್ಲಿ ಸಿಂಗಾಪುರ, ಹಾಂಗ್‌ಕಾಂಗ್ ಮತ್ತಿತರೆ ರಾಷ್ಟ್ರಗಳಿಗೆ ಭೇಟಿ ನೀಡಿ ಪ್ರವಚನ ಗೈದಿದ್ದರು. 1993ರಲ್ಲಿ ಗಲ್ಫ್ ರಾಷ್ಟ್ರಗಳಿಗೆ (ದುಬೈ, ಅಬುದಾಬಿ) ಭೇಟಿ ನೀಡಿ ಅಲ್ಲಿನ ಕನ್ನಡ ಸಂಸ್ಥೆಗಳಿಂದ ಗೌರವ ಸ್ವೀಕರಿಸಿದ್ದರು. 1993-94ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಪತ್ರಕರ್ತರ ಸಮ್ಮೇಳನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದಿಂದ 'ಗೌರವ' ಸ್ವೀಕರಿಸಿದ್ದರು. 1998ರಲ್ಲಿ ಮುದ್ರಣ ಕಲೆಯ ಹೆಚ್ಚಿನ ಅಧ್ಯಯನಕ್ಕಾಗಿ ಯುರೋಪ್ ರಾಷ್ಟ್ರಗಳ ಆಹ್ವಾನದ ಮೇರೆಗೆ ಅಲ್ಲಿಗೆ ತೆರಳಿ ಗೌರವ ಸಂಪಾದಿಸಿದ್ದರು. 1999ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ 'ಪತ್ರಿಕೋದ್ಯಮದಲ್ಲೇ ವಿಶಿಷ್ಟ ಸಾಹಸ' ಮೇರೆದ ಪ್ರಶಸ್ತಿ ಸ್ವೀಕರಿಸಿದ್ದರು. ಬರೆಯುತ್ತಾ ಹೋದರೆ ಪುಟಗಳು ಸಾಲವು....

# ಬೆಂಗಳೂರು ಟ್ರಾಫಿಕ್ ಪೊಲೀಸ್ ಮಾದರಿಯಲ್ಲಿ ಜೈಲು ಸಿಬ್ಬಂದಿಗೆ ಬಾಡಿವೋರ್ನ್ ಕ್ಯಾಮೆರಾ!

ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣೆ ಇಲಾಖೆಗೆ ಯಾವಾಗ ಶ್ರೀ ದಯಾನಂದ ಸಾಹೇಬ್ರು ಮಹಾ ಅಧಿಕ್ಷಕರಾಗಿ ಕಾರಾಗೃಹಗಳಲ್ಲಿ ಆಗಮಿಸಿದರೋ, ಅವತ್ತಿಂದಲೇ ಶುರು ವಾಗಿದೆ ಕಾರಾಗೃಹ 'ಶುಚಿ' ಕಾರ್ಯ! ಶುಚಿ ಕಾರ್ಯ ಅಂದ್ರೆ ಅಲ್ಲಿನ ಕೊಳೆ ತೊಳೆಯೋ ಕೆಲಸ ವಲ್ಲ, ಅಲ್ಲಿ ನಡೆಯೋ ಭ್ರಷ್ಟಾ ಚಾರವನ್ನು ಬುಡ ಸಹಿತ ಕಿತ್ತು ಬಿಸಾಡುವ ಮಹತ್ ಕಾರ್ಯ!




ರೇಣುಕಾಸ್ವಾಮಿ ಕೊಲೆ ಕೇಸ್ ಆರೋಪಿ ದರ್ಶನ್ ಗೆ ಬೆಂಗಳೂರು ಕೇಂದ್ರ ಕಾರಾ ಗೃಹ ದೊಳಗೆ ಸಿಗುತ್ತಿದ್ದ ರಾಜಾ ತಿಥ್ಯ ಎಂಥದ್ದು ಎಂಬುದನ್ನು ನೀವೆಲ್ಲ ನೋಡಿದ್ದೀರಿ... ಆ ಘಟನೆಯಿಂದ ಬಂಧಿಖಾನೆ ಅಧಿಕಾರಿಗಳಿಗೆ ಎಂಥ ಕೆಟ್ಟ ಹೆಸರು ಪ್ರಾಪ್ತಿ ಆಗಿತ್ತು ಅನ್ನು ವುದು ನಿಮಗೆ ಗೊತ್ತಿದೆ. ಜೈಲ್ ಎಂಬುದು ಅಪರಾಧಿಗಳ ಪುನರ್ ವಸತಿ ಕೇಂದ್ರವೇ ಒರತು, ಡಾನ್ ಗಿರಿ ಮೆರೆಯೋ ಕರಾಳ ಲೋಕವಲ್ಲ....

ಇದನ್ನೆಲ್ಲಾ ಮನಗಂಡೇ ಶ್ರೀಯುತ ದಯಾ ನಂದ ಸಾಹೇಬ್ರು, ಇಡೀ ಕರ್ನಾಟಕ ರಾಜ್ಯದ ಜೈಲುಗಳನ್ನು 'ಶುಚಿ'ಗೊಳಿ ಸಲು ಪಣ ತೊಟ್ಟಿದ್ದಾರೆ.

ಇನ್ಮುಂದೆ ಜೈಲುಗಳಲ್ಲಿ ಇಷ್ಟು ದಿವಸ ನಡೆಯುತ್ತಿದ್ದ ಅನ್ಯಾಯ, ಅವ್ಯವಹಾರಗಳು ನಡೆಯಲ್ಲ, ಅವಕ್ಕೆ ಕಡಿವಾಣ ಹಾಕಲು ಹಾಗೂ ಆಡಳಿತದಲ್ಲಿ ಸುಧಾರಣೆ ತರುವ ಉದ್ದೇಶ ದಿಂದ ಟ್ರಾಫಿಕ್ ಪೊಲೀಸ್ ಮಾದರಿಯಂತೆ, ಜೈಲು ಅಧಿ ಕಾರಿಗಳು, ವಾರ್ಡರ್ ಗಳು, ಮತ್ತು ಸಿಬ್ಬಂದಿಗಳಿಗೆ ಬಾಡಿ ವೋರ್ನ್ ಕ್ಯಾಮರಾ ಧರಿಸಿ ಡ್ಯೂಟಿ ಮಾಡಲು ಆದೇಶ ಮಾಡಲಾಗುತ್ತಿದೆ! ಈಗಾಗಲೇ ರಾಜ್ಯದ 8 ಕೇಂದ್ರ ಕಾರಾಗೃಹ ಗಳು ಹಾಗೂ ಒಂದು ಜಿಲ್ಲಾ ಕಾರಾಗೃಹದ ಸಿಬ್ಬಂದಿಗೆ ಬಾಡಿ ವೋರ್ನ್ ಕ್ಯಾಮೆರಾ ಅಳವಡಿಸ ಲಾಗಿದೆ.

ಬೆಂಗಳೂರು ಪರಪ್ಪನ ಅಗ್ರಹಾರ ಜೈಲಿಗೆ-20, ಮೈಸೂರು, ಶಿವಮೊಗ್ಗ, ವಿಜಯಪುರ, ಬೆಳ ಗಾವಿ, ಬಳ್ಳಾರಿ, ಕಲಬುರಗಿ, ಧಾರವಾಡ ಸೆಂಟ್ರಲ್ ಜೈಲುಗಳಿಗೆ ತಲಾ 10 ಕ್ಯಾಮರಾ, ಮಂಗ ಳೂರು ಜಿಲ್ಲಾ ಜೈಲಿಗೆ-5 ಕ್ಯಾಮರಾ ಸೇರಿ ಪ್ರಾಥಮಿಕ ಹಂತದಲ್ಲಿ ಒಟ್ಟು 90 ಬಾಡಿವೋರ್ನ್ ಕ್ಯಾಮೆರಾ ಗಳನ್ನು ವಿತರಿಸಲಾಗಿದೆ ಎಂದು ತಿಳಿದು ಬಂದಿದೆ. ಭವಿಷ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಮೆರಾ ಖರೀದಿಗೆ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಕೂಡ. ಪರಿವರ್ತನಾ ಕೇಂದ್ರವಾಗಬೇಕಿದ್ದ ಜೈಲುಗಳು ಪ್ರಸ್ತುತ ಪರಿಸ್ಥಿತಿಯಲ್ಲಿ ಅಕ್ರಮದ ತಾಣವಾಗಿ ಮಾರ್ಪಡಾಗಿದ್ದು, ಜೈಲಿಗೆ ಹೋಗುವ ಆರೋಪಿಗಳು ಜಾಮೀನಿನ ಮೇಲೆ ಹೊರ ಬಂದಾಗ ಇನ್ನಷ್ಟು ಅಪರಾಧ ಎಸಗಲು ಜೈಲುಗಳೇ ಸ್ಫೂರ್ತಿ ಕೇಂದ್ರಗಳಾಗುತ್ತಿವೆ ಎಂಬುದು ಆತಂಕಕಾರಿ ವಿಚಾರವಲ್ಲದೆ ಮತ್ತೇನು? ಇತ್ತೀಚಿನ ವರ್ಷಗಳಲ್ಲಿ ಕೆಲ ಜೈಲು ಗಳಲ್ಲಿ ಡ್ರಗ್ಸ್ ಸೇವನೆ, ಮೊಬೈಲ್ ಬಳಕೆ ಇನ್ನಿತರ ಅನೈತಿಕ ಚಟುವಟಿಕೆಗಳು ಎಗ್ಗಿಲ್ಲದೇ ನಡೆಯುತ್ತಿರುವುದು ಜಗಜ್ಜಾಹಿರು ಆಗಿದೆ.



ಸಿಸಿಬಿಯವರು ಪ್ರತಿ ಬಾರಿ ಜೈಲಿನ ಮೇಲೆ ದಾಳಿ ನಡೆಸಿದಾಗಲೂ ಅವ್ಯವಹಾರ ನಡೆಸುತ್ತಿರುವುದು ಬಹಿರಂಗಗೊಂಡಿದೆ. ಸೆರೆಮನೆ ಯಲ್ಲಿ ಅಕ್ರಮದ ವಾಸನೆ ಬಡಿ ದರೂ ಏನೂ ಗೊತ್ತಿಲ್ಲದವರಂತೆ ಜೈಲು ಸಿಬ್ಬಂದಿ ವರ್ತನೆ ಹಲವು ಅನುಮಾನಗಳಿಗೆ ಪುಷ್ಠಿ ಕೊಡು ವಂತಿತ್ತು. ಇತ್ತೀಚೆಗಷ್ಟೇ ಶಿವ ಮೊಗ್ಗದ ಹಿಂದೂ ಕಾರ್ಯಕರ್ತ ಹರ್ಷನ ಕೊಲೆ ಪ್ರಕರಣದ ಆರೋಪಿಗಳು ಕುಟುಂಬಸ್ಥ ರೊಂದಿಗೆ ವಿಡಿಯೋ ಕಾಲ್ ಮಾಡಿ ಸಿಕ್ಕಿಬಿದ್ದಿದ್ದು, ಅವ್ಯವ ಹಾರಕ್ಕೆ ಹಿಡಿದ ಕೈಗನ್ನಡಿಯಾಗಿತ್ತು. ಕಲಬುರಗಿ ಜೈಲಿನಲ್ಲಿ ಪಾನ್ ಗುಟ್ಕಾ, ಎಣ್ಣೆ ಪಾರ್ಟಿ ವಿಡಿಯೋ ಪಸರ್ ಆಗಿ ಇಲಾಖೆಯ ಮಾನ-ಮರ್ಯಾದೆ ಮೂರು ಕಾಸಿಗೆ ಹರಾಜು ಆಗಿತ್ತು.

ಇವೇ ಮುಂತಾದ ಘಟನೆಗಳಿಂದ ಪಾಠ ಕಲಿತಿರುವ ಸರ್ಕಾರ ಜೈಲಿನಲ್ಲಿ ಅಕ್ರಮ ತಡೆಯಲು ಹಾಗೂ ಆಡಳಿತದಲ್ಲಿ ಪಾರದರ್ಶಕತೆ ತರಲು ಬಾಡಿವೋರ್ನ್ ಕ್ಯಾಮೆರಾ ಅಳವಡಿಸಲು ನಿರ್ಧರಿಸಿದ್ದು ಸ್ತುತ್ಯಾರ್ಹ. ಈ

☞ 3



ಸಂಪಾದಕ
**ಎಂ. ರಾಹುಲ್**

ನನ್ನ ಟೀಂ

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ : ಈ. ರಾಜೇಶ್
ಪ್ರಸರಣಾಧಿಕಾರಿ : ಜಿ. ವೀರನಗೌಡ

# ಕಾನೂನನ್ನು ಹೀಗೆ ಬೇಕಾಭಿಟ್ಟಿ ಜಗ್ಗಾಡಬಹುದೇ....?!

ಶ್ರದ್ಧಾ ಮತ್ತು ಭಕ್ತಿ ಕೇಂದ್ರವಾದ ಧರ್ಮ ಸ್ಥಳ ಈಗ ವಿವಾದದ ಕೇಂದ್ರ ಬಿಂದು ಆಗಿದ್ದು ನಿಜಕ್ಕೂ ದುರಂತ. ಅವನ್ಯಾವನೋ ಕರೆತಂದ ಮಾತ್ರಕ್ಕೆ ದೂರುದಾರನ ಹಿನ್ನೆಲೆ ಪರಿಶೀಲಿಸದೆ ಎಸ್‌ಐಟಿ ರಚಿಸಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ತಪ್ಪು ಎಂಬ ವಾದವಿದೆ. ಅವನ ಹಿಂದೆ ಇರುವವರನ್ನು ಬಯಲಿಗೆಳೆಯಲು ಈಗ ಸರ್ಕಾರ ಹೊಸದಾಗಿ ಎಸ್‌ಐಟಿ ರಚಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದ ಘಟನೆ ಮೊನ್ನೆ ವಿಧಾನಸೌಧ ಕಲಾಪದಲ್ಲಿ ಮೊಳಗಿತ್ತು. ಮುಸುಕುಧಾರಿಗಿಂತಲೂ ಆತನ ಹಿಂದೆ ಇರುವವರನ್ನು ಮೊದಲು ಪತ್ತೆ ಮಾಡಬೇಕಿದೆ. ಇದೊಂದು ಷಡ್ಯಂತ್ರ. ಇದಕ್ಕೆ ವಿದೇಶದಿಂದ ಹಣ ಬಂದಿರುವ ಸಾಧ್ಯತೆ ಇದೆ. ಆದ್ದರಿಂದ ಇದನ್ನು ಎನ್‌ಐಎ ತನಿಖೆಗೆ ನೀಡುವುದು ಸೂಕ್ತ. ಇಲ್ಲವಾದರೆ ಕಾಂಗ್ರೆಸ್ ಕೂಡ ಇವರ ಜೊತೆ ಕೈ ಜೋಡಿಸಿದೆ ಅಂತ ಅಂದುಕೊಳ್ಳಬೇಕಾಗುತ್ತದೆ. ಲವ್ ಜಿಹಾದ್‌ನಂತೆಯೇ ಇದು ಮತಾಂತರದ ಜಿಹಾದ್ ಆಗಿದೆ. ಇದರ ಹಿಂದೆ ಯಾವ ದೇಶದವರು ಇದ್ದಾರೆ ಎಂದು ಕೂಡ ತಿಳಿಯಬೇಕಿದೆ... ಎಂದು ವಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ತಮಿಳುನಾಡಿನವರು ಹಿಂದೂ ದೇವರ ಫೋಟೋ ಸುಡುವ ಘಟನೆ ಈ ಹಿಂದೆ ನಡೆದಿತ್ತು. ಅಲ್ಲಿರುವವರೂ ಕೂಡ ಇಲ್ಲಿ ಸೇರಿಕೊಂಡಿರಬಹುದು.

ಕೇರಳ ಸರ್ಕಾರವಂತೂ ಈ ಬಗ್ಗೆ ಏಕ ಪಕ್ಷಿಯ ನಿರ್ಣಯ ಕೈಗೊಂಡಿದ್ದು ಮಹಾ ತಪ್ಪು ಈ ಬಗ್ಗೆ ಅವರಿಗೆ ನಾಚಿಕೆಯಾಗಬೇಕು. ಒಬ್ಬ ಮುಸ್ಲಿಂ ಯೂಟ್ಯೂಬರ್ ದಿಢೀರನೆ ಬಂದು AI ವೀಡಿಯೋ ಮಾಡಿ ಅಪಪ್ರಚಾರ ಮಾಡಿದ್ದಾನೆ. ಆತನೇನೂ ಜ್ಞಾನಿಯಲ್ಲ, ಆತನನ್ನು ಮೊದಲು ಬಂಧಿಸಬೇಕು. ಆತ ಜಾಮೀನು ಪಡೆದುಕೊಂಡಿದ್ದಾನೆ. ಆದ್ದರಿಂದ ಪೊಲೀಸರು ಮೇಲ್ಮನವಿ ಸಲ್ಲಿಸಿ ಬಂಧಿಸುವ ಅವಕಾಶ ಪಡೆಯಬೇಕು.

ಧರ್ಮಸ್ಥಳದ ಪ್ರಕರಣ ಆರಂಭವಾದಾಗಿನಿಂದಲೂ ಷಡ್ಯಂತ್ರ ಇದೆ ಎಂದು ಹೇಳುತ್ತಲೇ ಇದ್ದೆ. ಈ ಮುಸುಕುಧಾರಿಯ ಹಿನ್ನೆಲೆಯನ್ನು ಕಾಂಗ್ರೆಸ್ ಸರ್ಕಾರ ಮೊದಲು ತಿಳಿದುಕೊಳ್ಳಬೇಕಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಗತಿಪರರ ಮಾತನ್ನು ಕೇಳಿಕೊಂಡು ಎಸ್‌ಐಟಿ ರಚಿಸಿ ಕೋಟ್ಯಂತರ ರೂಪಾಯಿ ನಷ್ಟವಾಗಿದೆ. ಇದರಿಂದ ಅನೇಕ ಭಕ್ತರು ಅನುಭವಿಸಿದ ನೋವನ್ನು ಶಮನಗೊಳಿಸಲು ಸಾಧ್ಯವಿಲ್ಲ, ಎಸ್‌ಐಟಿ ರಚಿಸಿ ಎಂದು ಅನೇಕ ಮನವಿಗಳು ಬರುತ್ತಲೇ ಇರುತ್ತದೆ. ಏನೇ ಮಾಡುವ ಮೊದಲು ಹಿನ್ನೆಲೆಯನ್ನು ಪರಿಶೀಲಿಸಬೇಕಿತ್ತು.

ಎಸ್‌ಐಟಿ ರಚಿಸಿರುವುದರಿಂದ ಸರ್ಕಾರದ್ದೇ ತಪ್ಪು ಎಂಬುದು ಸಾಬೀತಾಗಿದೆ ಎಂದು ಸಿಎಂ ವಿರುದ್ಧ ಕೆಂಡ ಕಾರಿದರು. ಇಷ್ಟೆಲ್ಲ ಅವಾಂತರಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರಣ. ಪೊಲೀಸರು ನಿತ್ಯದ ಕೆಲಸ ಬಿಟ್ಟು ಹೆಚ್ಚುವರಿ ಕೆಲಸ ಮಾಡಿದ್ದು ಅದರಿಂದಾದ ಹಣದ ನಷ್ಟವನ್ನು ಕಾಂಗ್ರೆಸ್ ಪಕ್ಷವೇ ಭರಿಸಬೇಕು. ರಾಜ್ಯದ ಇತಿಹಾಸದಲ್ಲಿ ಈ ಬಗೆಯ ಪ್ರಹಸನ ಈವರೆಗೆ ನಡೆದಿಲ್ಲ, ಯಾರೋ ಒಬ್ಬ ದಾರಿಹೋಕ ಹೇಳಿದ್ದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿರುವ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಲಾಗಿದೆ. ಎಸ್‌ಐಟಿ ರಚನೆಯಾದಾಗಲೇ ನಾನು ಪತ್ರಿಕಾಗೋಷ್ಠಿ ಮಾಡಿ ಹಿನ್ನೆಲೆ ಪರಿಶೀಲಿಸಲು ಆಗ್ರಹಿಸಿದ್ದೆ. ಅಂದೇ ಏಕೆ ಬಿಜೆಪಿ ಬೀದಿಗಿಳಿದು ಹೋರಾಟ ಮಾಡಲಿಲ್ಲ? ಎಂದು ಕೆಲವರು ಪ್ರಶ್ನಿಸುತ್ತಾರೆ. ಡಿ.ಕೆ. ಶಿವಕುಮಾರ್ ಸೇರಿದಂತೆ ಕೆಲ ಕಾಂಗ್ರೆಸ್ ನಾಯಕರು ಹಿಂದೂಗಳ ಪರವಾಗಿದ್ದೇವೆ ಎಂದು ತೋರಿಸಿಕೊಳ್ಳುತ್ತಿದ್ದಾರೆ.... ಎಂದು ಆರ್. ಅಶೋಕ್ ವಿಡಂಬನೆ ಮಾಡಿದ್ದಾರೆ.

ಇನ್ನು ಆರ್. ಅಶೋಕ್ ಆರೋಪಗಳಿಗೆ ಟಾಂಗ್ ಕೊಟ್ಟ ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ಧರ್ಮಸ್ಥಳಕ್ಕೆ 800 ವರ್ಷಗಳ ಇತಿಹಾಸವಿದೆ. ಕ್ಷೇತ್ರದ ಮೇಲೆ ಅಟ್ಯಾಕ್ ಮಾಡುವ ಕೆಲಸ ಆಗ್ತಿದೆ ಅನ್ನೋದು ನಿಜ. ಧರ್ಮಸ್ಥಳದ ಹುಂಡಿಯ ಕಾಸನ್ನ ಏಕೆ ಕೇಳ್ತಾರೆ ?

ಹುಂಡಿಯ ಹಣ ದೇವಸ್ಥಾನದ ಕಮಿಟಿಗೆ ಹೋಗುತ್ತೆ. ಸಿಗಂದೂರು ದೇವಸ್ಥಾನವನ್ನ ಪಾಪಿಗಳು ಮುಜರಾಯಿಗೆ ಕೊಡಲು ಹೋಗಿದ್ರು. ಅವರ ವ್ಯಾಪ್ತಿಯ ದೇವಸ್ಥಾನ ಅವರು ಬೆಳೆಸಿರುತ್ತಾರೆ, ಶ್ರೀ ವೀರೇಂದ್ರ ಹೆಗ್ಗಡೆಯವರು ಸುಮ್ಮನೆ ಕುಳಿತಿಲ್ಲ ಕಾಲೇಜು, ಆಸ್ಪತ್ರೆ ಕಟ್ಟಿದ್ದಾರೆ.

ನಾವೂ ಧರ್ಮಸ್ಥಳಕ್ಕೆ ಹೋಗ್ತೇವೆ, ವರ್ಷಕ್ಕೆ 2 ಬಾರಿ ಹೋಗ್ತೇವೆ. ನಾವು ನಿಮ್ಮ ಪರ ಇರ್ತೇವೆ ಎಂದು ಹೆಗ್ಗಡೆಯರಿಗೆ ಧೈರ್ಯ ಹೇಳ್ತೇವೆ. ಬಿಜೆಪಿಯವರ ಧರ್ಮಸ್ಥಳ ಭೇಟಿ ರಾಜಕೀಯ ದುರುದ್ದೇಶದಿಂದ ಕೂಡಿದ್ದು. ನೀವು 66 ಸೀಟಿಗೆ ಬಂದ್ರಿ, ಇದೆಲ್ಲನಡಿಯಲ್ಲ.. ಕಲ್ಲಡ್ಕ ಪ್ರಭಾಕರ್ ಯಾರೂ ಧರ್ಮಸ್ಥಳ ವಿಚಾರವಾಗಿ ಮಾತಾಡ್ತಿಲ್ಲ.

ಆರ್. ಅಶೋಕ್, ವಿಜಯೇಂದ್ರ, ಸಿ.ಟಿ. ರವಿಯಷ್ಟೇ ಮಾತಾಡ್ತಾರೆ.... ಎಂಬಿತ್ಯಾದಿಯಾಗಿ ಕುಟುಕಿದರು. ಇದನ್ನೆಲ್ಲಾ ನೋಡಿದ್ರೆ ಶ್ರದ್ಧಾ ಮತ್ತು ಭಕ್ತಿ ಕೇಂದ್ರವಾದ ಧರ್ಮ ಸ್ಥಳ ಇಂದು ಹೀಗೇಕಾಯಿತು ಎಂದು ದುಃಖವಾಗುತ್ತದೆ. ಉಳಿದಂತೆ, ಮೊನ್ನಿನ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ರಾಜ್ಯದಲ್ಲಿನ ಕ್ರೈಂ ರೇಟ್ ಬಗ್ಗೆ ಪೊಲೀಸ್ ಅಧಿಕಾರಿಗಳನ್ನು ಪ್ರಶ್ನಿಸಿದ್ದು ಸಮಂಜಸವಾಗಿತ್ತು.

2023ರಿಂದ ಕಳೆದ ಮೂರು ವರ್ಷಗಳಲ್ಲಿ ಒಟ್ಟು 6635 ಪ್ರಕರಣಗಳು ದಾಖಲಾಗಿವೆ. 4912 ಪ್ರಕರಣಗಳಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ. 60 ದಿನಗಳ ಒಳಗೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದು 4149 ಪ್ರಕರಣಗಳಲ್ಲಿ ಮಾತ್ರ. ನೋಂದಣಿಯಾದ ಒಟ್ಟು ಪ್ರಕರಣಗಳಲ್ಲಿ 60 ದಿನಗಳ ಒಳಗಾಗಿ ಶೇ. 63 ಪ್ರಕರಣಗಳಲ್ಲಿ ಮಾತ್ರ ದೋಷಾರೋಪಣೆ ಪಟ್ಟಿ ಸಲ್ಲಿಕ್ಕೆ ಯಾಗಿರುತ್ತದೆ. ಕೇವಲ 36 ಪ್ರಕಾರಣಗಳಲ್ಲಿ ಶಿಕ್ಷೆ ಆಗಿರುತ್ತದೆ. 679 ಪ್ರಕರಣಗಳು ತನಿಖಾ ಹಂತದಲ್ಲಿವೆ.... ಇತ್ಯಾದಿಯಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ಉತ್ತರವಿತ್ತರು. ಆಗ ಸಿಎಂ ಸಿದ್ದರಾಮಯ್ಯ ನವರು ಈ ಹಿಂದೆ ಆಯಾ ವರ್ಷಗಳಲ್ಲಿ ನಡೆದಿರುವ ಪ್ರಕರಣಗಳ ನಿಖರ ದಾಖಲೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇದೆಲ್ಲಾ ಒತ್ತಟ್ಟಿಗಿರಲಿ, ಧರ್ಮ ಸ್ಥಳದಲ್ಲಿ ನಡೆದ ಬುರುಡೆ ತನಿಖೆ, ಅಸ್ಥಿಪಂಜರ ಹುಡುಕಾಟ ಇದೆಲ್ಲಕಾನೂನು ವ್ಯಾಪ್ತಿ ಮೀರಿ ನಡೆಯಿತೇನೋ ಎಂಬ ಅನುಮಾನವಿದೆ. ಈಗ ನೋಡಿದ್ರೆ ಏನೇನೋ ಬದಲಾವಣೆ ಆಗುತ್ತಿದೆ. ಬುರುಡೆ ದಾಸ ಚಿನ್ನಯ್ಯ ಅರೆಸ್ಟ್ ಆಗಿದ್ದಾನೆ. ಇನ್ನಾರೋ ಹೊಸಬ ಮಾಸ್ಕ್ ಹಾಕೊಂಡು ಲಂಚದ ಆಮಿಷದ ಬಗ್ಗೆ ಮಾತಾಡುತ್ತಿದ್ದಾನೆ.ಸುಜಾತ ಭಟ್ ದ್ವಂದ ಹೇಳಿಕೆ ನೀಡುತ್ತಿದ್ದಾರೆ.ಇವರೆಲ್ಲ ನಿಜಕ್ಕೂ ನೊಂದವರೇನಾ?

ಈ ಪಾಪಿಗಳ ಮಧ್ಯೆ ಸೌಜನ್ಯ ಸಾವಿನ ತನಿಖೆ ನಿಂತೇ ಹೋಗುತ್ತಾ? ಅವಳ ಕುಟುಂಬಕ್ಕೆ ನ್ಯಾಯ ಸಿಗುವುದೆಂತು?ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಲ್ರಿ, ಅಷ್ಟು ಬಲಿಷ್ಠವಾದ ಕಾನೂನನ್ನು ಹೀಗೆಲ್ಲಾ ಜಗ್ಗಾಡಬಹುದಾ?! ಗೃಹ ಸಚಿವರೇ ಉತ್ತರಿಸಬೇಕು....

-ಸಂ.

2 ☜

ಹಿನ್ನಲೆಯಲ್ಲಿ, ಸದ್ಯ 90 ಬಾಡಿವೋರ್ನ್ ಕ್ಯಾಮರಾಗಳನ್ನ ಮೇಲ್ಕಂಡ ಜೈಲುಗಳಿಗೆ ನೀಡಲಾಗಿದ್ದು, ಅಲ್ಲಿರುವ ಖೈದಿಗಳ ಬಗ್ಗೆ ನಿಗಾ ವಹಿಸುವ ಜೈಲು ವಾರ್ಡನ್ ಸೇರಿ ಇನ್ನಿತರ ಸಿಬ್ಬಂದಿಗೆ ಕ್ಯಾಮರಾ ಧರಿಸಿ ಗಸ್ತು ತಿರುಗುವಂತೆ ತಾಕೀತು ಮಾಡಲಾಗಿದೆ. ಆಯಾ ದಿನ ಹಗಲು ರಾತ್ರಿ ಕರ್ತವ್ಯ ನಿಭಾಯಿಸೋ ಅಧಿಕಾರಿ ಹಾಗೂ ಸಿಬ್ಬಂದಿ ಕ್ಯಾಮರಾ ಧರಿಸುವುದು ಕಡ್ಡಾಯಗೊಳಿಸಲಾಗಿದೆ. ಡ್ಯೂಟಿ ವೇಳೆ ಉದ್ದೇಶಪೂರ್ವಕವಾಗಿ ಕ್ಯಾಮರಾ ಆಫ್ ಮಾಡುವುದು, ಬಿಚ್ಚಿಟ್ಟು ಬಿಂದಾಸ್ ಆಗಿ ಸುತ್ತಾಡುವುದು ಕಂಡು ಬಂದರೆ ಅಂತಹ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಎಲ್ಲಾ ಜೈಲು ಮುಖ್ಯ ಅಧೀಕ್ಷಕರಿಗೆ ತಾಕೀತು ಮಾಡಲಾಗಿದೆ. ಸದರಿ ಬಾಡಿವೋರ್ನ್ ಕ್ಯಾಮರಾಗಳ ನಿರ್ವಹಣೆಗಾಗಿ ಆಯಾ ಜೈಲುಗಳಲ್ಲಿ ಪ್ರತ್ಯೇಕ ಸಿಬ್ಬಂದಿ ನಿಯೋಜಿಸಿ, ವಿಶೇಷ ಕೊಠಡಿಯಲ್ಲಿ ಮಾನಿಟರಿಂಗ್ ಮಾಡಲಾಗುತ್ತದೆ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಮತ್ತೊಂದು ಗಮನಿಯ ವಿಚಾರವೇನು ಅಂದ್ರೆ, ವಿವಿಧ ಅಪರಾಧವೆಸಗಿ ಜೈಲು ಸೇರುವ ಆರೋಪಿಗಳು ಕಾರಾಗೃಹದಲ್ಲಿ ಸರಿಯಾದ ಊಟ, ಮೂಲಸೌಕರ್ಯ ಒದಗಿಸದೆ ಹೀನಾಯವಾಗಿ ನಡೆಸಿಕೊಂಡು ಮೃಗಗಳಂತೆ ಕಾಣುತ್ತಿದ್ದಾರೆ ಎಂದು ಆರೋಪಿಸಿ ತಮ್ಮ ವಕೀಲರ ಮೂಲಕ ಕೋರ್ಟ್‌ನಲ್ಲಿ ವಿಚಾರಣಾಧೀನ ಕೈದಿಗಳು ದಾವೆ ಹೂಡುವ ಮುಖಾಂತರ ವ್ಯವಸ್ಥೆಯನ್ನ ದುರ್ಬಲಕ್ಕೆ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಮೇಲೆ ಸುಖಾಸುಮ್ಮನೆ ಹಲ್ಲೆಗೈದಿದ್ದಾರೆ ಎಂದು ಆರೋಪಿಸಿ ಬಂಧಿಗಳು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೂ ಮೊರೆ ಹೋಗುತ್ತಿದ್ದಾರೆ. ಇದರಿಂದ ಮಾಡದ ತಪ್ಪಿಗೆ ಒಳ್ಳೆ ಅಧಿಕಾರಿಗಳು ಕೋರ್ಟ್‌ಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಜೈಲಿನಲ್ಲಿ ಸಹ ಕೈದಿಗಳ ಮೇಲೆ ಹಲ್ಲೆ, ಸಿಬ್ಬಂದಿ ಜೊತೆ ಅನುಚಿತ ವರ್ತನೆ ತೋರಿದಾಗ ಸೆರೆಯಾದ ದೃಶ್ಯವನ್ನ ಕೋರ್ಟ್ ಮುಂದೆ ತೋರಿಸಿ ಅಧಿಕಾರಿಗಳು ಸಮರ್ಥಿಸಿಕೊಳ್ಳಬಹುದು ಅನ್ನೋದು ಬೇರೆ ವಿಷಯ. ಮತ್ತೊಂದೆಡೆ, ಕೆಲ ಜೈಲು ಸಿಬ್ಬಂದಿಗಳು ಹಣದಾಸೆಗಾಗಿ ಕೈದಿಗಳ ಜೊತೆ ಅಕ್ರಮದಲ್ಲಿ ಭಾಗಿಯಾಗಿರುವ ನಿದರ್ಶನಗಳು ಸಾಕಷ್ಟಿವೆ.ಒಟ್ಟಾರೆ, ಜೈಲಿನ ಒಳಗಿರೋ ಖೈದಿಗಳು ಪರೋಕ್ಷವಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ಹಾಗೂ ಸಿಬ್ಬಂದಿಗಳ ಅಧಿಕಾರ ದುರ್ಬಳಕೆ ತಡೆಯಲು ಬಾಡಿವೋರ್ನ್ ಕ್ಯಾಮೆರಾಗಳು ನೆರವಾಗಲಿವೆ ಅನ್ನೋದು ಸತ್ಯ.. ಇನ್ನೊಂದು ಪ್ರಮುಖ ವಿಚಾರವೇನೆಂದರೆ, ಜೈಲು ಸಿಬ್ಬಂದಿ ತಪಾಸಣೆಯನ್ನು ಅದೆಷ್ಟು ಬಿಗಿಗೊಳಿಸಿದರೂ... ಬಂಧಿಗಳು ಹೇಗೋ(?) ನಾನಾ ರೀತಿಯಲ್ಲಿ ಮೊಬೈಲ್‌ಗಳನ್ನು, ಡ್ರಗ್ಸ್ ಅನ್ನು ಹೇಗೋ ಜೈಲಿನೊಳಗೆ ತರಿಸಿಕೊಂಡು ಹೊರಗಿನ ಅಪರಾಧ ಚಟುವಟಿಕೆಯಲ್ಲಿ ಭಾಗಿಯಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಜೈಲುಗಳಲ್ಲಿ ಈಗಾಗಲೇ ಜಾಮರ್ ಅಳವಡಿಸಿದರೂ ಪ್ರಯೋಜನವಾದಂತಿಲ್ಲ, ಈ ಹಿಂದೆ ಅಳವಡಿಸಿದ ಜಾಮರ್‌ಗಳು 2ಜಿ ಜಾಮರ್‌ಗಳಾಗಿವೆ. ಪ್ರಸ್ತುತ 4ಜಿ ನೆಟ್‌ವರ್ಕ್ ಸಹಕರಿಸುವ ಮೊಬೈಲ್‌ಗಳು ಚಾಲ್ತಿಯಲ್ಲಿ ರುವುದರಿಂದ ಜೈಲಿನಲ್ಲಿ ನೆಟ್‌ವರ್ಕ್ ಸಿಗುತ್ತಿದೆ. ಹೀಗಾಗಿ, 2ಜಿ ಬದಲಿಗೆ 5ಜಿ ಮಾದರಿ ಜಾಮರ್ ಅಳವಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸದ್ಯ, ರಾಜ್ಯದ ಎಲ್ಲಾ ಜೈಲುಗಳಲ್ಲಿಯೂ 201 ಜಾಮರ್‌ಗಳನ್ನು ಹಾಕಲು ಸರ್ಕಾರ ಒಪ್ಪಿಗೆ ನೀಡಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ 5ಜಿ ಜಾರ್ಮ್‌ಗಳನ್ನು ಅಳವಡಿಸಲು ಅನುಮತಿ ದೊರೆತಿದ್ದು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಬಂಧಪಟ್ಟ ಅಧಿಕಾರಿಗಳು ಸರ್ವೇ ಕಾರ್ಯ ಪೂರ್ಣಗೊಳಿಸಿದ್ದಾರೆ. ಇನ್ನೊಂದೆಡೆ, ಜೈಲಿನ ಸುತ್ತಮುತ್ತಲ ನಿವಾಸಿಗಳು ಈಗಾಗಲೇ ತಮಗೆ ಸಿಗ್ನಲ್ ಸಿಗುತ್ತಿಲ್ಲ, ಬಹಳ ತೊಂದರೆಯಾಗುತ್ತಿದೆ ಎಂದು ದೂರುತ್ತಿದ್ದಾರೆ. ಹೀಗಾಗಿ, ಅವರಿಗೆ ತೊಂದರೆ ಆಗದಂತೆ ಅಧ್ಯಯನ ನಡೆಸಲಾಗುತ್ತಿದೆ. ಏನಿವೆ, ಶ್ರೀ ದಯಾನಂದರು ಇಲಾಖೆಗೆ ಆಗಮಿಸಿದ ಬಳಿಕ ಜೈಲುಗಳ ಶುಚಿ - ಶುದ್ಧಿ ಕಾರ್ಯ ಶುರುವಾಗಿದೆ. ಹ್ಯಾಟ್ಸ್ ಆಫ್ ಯು ಸರ್....

# ಬುರುಡೆ ಗ್ಯಾಂಗಿನ ಅಸಲಿಯತ್ತು ಬಹಿರಂಗ

ದಕ್ಷಿಣ ಕನ್ನಡ

✍ ಮೋಹನ್ ಬೋಳಂಗಡಿ

ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಕಳೆದ 12 ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಯುತ್ತದ್ದಂತಹ ಅಪಪ್ರಚಾರಕ್ಕೆ ಫುಲ್‌ಸ್ಟಾಪ್ ಬೀಳುವ ಎಲ್ಲಾ ಸಾಧ್ಯತೆಗಳು ಇವೆ. 1979 ಮತ್ತು 1987ರಲ್ಲಿ ಇದೇ ರೀತಿಯ ಹೋರಾಟಗಳು ಶ್ರೀ ಕ್ಷೇತ್ರದ ವಿರುದ್ಧ ನಡೆದಿದ್ದವು. ಆದರೆ ಯಾವುದೇ ಸಾಕ್ಷ್ಯಗಳಿಲ್ಲದೆ ಬಿದ್ದು ಹೋಗಿದ್ದವು. ಈ ಎರಡೂ ಹೋರಾಟಗಳನ್ನು ಕಮ್ಯೂನಿಸ್ಟ್ ಪಕ್ಷದ ಮುಖಂಡರು ಸಂಘಟಿಸಿದ್ದರು. ಆದರೆ ಅವರು ಶ್ರೀ ಕ್ಷೇತ್ರದ ವಿರುದ್ಧ ಮಾತನಾಡಲಿಲ್ಲ. ಅಲ್ಲಿನ ದೈವ ದೇವರುಗಳನ್ನು ಅಪಮಾನ ಮಾಡಲಿಲ್ಲ. ಆದರೆ 2012ರಲ್ಲಿ ನಡೆದಿದ್ದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 2013ರಿಂದ ಆರಂಭಗೊಂಡಂತಹ ಹೋರಾಟ ವಿವಿಧ ಮಜಲುಗಳನ್ನು ದಾಟಿ ಇದೀಗ ಧರ್ಮಸ್ಥಳದ ಸುತ್ತಮುತ್ತಲಿನ ಸರಕಾರಿ ಕಾಡುಗಳಲ್ಲಿ ಹೊಂಡ ಅಗೆಯುವವರೆಗೆ ನಡೆದಿದೆ. ಧರ್ಮಸ್ಥಳದ ವಿರುದ್ಧ ನಡೆಯುತ್ತಿದ್ದಂತಹ ಅಪಪ್ರಚಾರಗಳಿಗೆ ಅಂತಿಮ ಮುದ್ರೆ ಹಾಕಲು ರಾಜ್ಯ ಸರಕಾರ ಎಸ್‌ಐಟಿ ರಚಿಸಿದ್ದು, ಆ ತಂಡ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ. ಇದರ ಅಸಲಿಯತ್ತು ಬಹಿರಂಗಗೊಳ್ಳುತ್ತಿದೆ. ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರವನ್ನು ವಿರೋಧಿಸಿ ರಾಜ್ಯದಾದ್ಯಂತ ಧರ್ಮಸ್ಥಳದ ಭಕ್ತರ ಆಕ್ರೋಶ ಭುಗಿಲೇಳುತ್ತಿದೆ.





ಚಿನ್ನಯ್ಯ



**ಯಾರು ಈ ಚಿನ್ನಯ್ಯ ?**

ಧರ್ಮಸ್ಥಳ ವಿರುದ್ಧ ನಡೆಯುತ್ತಿದ್ದ ಛಾಯಾ ಸಮರಕ್ಕೆ ತಿರುವು ಸಿಕ್ಕಿದ್ದೇ ಒಂದೂವರೆ ತಿಂಗಳ ಹಿಂದೆ ಮೇ 22ರಂದು ಫೇಸ್‌ಬುಕ್‌ನಲ್ಲಿ ಬೆಂಗಳೂರಿನ ವಕೀಲರಾದ ಓಜಸ್ವಿ ಗೌಡ ಮತ್ತು ಸಚಿನ್ ದೇಶಪಾಂಡೆ ಅವರು ತಮ್ಮದೇ ಲೆಟರ್ ಹೆಡ್‌ನಲ್ಲಿ ಪತ್ರವೊಂದನ್ನು ಹರಿಯಬಿಟ್ಟರು. ಇದರಲ್ಲಿ ಇದ್ದಂತಹ ಒಕ್ಕಣೆಯೆಂದರೆ ಧರ್ಮಸ್ಥಳದ ಸುತ್ತಮುತ್ತ ನೂರಾರು ಹೆಣ್ಣು ಮಕ್ಕಳನ್ನು ಅತ್ಯಾಚಾರಗೈದು ಹೂತು ಹಾಕಲಾಗಿದೆ. ಈ ಮೃತ ದೇಹಗಳನ್ನು ಹೂತು ಹಾಕಿದಂತಹ ವ್ಯಕ್ತಿಗೆ ಇದೀಗ ಪಾಪಪ್ರಜ್ಞೆ ಕಾಡಿದ್ದು, ಸೂಕ್ತ ರಕ್ಷಣೆ ನೀಡಿದರೆ ಆ ಮೃತ ದೇಹಗಳನ್ನು ಎಲ್ಲೆಲ್ಲಿ ಹೂತು ಹಾಕಲಾಗಿದೆ ಎಂಬುದನ್ನು ತೋರಿಸಿ ಕೊಡಲು ಆ ವ್ಯಕ್ತಿ ಬದ್ಧನಿದ್ದಾನೆ ಎಂದು ಆ ಪತ್ರದಲ್ಲಿ ಹೇಳಲಾಗಿತ್ತು. ಈ ಪತ್ರವನ್ನು ಗಮನಿಸಿದ ದ. ಕ. ಜಿಲ್ಲಾ ಎಸ್ಪಿ ಕೆ. ಅರುಣ್ ಅವರು ಧರ್ಮಸ್ಥಳ ಎಸ್‌ಐ ಸಮರ್ಥ್ ಆರ್. ಗಾಣಿಗೇರ ಅವರನ್ನು ಸಂಪರ್ಕಿಸಿ ಪತ್ರದ ಸಾಚಾತನವನ್ನು ಪರಶೀಲಿಸುವಂತೆ ಸೂಚಿಸಿದರು. ಎಸ್‌ಐ ಸಮರ್ಥ್ ಆ ಪತ್ರವನ್ನು ಅವಲೋಕಿಸಿ ಅದರಲ್ಲಿ ಇದ್ದ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಪಾಪಪ್ರಜ್ಞೆ ಕಾಡಿದ ವ್ಯಕ್ತಿಯನ್ನು ಕರೆದುಕೊಂಡು ಬಂದು ದೂರು ನೀಡುವಂತೆ ಸೂಚನೆ ನೀಡಿದರು. ಬಾರದೆ ಇದ್ದಲ್ಲಿ ಪೊಲೀಸ್ ನೋಟೀಸ್ ನೀಡುವ ಎಚ್ಚರಿಕೆಯನ್ನೂ ನೀಡಿದರು. ಫೇಸ್‌ಬುಕ್‌ನಲ್ಲಿ ಬರೆದ ಪತ್ರಕ್ಕೆ ಪೊಲೀಸ್ ಇಲಾಖೆ ತಕ್ಷಣ ಪ್ರತಿಕ್ರಿಯೆ ನೀಡಿದ್ದನ್ನು ಗಮನಿಸಿದ ವಕೀಲರು ಪಾಪಪ್ರಜ್ಞೆ ಕಾಡಿದ ವ್ಯಕ್ತಿಯನ್ನು ಕರೆದುಕೊಂಡು ಬರುವುದಾಗಿ ಭರವಸೆ ನೀಡಿದರು. ಅದರಂತೆ ಆ ವ್ಯಕ್ತಿಯನ್ನು ಹೊರತುಪಡಿಸಿ ವಕೀಲರ ತಂಡ ಜಿಲ್ಲಾ ಎಸ್ಪಿ ಕಚೇರಿಗೆ ಬಂತು. ಆದರೆ ಎಸ್ಪಿಯವರು ಬೆಂಗಳೂರಿಗೆ ಹೋಗಿದ್ದರಿಂದ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ವಾಪಾಸಾಯಿತು. ಬೆಂಗಳೂರಿಗೆ ಇಲಾಖಾ ಕಾರ್ಯಕ್ರಮಕ್ಕೆ ಹೋಗಿದ್ದ ಎಸ್ಪಿ ಅರುಣ್ ವಾಪಾಸು ಬಂದ ನಂತರ ಮತ್ತೆ ವಕೀಲರನ್ನು ಸಂಪರ್ಕಿಸಲಾಯಿತು. ಕೊನೆಗೆ ಅವರು ವಿಧಿ ಇಲ್ಲದೆ ಒಂದು ದೂರು ಅರ್ಜಿಯನ್ನು ತಯಾರಿಸಿಕೊಂಡು ಎಸ್ಪಿ ಕಚೇರಿಗೆ ಬಂದರು. ಎಸ್ಪಿ ಅರುಣ್ ಅವರು ಸೂಕ್ತ ನಿರ್ದೇಶನ ನೀಡಿ ವಕೀಲರನ್ನು ಧರ್ಮಸ್ಥಳ ಪೊಲೀಸ್ ಠಾಣೆಗೆ ಕಳುಹಿಸಿದರು. ಧರ್ಮಸ್ಥಳ ಠಾಣೆಯಲ್ಲಿ ವಕೀಲರು ನೀಡಿದ ದೂರನ್ನು ಸ್ವೀಕರಿಸಿ ಸ್ವೀಕೃತಿ ಪತ್ರ ನೀಡಲಾಯಿತು. ಧರ್ಮಸ್ಥಳ ಎಸ್‌ಐ ನ್ಯಾಯಾಲಯಕ್ಕೆ ಈ ಪತ್ರವನ್ನು ಕಳುಹಿಸಿ ಅನುಮತಿ ಕೇಳಿ ಬಿಎನ್‌ಎಸ್ ಸೆಕ್ಷನ್ 211/2ರಂತೆ ಕೇಸು ದಾಖಲಿಸಿಕೊಂಡು ಮತ್ತೆ ವಕೀಲರಿಗೆ ಮಾಹಿತಿ ನೀಡಿ ಪಾಪಪ್ರಜ್ಞೆ ಕಾಡಿದ ವ್ಯಕ್ತಿಯನ್ನು ಕರೆದುಕೊಂಡು ಬರುವಂತೆ ಸೂಚನೆ ನೀಡಿದರು.

ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದರು. ಇದು ಅರಿವಿಗೆ ಬರುತ್ತಲೇ ವಕೀಲರು ಜುಲೈ 11ರಂದು ಮಂಗಳೂರಿನ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರಾಗಿ ಧರ್ಮಸ್ಥಳ ಗ್ರಾಮದಲ್ಲಿ ಹೂತಿಡಲಾಗಿದ್ದ ನೂರಾರು ಮೃತ ದೇಹಗಳನ್ನು ಮೇಲೆತ್ತಲು ಅವಕಾಶವಾಗುವಂತೆ ಮಾಹಿತಿ ನೀಡುತ್ತಿರುವ ದೂರುದಾರನಿಗೆ 2018ರ ಸಾಕ್ಷಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ರಕ್ಷಣೆ ನೀಡಬೇಕು ಎಂದು ಕೋರಿಕೊಂಡರು. ಈ ಬಗ್ಗೆ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಸೂಕ್ತ ಆದೇಶ ಹೊರಡಿಸಿತು. ಅದರಂತೆ ಜುಲೈ 11ರಂದು ಸಂಜೆ 4. 30ಕ್ಕೆ ದೂರುದಾರನನ್ನು ಮುಖಕ್ಕೆ ಮಾಸ್ಕ್ ಹಾಕಿ ಬೆಳ್ತಂಗಡಿ ನ್ಯಾಯಾಲಯಕ್ಕೆ ವಕೀಲರು ಹಾಜರುಪಡಿಸಿದರು. ಆತ ನ್ಯಾಯಾಧೀಶರ ಎದುರಿಗೆ ಮಾನವ ತಲೆಬುರುಡೆಯನ್ನು ಹಾಜರುಪಡಿಸಿದ್ದ. ನ್ಯಾಯಾಧೀಶರ ಎದುರಿಗೆ ಬಿಎನ್ ಎಸ್‌ಎಸ್ 183ರ ಅನ್ವಯ ಹೇಳಿಕೆ ನೀಡಿದ್ದ. ತದನಂತರ ಆತನನ್ನು ಬೆಳ್ತಂಗಡಿ ವೃತ್ತ ನಿರೀಕ್ಷಕರ ಕಚೇರಿಗೆ ಕರೆದೊಯ್ದು ವಿವರವಾದ ಹೇಳಿಕೆ ದಾಖಲಿಸಲಾಯಿತು. ಆತ ತಂದಿದ್ದ ತಲೆಬುರುಡೆಯನ್ನು ಮಹಜರು ಮೂಲಕ ಸ್ವಾಧೀನಪಡಿಸಿ ಪರೀಕ್ಷೆಗಾಗಿ ಎಫ್‌ಎಸ್‌ಎಲ್ ತಜ್ಞರ ವಶಕ್ಕೆ ನೀಡಲಾಯಿತು. ದೂರುದಾರರನ್ನು ವಕೀಲರೊಂದಿಗೆ ಕಳುಹಿಸಲಾಯಿತು.

**ನ್ಯಾಯಾಲಯಕ್ಕೆ ಅರ್ಜಿ**

ದೂರುರಾರ 183 ಸ್ಟೇಟ್‌ಮೆಂಟ್ ನೀಡಿದ್ದರಿಂದ ಮತ್ತು ಆತನ ಹೆಚ್ಚಿನ ವಿಚಾರಣೆ ಅಗತ್ಯವಿರುವುದರಿಂದ ಜಿಲ್ಲಾ ಎಸ್ಪಿ ಡಾ. ಕೆ. ಅರುಣ್ ಅವರ ಸೂಚನೆಯಂತೆ ಧರ್ಮಸ್ಥಳ ಸಬ್ ಇನ್‌ಸ್ಪೆಕ್ಟರ್ ಸಮರ್ಥ್ ಗಾಣಿಗೇರ ಅವರು ದೂರುದಾರನ ಮಂಪರು ಪರೀಕ್ಷೆಗೆ ಅನುಮತಿ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಇದನ್ನು ಪರಿಶೀಲಿಸಿದ ನ್ಯಾಯಾಲಯವು ಆದೇಶಕ್ಕೆ ಕಾದಿರಿಸಿತು. ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯ

☞ 5

## ಬುರುಡೆ ಕಥೆಯಲ್ಲಿ ತಿಮರೋಡಿಯ ಪಾತ್ರ

ಬುರುಡೆಯ ಕಥೆ ಸೃಷ್ಟಿಯಾದದ್ದೇ ಉಜಿರೆಯ ಸಮೀಪದ ಮಹೇಶ್ ಶೆಟ್ಟಿ ತಿಮರೋಡಿಯ ಮನೆಯಲ್ಲಿ. ಇದರ ಪ್ರಮುಖ ಪಾತ್ರಧಾರಿಗಳು ಎಂದರೆ ಪೊಲೀಸ್ ಇಲಾಖೆಯಿಂದ ವಜಾಗೊಂಡ ಸಬ್ ಇನ್‌ಸ್ಪೆಕ್ಟರ್ ಗಿರೀಶ್ ಮಟ್ಟಣ್ಣನವರ್, ಟಿ. ಜಯಂತ್, ಸೌಜನ್ಯ ಮಾವ ವಿಠಲಗೌಡ, ಯುಟ್ಯೂಬರ್‌ಗಳಾದ ಅಜೇಯ್ ಅಂಚನ್, ಎಂ.ಡಿ. ಸಮೀರ್ ಹಾಗೂ ಇತರರು. 2 ವರ್ಷಗಳ ಹಿಂದೆ ಚೆನ್ನಯ್ಯ ಉಜಿರೆಯ ಶೌಚಾಲಯದ ಉಸ್ತುವಾರಿ ನೋಡಿಕೊಂಡಿದ್ದ. ಇತನಿಗೆ ವಿಠಲ ಗೌಡ ಆಕಸ್ಮಿಕವಾಗಿ ಸಿಕ್ಕಿದ್ದ, ಈತನನ್ನು ಬಳಸಿಕೊಂಡು ಅಸ್ಥಿಪಂಜರ ಶೋಧ ನಡೆಸಬಹುದು ಎಂಬ ಕ್ರಿಮಿನಲ್ ಐಡಿಯಾ ಹೊಳೆದದ್ದೇ ವಿಠಲ ಗೌಡನಿಗೆ. ಆತ ಚೆನ್ನಯ್ಯನನ್ನು ತಿಮರೋಡಿಯ ಮನೆಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದ್ದ. ಆ ಸಂದರ್ಭದಲ್ಲಿ ಚೆನ್ನಯ್ಯ ಧರ್ಮಸ್ಥಳ ಸುತ್ತಮುತ್ತ ಕಾಡಿನಲ್ಲಿ 400ಕ್ಕೂ ಹೆಚ್ಚು ಮೃತದೇಹಗಳನ್ನು ಹೂತಿದ್ದೇನೆ ಎಂದೂ, ಅದರಲ್ಲಿ ಹೆಂಗಸರು ಮತ್ತು ಬಾಲಕಿಯರ ಮೃತದೇಹಗಳು ಇದೆ ಎಂದೂ ಹೇಳಿದ್ದ. ಆ ಮೃತದೇಹಗಳನ್ನು ಕಾನೂನು ರೀತಿಯಲ್ಲಿ ಪೊಲೀಸ್ ಕೇಸು ದಾಖಲಾಗಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರವೇ ಹೂತಿಡಲಾಗಿದೆ ಎಂದೂ ತಿಳಿಸಿದ್ದ. ಇದೇ ವಿಷಯವನ್ನು ಧರ್ಮಸ್ಥಳದ ವಿರುದ್ಧವಾಗಿ ಗುರಾಣಿಯಾಗಿ ಬಳಸಬಹುದು ಎಂದು ಆಲೋಚನೆ ಮಾಡಿದ್ದೇ ಗಿರೀಶ್ ಮಟ್ಟಣ್ಣನವರ್. ಆತ ಒಂದು ವರ್ಷ ಪೊಲೀಸ್ ತರಬೇತಿ, ಒಂದು ವರ್ಷ ಪ್ರೊಬೆಷನರಿ ಅವಧಿ ಮತ್ತು ಒಂದು ವರ್ಷ ಗುಲ್ಬರ್ಗ ಜಿಲ್ಲೆಯ ನರೋನ ಪೊಲೀಸ್ ಠಾಣೆಯಲ್ಲಿ ಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿದ್ದ ಮತ್ತು ಕಾನೂನಿನ ಸ್ಪಷ್ಟವಾದ ತಿಳುವಳಿಕೆ ಇತ್ತು. ಮೃತದೇಹಗಳನ್ನು ಹೂತು 11 ವರ್ಷಗಳು ಕಳೆದು ಹೋಗಿದ್ದರಿಂದ ಪೂರ್ತಿ ಅಸ್ಥಿಪಂಜರ ಸಿಕ್ಕುವ ಸಾಧ್ಯತೆಗಳಿಲ್ಲ, ಲಭ್ಯ ಮೂಳೆಗಳು ಸಿಕ್ಕಿದರೂ ಮರಣದ ಕಾರಣಗಳು ಪತ್ತೆಯಾಗುವುದಿಲ್ಲ ಮತ್ತು ಮಹಿಳೆಯ ಮೂಳೆಗಳು ಸಿಕ್ಕಿದರೆ ಅವರನ್ನು ಅತ್ಯಾಚಾರ ಮಾಡಿ ಕೊಲೆಗೈಯ್ಯಲಾಗಿದೆ ಎಂದು ಆರೋಪ ಹೊರಿಸಿ, ಧರ್ಮಸ್ಥಳದವರ ತಲೆಗೆ ಸುಲಭದಲ್ಲಿ ಕಟ್ಟಬಹುದು ಅದನ್ನು ಜನರು ನಂಬುವಂತಹ ರೀತಿಯಲ್ಲಿ ವೀಡಿಯೊ ಮಾಡಿ ಯೂಟ್ಯೂಬ್‌ನಲ್ಲಿ ಹರಿಯ ಬಿಡಬಹುದು ಎಂದು ಆಲೋಚಿಸಿದ್ದ. ಅದಕ್ಕಾಗಿ ಬೆಟ್ಟಿಂಗ್ ಪ್ರಮೋಷನ್ ಮಾಡುತ್ತಿದ್ದ ಮೂಲತಃ ಬಳ್ಳಾರಿಯವನಾಗಿದ್ದು ಬೆಂಗಳೂರಿನ ಹೊರ ವಲಯದ ಬನ್ನೇರುಘಟ್ಟ ಬಳಿ ವಾಸವಿದ್ದ ಧೂತ ಎಂಬ ಯೂಟ್ಯೂಬ್ ಚಾನೆಲ್‌ನ ಸಮೀರ್ ಎಂ. ಡಿ. ಎಂಬಾತನನ್ನು ಸಂಪರ್ಕಿಸಿ ಆತನ ಮೂಲಕ ವೀಡಿಯೊ ಒಂದನ್ನು ಚಿತ್ರೀಕರಿಸಿ ಹರಿಯ ಬಿಡಲಾಯಿತು. ಅದನ್ನು 127 ಇನ್‌ಸ್ಟಾಗ್ರಾಂ ಪೇಜ್‌ಗಳ ಮೂಲಕ ಮಾರ್ಕೆಟಿಂಗ್ ಮಾಡಲಾಯಿತು. ತನ್ಮೂಲಕ ಧರ್ಮಸ್ಥಳದ ವಿರುದ್ಧ ಋಣಾತ್ಮಕ ವಾತಾವರಣವನ್ನು ಸಾರ್ವಜನಿಕವಾಗಿ ಸೃಷ್ಟಿಸಲಾಯಿತು. ಈ ಎಲ್ಲಾ ಚಟುವಟಿಕೆಗಳಿಗೆ ಸ್ವತಃ ಮಹೇಶ್ ಶೆಟ್ಟಿ ತಿಮರೋಡಿಯೇ ಫಂಡಿಂಗ್ ಮಾಡಿದ್ದರು. ಇವರ ಈ ಖತರ್‌ನಾಕ್ ಪ್ಲಾನ್ ಸರಿಯಾದ ರೀತಿಯಲ್ಲೇ ಕಾರ್ಯ ರೂಪಕ್ಕೆ ಬಂದಿತ್ತು. ಸರಕಾರವೂ ಸ್ಪಂದಿಸಿತ್ತು. ಆದರೆ ಅಗೆಯಲಾದ ಗುಂಡಿಗಳಲ್ಲಿ ಮೂಳೆಗಳು ಸಿಗದೆ ಎಲ್ಲಾ ಪ್ರಯತ್ನಗಳು ನೇತ್ರಾವತಿ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತಾಯಿತು. ☯



ಮಹೇಶ್ ಶೆಟ್ಟಿ ತಿಮರೋಡಿ

4 ☞

ಮೂರ್ತಿ ಗೋಪಾಲ ಗೌಡ ನೇತೃತ್ವದ ಪ್ರಗತಿಪರರ ನಿಯೋಗವೊಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿಯಾಗಿ ಇಡೀ ಪ್ರಕರಣದ ಸಮಗ್ರ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸುವಂತೆಯೂ ಅದರ ನೇತೃತ್ವವನ್ನು ಎಡಿಜಿಪಿ ಪ್ರಣವ್ ಮೊಹಂತಿಯವರೇ ವಹಿಸಬೇಕು ಎಂಬ ಕೋರಿಕೆ ಸಲ್ಲಿಸಿತು. ಮುಖ್ಯಮಂತ್ರಿಯವರು ತಕ್ಷಣವೇ ಎಸ್‌ಐಟಿ ರಚಿಸುವ ತೀರ್ಮಾನವನ್ನು ಕೈಗೊಂಡು ಆದೇಶ ಹೊರಡಿಸಿದರು.

ಎಡಿಜಿಪಿ ಪ್ರಣವ್ ಮೊಹಂತಿ, ಡಿಐಜಿ ಎಂ. ಎನ್. ಅನುಚೇತ್, ಎಸ್ಪಿಯವರಾದ ಜಿತೇಂದ್ರ ದಯಾಮ ಸಹಿತ 25 ಅಧಿಕಾರಿಗಳ ತಂಡವನ್ನು ರಚೊಸಲಾಯಿತು. ಈ ತಂಡಕ್ಕೆ ಮಂಗಳೂರಿನ ಮಲ್ಲಿಕಟ್ಟೆಯಲ್ಲಿರುವ ಸರಕಾರಿ ಬಂಗಲೆ ಮತ್ತು ಬೆಳ್ತಂಗಡಿ ಪೊಲೀಸ್ ಠಾಣೆಯ ಪಕ್ಕದಲ್ಲಿರುವ ನೂತನವಾಗಿ ನಿರ್ಮಾಣಗೊಂಡ ಪೊಲೀಸ್ ವಸತಿಗೃಹದಲ್ಲಿ ಕಚೇರಿ ವ್ಯವಸ್ಥೆ ಕಲ್ಪಿಸಲಾಯಿತು. ಈ ತಂಡವು ಜುಲೈ 27ರಂದು ಅಧಿಕೃತವಾಗಿ ಕಾರ್ಯಾರಂಭಿಸಿ ದೂರುದಾರನಿಗೆ ನೋಟೀಸು ನೀಡಿತು. ಅದರಂತೆ ಜುಲೈ 28ರಂದು ದೂರುದಾರ ಗುರುತಿಸಿದ 13 ಸ್ಥಳಗಳನ್ನು ಮಾರ್ಕ್ ಮಾಡಲಾಯಿತು. ಮರುದಿನವೇ ಹೂತಿಡಲಾಗಿದ್ದ ಮೃತದೇಹದ ಅಗೆಯುವ ಕಾರ್ಯ ಆರಂಭವಾಯಿತು. ಮೊದಲ ಗುಂಡಿಯಿಂದ ಐದನೇ ಗುಂಡಿಯುವರೆಗೆ ಯಾವುದೇ ಮೃತದೇಹದ ಕುರುಹುಗಳು ಪತ್ತೆಯಾಗಲಿಲ್ಲ, 6ನೇ ಗುಂಡಿಯಲ್ಲಿ ಗಂಡಸಿನ ಮೂಳೆಗಳು ಪತ್ತೆಯಾಯಿತು. 7ರಿಂದ 12ರ ತನಕ ಗುಂಡಿ ಅಗೆದರೂ ಫಲಿತಾಂಶ ಶೂನ್ಯ. 13ನೇ ಗುಂಡಿಯನ್ನು ಅಗೆಯಲು ತಾಂತ್ರಿಕ ಅಡಚಣೆ ಸೃಷ್ಟಿಯಾಯಿತು. ದೂರುದಾರ ಮತ್ತೆ ಒಂದೈದು ಸ್ಥಳಗಳಿಗೆ ಕರೆದೊಯ್ದಾಗ ಮರದ ಬುಡದಲ್ಲಿ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪುರುಷನ ಅಸ್ಥಿಪಂಜರ ಸಿಕ್ಕಿತು. ಉಳಿದ ಗುಂಡಿಗಳು ಪ್ರಯೋಜನಕ್ಕೆ ಬರಲಿಲ್ಲ, ಬಹು ನಿರೀಕ್ಷಿತ 13ನೇ ಗುಂಡಿ ಅಗೆಯುವ ಸಂದರ್ಭದಲ್ಲಿ ಜಿಪಿಆರ್ ಯಂತ್ರವನ್ನು ಬಳಸಿ ಶೋಧಿಸಲಾಯಿತು. ಯಾವುದೇ ಕುರುಹು ಪತ್ತೆಯಾಗಲಿಲ್ಲ, ಧರ್ಮಸ್ಥಳದ ರತ್ನಗಿರಿ ಬೆಟ್ಟದ ತಪ್ಪಲಿನಲ್ಲಿ ಮತ್ತು ಕನ್ಯಾಡಿಯ ಖಾಸಗಿ ಸ್ಥಳದಲ್ಲಿ ಅಗೆದರೂ ಫಲಕಾರಿಯಾಗದಿದ್ದಾಗ ಎಸ್‌ಐಟಿ ಮೇಲೆ ಒತ್ತಡ ಬಿತ್ತು. ರಾಜ್ಯ ವಿಧಾನ ಸಭೆಯಲ್ಲಿ ಪಕ್ಷ ಬೇಧ ಮರೆತು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲಿಗೆ ಗುಂಡಿ ಪುರಾಣ ನಿಂತಿತು.


ಗಿರೀಶ್ ಮಟ್ಟಣ್ಣನವರ್

### ಅನಾಮಿಕ ಸೆರೆ

ಎಸ್‌ಐಟಿ ತಂಡ ದೂರುದಾರನನ್ನೇ ಮತ್ತಷ್ಟು ವಿಚಾರಣೆಗೆ ಗುರಿಪಡಿಸಿತು. ಆತ ನೀಡಿದ ಹೇಳಿಕೆಯಲ್ಲಿನ ವೈರುಧ್ಯಗಳನ್ನು ಗಮನಿಸಿ ಆತನನ್ನೇ ವಶಕ್ಕೆ ತೆಗೆದುಕೊಂಡಿತು. ಆತನಿಗೆ ನೀಡಲಾಗಿದ್ದ ಸಾಕ್ಷಿ ಸಂರಕ್ಷಣಾ ಕಾಯ್ದೆಯ ಅನುಕೂಲತೆಯನ್ನು ವಾಪಾಸು ಪಡೆಯಲಾಯಿತು. ಆತನ ಮಾಸ್ಕ್ ಕಳಚಲಾಯಿತು. ಆತ ಮಂಡ್ಯ ಜಿಲ್ಲೆಯ ಚಿಕ್ಕಬಳ್ಳಿ ಗ್ರಾಮದ ಚೆನ್ನಯಾನೆ ಚೆನ್ನಯ್ಯ ಎಂದು ಬಯಲಾಯಿತು. ಈತ 1995ರಿಂದ 2014 ಡಿಸೆಂಬರ್ ತನಕ ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. 2014ರ ನಂತರ ಸ್ವಲ್ಪ ಸಮಯ ನೇತ್ರಾವತಿ ಸ್ನಾನಘಟ್ಟದ ಬಳಿಯ ಸುಪ್ರಭಾತ ಎಂಬ ಹೆಸರಿನ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದ. ಅದು ಸೌಜನ್ಯಳ ಮಾವ ವಿಠಲ ಗೌಡ ಅವರ ಹೊಟೇಲ್. ಇಲ್ಲಿ ಕೆಲಸ ಮಾಡುತ್ತಿದ್ದ ನರಸಿಂಹ ಎಂಬ ಕೇರಳ ಮೂಲದ ವ್ಯಕ್ತಿ ಮೃತಪಟ್ಟ ಸಂದರ್ಭದಲ್ಲಿ ಆತನ ಮೃತ ದೇಹವನ್ನು ವಿಠಲ ಗೌಡ ಮತ್ತು ಚೆನ್ನಯ್ಯ ಸೇರಿ ಹೂತು ಹಾಕಿದ್ದರು. ತದನಂತರ ಆತ ಊರಿಗೆ ಹೋಗಿ ತಮಿಳುನಾಡಿನ ಈರೋಡ್‌ನ ಕೈಮಗ್ಗದ ಬಟ್ಟೆ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ. 2023ರಲ್ಲಿ ಆತನ ಸಂಬಂಧಿ ರತ್ನ ಎಂಬಾಕೆ ಕರೆ ಮಾಡಿ ಉಜಿರೆಗೆ ಕರೆಸಿಕೊಂಡಿದ್ದಳು. ಉಜಿರೆ ಬಸ್ ನಿಲ್ದಾಣದ ಪಕ್ಕದ ಸಾರ್ವಜನಿಕ ಶೌಚಾಲಯದ ನಿರ್ವಹಣೆ ಮಾಡುತ್ತಿದ್ದ. ತದನಂತರ ಊರಿಗೆ ಹೋದವನು ಮತ್ತೆ ಬಂದಿರುವುದು ವಕೀಲರ ರಕ್ಷಣೆಯಲ್ಲಿ ನ್ಯಾಯಾಲಯಕ್ಕೆ. ಇದೀಗ ಎಸ್‌ಐಟಿಯಿಂದ ವಿಚಾರಣೆಗೆ ಒಳಪಡುತ್ತಿದ್ದಾನೆ. ☯

# ಮ್ಯಾಜಿಕ್ ಅಜ್ಜಿಯ ವೃತ್ತಾಂತವೇನು?

ಧರ್ಮಸ್ಥಳದ ಸುತ್ತಮುತ್ತ ಕಾಡಿನಲ್ಲಿ ಹೂತಿಡಲಾಗಿದ್ದ ಮೃತದೇಹಗಳನ್ನು ಅಗೆಸುವ ಯೋಜನೆ ರೂಪುಗೊಂಡಿತ್ತಾದರೂ ಅದಕ್ಕೊಂದು ಬಲ ಬರುವಂತೆ ದೂರು ನೀಡುವಂತಹ ವ್ಯಕ್ತಿ ಅಥವಾ ಮಹಿಳೆಯ ಅಗತ್ಯ ಇತ್ತು. ಇದೇ ಸಂದರ್ಭದಲ್ಲಿ ಮಣಿಪಾಲ ಸಮೀಪದ ಪರೀಕದ ಸುಜಾತ ಮಧ್ಯಸ್ಥ ಎಂಬ ವೃದ್ಧೆ ಧರ್ಮಸ್ಥಳಕ್ಕೆ ಬಂದು ತನ್ನ ಪೂರ್ವಜರ ಜಾಗದ ಹಣಕ್ಕಾಗಿ ಡಿಮ್ಯಾಂಡ್ ಇಡಲು ಧರ್ಮಸ್ಥಳದ ವಿರುದ್ಧ ಹೋರಾಟ ಮಾಡುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿಯನ್ನು ಸಂಪರ್ಕಿಸಿದ್ದರು. ಈ ವೃದ್ಧೆಯನ್ನೇ ಬಳಸಿಕೊಂಡು ಧರ್ಮಸ್ಥಳದ ಬುಡಕ್ಕೆ ಆಟಂಬಾಂಬ್ ಇಡಲು ಗಿರೀಶ್ ಮಟ್ಟಣ್ಣನವರ್ ಆಲೋಚನೆ ಮಾಡಿದ್ದರು. ಅಲ್ಲಿಯೇ ಇದ್ದಂತಹ ಯುನೈಟೆಡ್ ಮೀಡಿಯಾ ಯೂಟ್ಯೂಬ್ ಚಾನೆಲ್‌ನ ಅಭಿಷೇಕ್ ಎಂಬಾತ ಸಂದರ್ಶನ ಮಾಡಿದ್ದ. 3 ತಿಂಗಳ ಹಿಂದೆ ಈ ಸಂದರ್ಶನ ಪ್ರಸಾರ ಆಗಿತ್ತು. ಆಗಲೇ ಈ ಸುಜಾತ ಭಟ್‌ನ ಹಿನ್ನೆಲೆಯನ್ನು ಪರಿಶೀಲನೆ ಮಾಡಲಾಗಿತ್ತು. ಈ ಸುಜಾತ ಭಟ್ ಪರೀಕದವರು.



ಸುಜಾತ ಭಟ್

ಪರೀಕ ನಾರಾಯಣ ಉಪಾಧ್ಯಾಯ ಅವರು ಇವರಿಗೆ ಚಿಕ್ಕಪ್ಪ ಆಗಬೇಕು. ನಾರಾಯಣ ಉಪಾಧ್ಯಾಯ ಅವರು ಹಲವು ವರ್ಷಗಳ ಹಿಂದೆ ದರ್ಮಸ್ಥಳದಲ್ಲಿ ಕಾರು ಚಾಲಕರಾಗಿದ್ದವರು. ತದನಂತರ ಬೆಂಗಳೂರಿಗೆ ಹೋಗಿ ಹೋಟೇಲ್ ಉದ್ಯಮಿಯಾಗಿ ಕೋಟ್ಯಂತರ ರೂ. ದುಡಿದಿದ್ದರು. ಅವರಿಗೆ ನವಕೋಟಿ ನಾರಾಯಣ ಎಂಬ ಹೆಸರೂ ಇತ್ತು. ಅವರ ಅಣ್ಣ ಪರೀಕದಲ್ಲಿ ಹಿರಿಯರ ಬಳುಬಳಿಯಾಗಿ ಬಂದಿದ್ದಂತಹ ಸುಮಾರು 12 ಎಕರೆ ಜಾಗದಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರು ಮತ್ತು ಕುಟುಂಬದ ದೇವಸ್ಥಾನವನ್ನು ನಿರ್ವಹಿಸುತ್ತಿದ್ದರು. ಇವರಿಗೆ 4 ಹೆಣ್ಣು, 2 ಗಂಡು ಮಕ್ಕಳು. ಆ ಪೈಕಿ ಎರಡನೇಯವರಾದ ಸುಜಾತ ತಾನು 10ನೇ ತರಗತಿಯಲ್ಲಿ ವ್ಯಾಸಾಂಗ ಮಾಡುತ್ತಿದ್ದಾಗ ಯುವಕನೊಬ್ಬನ ಸಂಪರ್ಕಕ್ಕೆ ಬಂದು ಗರ್ಭಿಣಿಯಾಗಿದ್ದಳು. ಈ ವಿಚಾರ ಮನೆಯವರಿಗೆ ತಿಳಿದು ಆಕೆಯನ್ನು ಶೃಂಗೇರಿಯ ಸಂಬಂಧಿಕರ ಮನೆಯಲ್ಲಿ ಇರಿಸಿ ಗರ್ಭಪಾತ ಮಾಡಿಸಲಾಗಿತ್ತು ಮತ್ತು ಭ್ರೂಣವನ್ನು ಹೆಬ್ರಿ ಸಮೀಪದ ಸೀತಾ ನದಿಯಲ್ಲಿ ಬಿಸಾಡಲಾಗಿತ್ತು. ನಂತರ ಬೈಲೂರಿನ ಸಂಬಂಧಿಕರ ಆಸ್ಪತ್ರೆಯಲ್ಲಿ ಇದ್ದು, ಚೇತರಿಸಿಕೊಂಡಿದ್ದಳು. ಅಲ್ಲಿಂದ ಮನೆಗೆ ಬಂದ ಸುಜಾತ ಮತ್ತೆ ನಾಪತ್ತೆಯಾಗಿದ್ದಳು. ಮನೆಮಂದಿ ಹುಡುಕಿದಾಗ ಬ್ರಹ್ಮಾವರದಲ್ಲಿ ಪತ್ತೆಯಾಗಿದ್ದಳು. ಮೂರನೇ ಬಾರಿ ಮನೆಯಿಂದ ನಾಪತ್ತೆಯಾದಾಗ ಮನೆಮಂದಿ ಆಕೆಯನ್ನು ಬಿಟ್ಟಿದ್ದರು. ಆಕೆ ಉಡುಪಿ ಸಿಟಿ ಬಸ್ ನಿಲ್ದಾಣದ ಪಾಲಾಗಿದ್ದಳು. 1999ರಲ್ಲಿ ಆಕೆಯನ್ನು ಉಡುಪಿ ಪೊಲೀಸರು ಹಿಡಿದು ನಿಟ್ಟೂರಿನ ಮಹಿಳಾ ಸಾಂತ್ವನ ಕೇಂದ್ರಕ್ಕೆ ಸೇರಿಸಿದ್ದರು. ಅಲ್ಲಿಂದ ಪರಾರಿಯಾಗಿದ್ದ ಸುಜಾತ ಮತ್ತೆ ಸಿಟಿ ಬಸ್‌ನಿಲ್ದಾಣಕ್ಕೆ ಬಂದು ಅಲ್ಲಿ ಬಸ್ ಏಜೆಂಟ್ ಆಗಿದ್ದ ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆಯ ಪ್ರಭಾಕರ್ ಬಾಳಿಗ ಎಂಬವರ ಸಂಪರ್ಕಕ್ಕೆ ಬಂದು ಅವರ ಮನೆ ಸೇರಿದ್ದಳು. ಬಾಳಿಗಾ ಅವರ ಪತ್ನಿ ಮಗಳೊಂದಿಗೆ ತೊರೆದಿದ್ದರು. ವೃದ್ಧ ತಾಯಿ ಇದ್ದರು. ಅವರನ್ನು ನೋಡಿಕೊಳ್ಳಲೆಂದು ಸುಜಾತ ಅವರ ಮನೆ ಸೇರಿದ್ದಳು. ಆದರೆ ಆಕೆ ಆ ಮನೆ ಸೇರಿದ ಒಂಭತ್ತೇ ದಿನದಲ್ಲಿ ಬಾಳಿಗರ ತಾಯಿ ಗೊಟಕ್ ಅಂದಿದ್ದರು. 2005ರ ವರೆಗೆ ಅವರ ಮನೆಯಲ್ಲಿದ್ದ ಸುಜಾತ ಬೆಂಗಳೂರಿಗೆ ಹೋಗಿ ತನ್ನ ಅಕ್ಕನ ಗಂಡನ ಸಹಾಯದಿಂದ ಸ್ಥಳೀಯ ಆಸ್ಪತ್ರೆಯೊಂದರಲ್ಲಿ ಆಯಾ ಕೆಲಸಕ್ಕೆ ಸೇರಿದ್ದಳು. ಅಲ್ಲಿ ಚಿಕಿತ್ಸೆಗಾಗಿ ಬರುತ್ತಿದ್ದ ಬಿಇಎಲ್‌ನ ನಿವೃತ್ತ ನೌಕರ ರಂಗಪ್ರಸಾದ್ ಅವರ ಪರಿಚಯವಾಗಿ ಅವರ ಮನೆ ಸೇರಿದ್ದಳು. 2025ರ ಜನವರಿಯಲ್ಲಿ ರಂಗಪ್ರಸಾದ್ ಮೃತಪಟ್ಟಿದ್ದು, ತದನಂತರ ತನ್ನ ಹಿರೀಕರ ಪರೀಕದ ಆಸ್ತಿಯಲ್ಲಿ ಪಾಲುಬೇಕು ಎಂದು ಧರ್ಮಸ್ಥಳಕ್ಕೆ ಬಂದು ತಿಮರೋಡಿಯವರ ಸಂಪರ್ಕಕ್ಕೆ ಬಂದಿದ್ದಳು. ಆ ಜಾಗವನ್ನು ನಾರಾಯಣ ಉಪಾಧ್ಯಾಯ ಅವರು ಧರ್ಮಸ್ಥಳಕ್ಕೆ ದಾನವಾಗಿ ಕೊಟ್ಟಿದ್ದು, ಈ ಜಾಗದಲ್ಲಿ ಧರ್ಮಸ್ಥಳದವರು ಸೌಖ್ಯವನ ಎಂಬ ಹೆಸರಿನಲ್ಲಿ ಅಂತಾರಾಷ್ಟ್ರೀಯ ದರ್ಜೆಯ ಪ್ರಕೃತಿ ಮತ್ತು ಯೋಗ ಚಿಕಿತ್ಸಾ ಕೇಂದ್ರವನ್ನು ನಡೆಸುತ್ತಿದ್ದಾರೆ.

ಇಂತಹ ಅಜ್ಜಿಯನ್ನು ಬಳಸಿಕೊಂಡಂತಹ ತಿಮರೋಡಿಯ ಬುರುಡೆ ಗ್ಯಾಂಗ್ ಸುಂದರವಾದ ಕಥೆಯೊಂದನ್ನು ಕಟ್ಟಿದರು. ಅದೇನೆಂದರೆ ಸುಜಾತ ಭಟ್ ಕೊಲ್ಕತ್ತಾದ ಸಿಬಿಐ ಕಚೇರಿಯಲ್ಲಿ ಸ್ಟೆನೋಗ್ರಾಫರ್. ಆಕೆಗೆ ಅನಿಲ್ ಭಟ್ ಎಂಬವರೊಂದಿಗೆ ಮದುವೆಯಾಗಿತ್ತು. ಅನನ್ಯ ಭಟ್ ಎಂಬ ಮಗಳಿದ್ದಳು. ಆಕೆ 2003ರಲ್ಲಿ ಮಣಿಪಾಲದ ಕೆಎಂಸಿ ಮೆಡಿಕಲ್ ಕಾಲೇಜಿನಲ್ಲಿ ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿ. 2003ರಲ್ಲಿ ತನ್ನ ಸ್ನೇಹಿತೆಯರೊಂದಿಗೆ ಧರ್ಮಸ್ಥಳಕ್ಕೆ ಬಂದ ಸಂದರ್ಭದಲ್ಲಿ ನಾಪತ್ತೆಯಾಗಿದ್ದಳು. ಮಾಹಿತಿ ತಿಳಿದು ಧರ್ಮಸ್ಥಳಕ್ಕೆ ಬಂದ ಸುಜಾತ ಭಟ್ ಬೆಳ್ತಂಗಡಿ ಠಾಣೆಗೆ ದೂರು ನೀಡಲು ಹೋದಾಗ ಪೊಲೀಸರು ದೂರು ಸ್ವೀಕರಿಸಲಿಲ್ಲ, ಧರ್ಮಸ್ಥಳದಲ್ಲಿ ವಿಚಾರಿಸ ತೊಡಗಿದಾಗ ಆಕೆಯ ಮೇಲೆ ಹಲ್ಲೆ ಮಾಡಲಾಯಿತು. ಕೋಮಾ ಹಂತಕ್ಕೆ ತಲುಪಿದಾಗ ಬೆಂಗಳೂರಿಗೆ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಚೇತರಿಸಿಕೊಂಡ ಬಳಿಕ ಮತ್ತೆ ಕೊಲ್ಕತ್ತಾಗೆ ಹೋಗಿ ಕೆಲಸ ಮಾಡುತ್ತಿದ್ದರು. 2005ರಲ್ಲಿ ಸ್ವಯಂ ನಿವೃತ್ತಿ ಪಡೆದು ಬೆಂಗಳೂರಿನ ಪದ್ಮನಾಭನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ಇದೀಗ ಧರ್ಮಸ್ಥಳದಲ್ಲಿ ಹೂತಿಡಲಾಗಿದ್ದಂತಹ ಮೃತ ದೇಹಗಳನ್ನು ಹುಡುಕುವ ವಿಚಾರ ತಿಳಿದು ಧರ್ಮಸ್ಥಳ ಠಾಣೆಗೆ ಬಂದಿದ್ದು, ತನ್ನ ಮಗಳು ಅನನ್ಯ ಭಟ್‌ಳ ಅಸ್ಥಿಪಂಜರ ಸಿಕ್ಕಿದರೆ ಅದನ್ನು ತನ್ನ ಡಿಎನ್‌ಎಯೊಂದಿಗೆ ಹೋಲಿಸಿ ನೀಡಬೇಕೆಂದೂ ಅದನ್ನು ಸನಾತನ ಹಿಂದೂ ಧರ್ಮದ ಸಂಪ್ರದಾಯದಂತೆ ವಿಸರ್ಜನೆ ಮಾಡಿ ಆಕೆಗೆ ಮೋಕ್ಷ ಕಲ್ಪಿಸುವ ಉದ್ದೇಶ ಇದೆ. ಇಂತಹ ಕಥೆಯನ್ನು ಮನಮುಟ್ಟುವಂತೆ ಧೂತ ಯೂಟ್ಯೂಬ್ ಚಾನೆಲ್‌ನ ಸಮೀರ್ ಎಂ. ಡಿ. ಚಿತ್ರೀಕರಿಸಿ, ಹರಿಯಬಿಟ್ಟಿದ್ದ. ಇದು ಜನರ ಮನಸ್ಸನ್ನು ಕಲಕಿತ್ತು. ಆದರೆ ಈ ಕಥೆಯ ಬೆನ್ನಟ್ಟಿ ಹೋದಾಗ ಅಜ್ಜಿಯ ಕಥೆ ಬುರುಡೆ ಎನ್ನುವುದು ಸಾಬೀತಾಯಿತು. ಸ್ವತಃ ಅಜ್ಜಿಯೇ ಹೇಳಿದ ಕಥೆ ಸುಳ್ಳು ಎಂದು ಒಪ್ಪಿಕೊಂಡರು. ತಿಮರೋಡಿ ಮನೆಯಲ್ಲಿ ರೂಪುಗೊಂಡಂತಹ ಈ ಕಥೆಗೆ ಅಂತಿಮ ಸ್ಪರ್ಶ ನೀಡಲು ಎಸ್‌ಐಟಿ ಸಿದ್ಧತೆ ನಡೆಸುತ್ತಿದೆ. ಸುಜಾತ ಭಟ್‌ಗೆ ವಿಚಾರಣೆಗೆ ಹಾಜರಾಗಲು ನೋಟೀಸು ನೀಡಲಾಗಿದೆ. ಸಾಯುವ ಕಾಲಕ್ಕೆ ಇದೆಲ್ಲಾ ಬೇಕಿತ್ತಾ? ☯


ಸಮೀರ್

# ಷಡ್ಯಂತ್ರದಲ್ಲಿ ಯಾರ್‍ಯಾರು ಭಾಗಿ ?

ದೂರುದಾರ ಚೆನ್ನಯ್ಯನ ಇರುವಿಕೆಯ ಬಗ್ಗೆ ಆತನ ವಕೀಲರು ಪತ್ರಿಕಾ ಪ್ರಕಟಣೆ ನೀಡುವ ಒಂದು ದಿನಕ್ಕೆ ಮೊದಲು ಅಂದರೆ ಜೂನ್ 22ಕ್ಕೆ ಯುನೈಟೆಡ್ ಮೀಡಿಯಾ ಎಂಬ ಯುಟ್ಯೂಬ್ ಚಾನೆಲ್‌ನಲ್ಲಿ ವೀಡಿಯೊ ಒಂದು ಪ್ರಸಾರವಾಗಿತ್ತು. ಅಭಿಷೇಕ್ ಎಂಬ ಕೇರಳ ಮೂಲದ ಯುವಕ ಈ ವೀಡಿಯೊ ಚಿತ್ರೀಕರಿಸಿದ್ದ. ಸೌಜನ್ಯ ಪರ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಕಡಬ ಸಮೀಪದ ಇಚಿಲಂಪಾಡಿಯ ತಂಗಚ್ಚನ್ ಜಯಂತ್ ಮತ್ತು ದೇರಳಕಟ್ಟೆಯ ರವೀಂದ್ರ ಶೆಟ್ಟಿ ಎಂಬವರಿಬ್ಬರು ಮೊಬೈಲ್ ಟಾರ್ಚ್ ಬೆಳಕಿನಲ್ಲಿ ಕಾಡಿನಲ್ಲಿ ಹುಡುಕಾಡುತ್ತ ತಲೆಬುರುಡೆಯೊಂದನ್ನು ಶೋಧಿಸಿ ಅದನ್ನು ಪ್ಲಾಸ್ಟಿಕ್ ಗೋಣಿಯಲ್ಲಿ ತುಂಬಿಸುವ ವೀಡಿಯೊ ಅದಾಗಿತ್ತು. ಇದೇ ಬುರುಡೆಯನ್ನು ವಾರ್ನಿಶ್ ಮಾಡಿ ಚೆನ್ನಯ್ಯನ ಕೈಗೆ ಕೊಡಲಾಗಿತ್ತಾ ಎಂಬ ಸಂಶಯ ಇದೀಗ ಮೂಡಿದೆ. 2 ವರ್ಷಗಳ ಹಿಂದೆ ಸೌಜನ್ಯ ಪರ ಹೋರಾಟದ ಸಭೆಯೊಂದರಲ್ಲಿ ಭಾಷಣ ಮಾಡಿದ್ದ ಟಿ. ಜಯಂತ್ ಧರ್ಮಸ್ಥಳದವರು ಯಾವ್ಯಾವ ಕಾಡಿನಲ್ಲಿ ಎಷ್ಟೆಷ್ಟು ಹೆಣಗಳನ್ನು ಹೂತು ಹಾಕಿದ್ದಾರೆ ಎಂಬ ಮಾಹಿತಿ ಇದೆ, ಅದನ್ನೆಲ್ಲಾ ಹೊರಗೆ ತೆಗೆದು ಸಂಬಂಧಪಟ್ಟವರನ್ನು ಜೈಲಿಗೆ ಕಳುಹಿಸುತ್ತೇವೆ ಎಂದು ಗುಡುಗಿದ್ದ. ಇದೀಗ ಇದೇ ಬುರುಡೆಯ ಪ್ರಕರಣದಲ್ಲಿ ಸ್ವತಃ ಟಿ. ಜಯಂತನೇ ಜೈಲಿನ ಬಾಗಿಲಲ್ಲಿ ನಿಂತುಕೊಂಡಿದ್ದಾನೆ. ☯


ಟಿ. ಜಯಂತ್

# ಬ್ರೂಟಲ್ ಮರ್ಡರ್ ಇನ್ ಮಾಗನೂರ್ ಸಿದ್ದೇಶ್ವರ ಬಾರ್!

**ಬೆಳಿಗ್ಗೆ ಹೊತ್ತೇ ಕುಡಿಯೋದು, ಸಿಕ್ಕಸಿಕ್ಕವರ ಮೇಲೆ ದರ್ಪ ತೋರಿಸುವುದು, ಜಿಮ್ಮು ಗಿಮ್ಮು ಮಾಡಿ ಬಾಡಿ ಬಿಲ್ಡ್ ಮಾಡಿದ್ದೀನಿ ಅಂತ ನರಪೇತಲರಿಗೆ ಪಂಚ್ ಮಾಡೋದು... ಇವೆಲ್ಲಾ ಆರೋಗ್ಯಕ್ಕೆ ಒಳ್ಳೆಯದಲ್ಲ! ಆರೋಗ್ಯಕ್ಕಿರಲಿ, ಗ್ರಹಚಾರ ಕೆಟ್ಟರೆ ಕೆಲವೊಮ್ಮೆ ಪ್ರಾಣಕ್ಕೇ ಸಂಚಕಾರ ತರುತ್ತವೆ ಈ ಕೆಟ್ಟ ನಡೆಗಳು!! ಇದಕ್ಕೊಂದು ತಾಜಾ ಉದಾಹರಣೆ ಮಂಡ್ಯ ಜಿಲ್ಲೆ, ಮಳವಳ್ಳಿ ಹೊರವಲಯದ ಮಾಗನೂರ್‌ನಲ್ಲಿ ನಡೆದಿರೋ ಕ್ಯಾಬ್ ಡ್ರೈವರ್ ಯೋಗೇಶನ ಭೀಕರ ಕೊಲೆ!!!**

✍ ಹೆಚ್.ಕೆ. ಮಹದೇವ್



ಯೋಗೇಶ್ ಅಲಿಯಾಸ್ ಯೋಗಿ

ಮಳವಳ್ಳಿಯ ಎನ್‌ಇಎಸ್ ಬಡಾವಣೆಯ ಕ್ಯಾಬ್‌ಡ್ರೈವರ್ ಯೋಗೇಶ ತನ್ನ ಫ್ರೆಂಡ್ ಶ್ಯಾಮ್ ಜೊತೆ ಗಡದ್ದಾಗಿ ಕುಡಿದು ಮಲಗಿದ್ದ. ಬೆಳಿಗ್ಗೆ 7.15ರಲ್ಲಿ ಅವನ ಮೊಬೈಲ್‌ಗೆ ಒಂದು ಕರೆ ಬಂದಿತ್ತು. ಅವನ ಅಮ್ಮ ಸಿದ್ದಮ್ಮ ಫೋನ್ ಕಾಲ್ ರಿಸೀವ್ ಮಾಡಿ ಹಲೋ ಯಾರಪ್ಪ... ಅಂದಾಗ, ಅತ್ತಲಿನ ದನಿ, ನಾನು ಕನವೋ ... ಯೋಗಿ ಇಲ್ವಾ ಅಂದಿತ್ತು. ಆತ ತನ್ನ ಮಗನನ್ನು ಎಣ್ಣೆ ಹೊಡಿಯೋಕೆ ಕರೀತಿದ್ದಾನೆ ಅಂತ ಸಿದ್ದಮ್ಮನಿಗೆ ಚೆನ್ನಾಗಿ ಗೊತ್ತಿತ್ತು.

ಲೇ ಮೂದೇವಿ ಇಸ್ಟೊತ್ತಗೆ ಫೋನ್ ಮಾಡಿದ್ದಯಲ್ಲ... ನಿಂಗೆ ಹೇಳೋರು ಕೇಳೋರು ಯಾರೂ ಇಲ್ವಾ... ನೀ ಹಾಳಾಗೋದು ಅಲ್ದೆನನ್ ಮಗಾನು ಹಾಳ್ಮಾಡ್ತಿಯಲ್ಲೋ... ಮಡಗು ಫೋನ್ನಾ ಎಂದು ಉಗಿದಿದ್ದಾಳೆ. ಆಮೇಲೆ ಸ್ವಲ್ಪ ಹೊತ್ತು ಕಳೆದು ಮಗರಾಯನ ನಿದ್ದೆ ಮುಗಿದು ಆತ ಎದ್ದು ಸ್ನಾನ ಗೀನ ಮಾಡ್ಕೊಂಡು ಗಡದ್ದಾಗಿ ತಿಂದ ಬಳಿಕ, ಅರ್ಲಿ ಮಾರ್ನಿಂಗ್ ಫೋನ್ ಹಾಕಿದ್ದ ಗ್ಲಾಸ್ ಮೇಟ್, ಇನ್ನೊಂದಪ ಕಾಲ್ ಮಾಡಿ ಎಣ್ಣೆ ಸೇವೆಗೆ ಆಹ್ವಾನಿಸಿದ್ದಾನೆ. ಯೋಗೇಶನಿಗೆ ಕಿವಿ ನಿಗುರಿದೆ. ತಕ್ಷಣ ಜೊತೆಯಲ್ಲೇ ಇದ್ದ ಶ್ಯಾಮ್ ನನ್ನ ಕರೆದುಕೊಂಡು ಆತ ಹೇಳಿದ್ದ ಬಾರ್ ಕಡೆಗೆ ಹೊರಟಿದ್ದಾನೆ. ಅಷ್ಟೇ... ಮತ್ತೆ ಅವನು ಜೀವಂತವಾಗಿ ಮನೆಗೆ ಹಿಂತಿರುಗಿಲ್ಲ!


ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ


ಅ॥ ಎಸ್ಪಿ ತಿಮ್ಮಯ್ಯ


ಡಿವೈಎಸ್ಪಿ ಕೃಷ್ಣಪ್ಪ


ಡಿಯರ್ ರೀಡರ್ಸ್, ನಾವೀಗ ಬರೆದದ್ದು ಮಳವಳ್ಳಿ ಪಟ್ಟಣದ ಹೊರವಲಯದಲ್ಲಿರುವ ಮಾಗನೂರು ಸಿದ್ದೇಶ್ವರ ಬಾರ್‌ನಲ್ಲಿ ನಡೆದ ಯೋಗೇಶ್‌ನ ಭೀಕರ ಕೊಲೆಯ ಬಗ್ಗೆ....!

## ಪರಂಗಿ ಹಣ್ಣು ಒರೆದಂತೆ ಒರೆದು ಬಿಟ್ರು!


ಬೆಳಿಗ್ಗೆ 8.45 ರ ಸುಮಾರಿಗೆ ಮನೆ ಬಿಟ್ಟು ಸುಲ್ತಾನ್‌ಪೇಟೆ ಸಮೀಪ, ಮಾಗನೂರ್ ಗೇಟ್ ಬಳಿ ಹೊಸದಾಗಿ ಓಪನ್ ಆಗಿದ್ದ ಸಿದ್ದೇಶ್ವರ ಬಾರ್‌ಗೆ ಹೋಗಿದ್ದರು. ಅಲ್ಲೊಂದು ಕ್ಯಾಬಿನ್ ಒಳಗೆ ಕುಳಿತು ಎಣ್ಣೆ ತರಿಸಿಕೊಂಡು ಕಬಾಬು, ಬಾಡು ಭೋಜನಂಗೈಯ್ಯುತ್ತಿದ್ದಾಗ ಅಲ್ಲಿಗೆ ಮನೋಜ್‌ಕುಮಾರ ಪಟೇಲ ಮತ್ತವನ ಸ್ನೇಹಿತರು ಆಗಮಿಸಿದ್ದರು. ಅವರನ್ನು ನೋಡುತ್ತಿದ್ದಂತೆಯೇ ಯೋಗೇಶ್‌ನ ಮೀಟರ್ ಆಫ್ ಆಗಿತ್ತು. ಯಾಕೆಂದರೆ, ಅವರೆಲ್ಲ ಯಾಕೆ ಬಂದಿದ್ದಾರೆ ಎಂಬುದು ಅವನಿಗೆ ಅರ್ಥವಾಗಿತ್ತು.

ಅಂಥ ಅಜಾನುಬಾಹು ಯೋಗೇಶ ಮೆಲ್ಲಗೆ ಎದ್ದು ಅಲ್ಲಿಂದ ಎಸ್ಕೇಪ್ ಆಗಲು ಯತ್ನಿಸಿದ್ದಾನೆ. ಆದರೆ, ಮನೋಜ್ ಟೀಮ್ ದಾರಿ ಬಿಟ್ಟಿಲ್ಲ.... ಯಾಕೋ ಎದ್ದು ಹೋಗ್ತಾ ಇದ್ದೀಯ.... ಈವಾಗ ತೋರ್ಸು ನಿನ್ನ ತಾಕತ್ತು... ಎನ್ನುತ್ತಾ, ಎಲ್ಲರೂ ಅವರವರ ಜೇಬಿಂದ ಬೆನ್ನಿಂದ ಹತ್ಯಾರಗಳ ತೆಗೆದು ಸುತ್ತಲೂ ಅಟಕಾಯಿಸಿಕೊಂಡು ಸಿಕ್ಕ ಸಿಕ್ಕ ಕಡೆ ಚುಚ್ಚಲು ಆರಂಭಿಸಿದ್ದಾರೆ.

ಆ ಚಾಕು ಬಾಕುಗಳು ಅವನ ದುಂಡನೆ ಮೈಯೊಳಗೆ ಪಿಚಕ ಪಿಚಕನೇ ನುಗ್ಗಿ ಬರುತ್ತಿದ್ದಾಗ, ಆ ನೋವಿನಲ್ಲೂ ಚೀರುತ್ತಾ ಅವರೊಂದಿಗೆ ಸೆಣಸಾಡಿ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಹರಾಸಾಹಸ ಮಾಡಿದ್ದಾನೆ ಯೋಗಿ. ಅವನು ಎತ್ತ ತಿರುಗಿದರೂ ಬಿಡದೆ ಹಿಂದೆ ಮುಂದೆ ಎನ್ನದೆ ಚಕಚಕನೇ ಇರಿದು ಕಿವಿ ಕುತ್ತಿಗೆ ತೋಳು ತೊಡೆ ಎಲ್ಲಾ ಕಡೆ ಹರಿದು ಹಾಕಿಬಿಟ್ಟರಲ್ಲ....ಅಂಥ ದುಸ್ಥಿತಿಯಲ್ಲೂ ಪೈಲ್ವಾನ್ ದೇಹದ ಯೋಗಿ ಫೈಟ್ ಮಾಡ್ತನೇ ಬಾರ್‌ನಿಂದ ಹೊರಗೆ ಓಡಿದ್ದಾನೆ. ಆದರೆ, ಅಷ್ಟು ದೂರ ಓಡಿದ್ದವನು ಸುರಿಯುತ್ತಿದ್ದ ರಕ್ತ ನೋಡಿ, ಸುಸ್ತಾಗಿ ನೋವು ತಾಳಲಾರದೆ ಅಲ್ಲೇ ಅಂಗಳದಲ್ಲಿ ಬಿದ್ದುಕೊಂಡು ಒದ್ದಾಡಿದ್ದಾನೆ. ಸಿದ್ದೇಶ್ವರ ಬಾರ್ ಒಳಗಡೆ ಹೊರಗಡೆ ರಕ್ತ ಒಸರಿದೆ. ಬಾರ್ ಹುಡುಗರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅವರು ಬಂದು ರಕ್ತದ ಮಡುವಲ್ಲಿ ನಿಸ್ತೇಜನಾಗಿ ಬಿದ್ದಿದ್ದ ಯೋಗೇಶನನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸುವಷ್ಟರಸಲ್ಲಿ ಆತ ಸತ್ತು ಹೋಗಿದ್ದ...



ಸಿಪಿಐ ಮಹೇಶ್


ಪಿಎಸ್‌ಐ ರವಿಕುಮಾರ್


ಮನೋಜ್ ಅಲಿಯಾಸ್ ಪಟೇಲ

## ಮನೋಜ್ ಅ॥ ಪಟೇಲ!

ಕ್ಯಾಬ್ ಡ್ರೈವರ್ ಯೋಗೇಶನನ್ನು ಅಷ್ಟು ಭೀಕರವಾಗಿ ಕೊಂದು ಹಾಕಿದ್ದ ಹಂತಕರು ಬೇರಾರು ಆಗಿರದೆ, ಮಳವಳ್ಳಿ ಟೌನ್‌ನವರೇ ನೆರೆಹೊರೆ ಬೀದಿಯವರೇ ಆಗಿದ್ದರು. ಸಿದ್ದೇಶ್ವರ ಬಾರ್‌ನಲ್ಲಿದ್ದ ಸಿಸಿ ಟಿವಿ ಫುಟೇಜ್‌ನಲ್ಲಿ ಕೊಲೆಯ ಭೀಕರ ದೃಶ್ಯ ಹಾಗೂ ಕೊಲೆಗಾರರ ಮುಖ ಚಹರೆ ಎಲ್ಲಾ ಸ್ಪಷ್ಟವಾಗಿ ದಾಖಲಾಗಿತ್ತು. ಮಳವಳ್ಳಿ ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಮಹೇಶ್ ಮತ್ತು ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಆರೋಪಿಗಳಾದ ಕ್ಯಾಬ್ ಡ್ರೈವರ್ ಮನೋಜ್ ಕುಮಾರ್ ಅಲಿಯಾಸ್ ಪಟೇಲ, ನಂದನ್, ಗುರುಪ್ರಸಾದ್ ಅಲಿಯಾಸ್ ಡಾಲಿ, ಶ್ಯಾಮ್ ಮುಂತಾದವರನ್ನು ಬಂಧಿಸಿ ವಿಚಾರಣೆ ಮಾಡಿದಾಗ, ಇದು ಹಳೆಯ ವೈಷಮ್ಯದ ಹಿನ್ನಲೆಯಲ್ಲಿ ನಡೆದ ಕೊಲೆ ಎಂದು ತಿಳಿಯಿತು.


ಮನೋಜನ ಸ್ನೇಹಿತರಾದ ನಂದನ್, ಗುರುಪ್ರಸಾದ್ ಅಲಿಯಾಸ್ ಡಾಲಿ, ಶ್ಯಾಮ್

ಕಳೆದ ವರ್ಷ 2024ರ ಆಗಸ್ಟ್‌ನಲ್ಲಿ ಈ ಮನೋಜ ಹಲಗೂರು ಸಮೀಪ ಮುತ್ತತ್ತಿಗೆ ಹೋಗಿದ್ದಾಗ, ಅಲ್ಲಿ ಹರಕೆ ಮರಿ ಬಾಡೂಟ ಸವಿದು,ಬೀಡಿ ಸೇದಲು ಬೆಂಕಿ ಪೊಟ್ಟಣಕ್ಕಾಗಿ ಹುಡುಕುತ್ತಿದ್ದಾಗ, ಕೌಶಿಕ್ ಎಂಬುವನ

☞ 12


ಸರ್ಕಾರಿ ಆಸ್ಪತ್ರೆಯಲ್ಲಿ ಯೋಗೇಶನ ಶವ


ಸಿದ್ದೇಶ್ವರ ಬಾರ್


ಘಟನಾ ಸ್ಥಳದಲ್ಲಿ ಮಹಜರ್

# ಬೆಂಗಳೂರು ಮಹಾ ನಗರದಲ್ಲಿ ಡ್ರಗ್ಸ್ ದಂಧೆ ಬಲು ಜೋರು! ಭೀಮಚಿತ್ರದ ಪೆಡ್ಲರ್ ಜೋಯಲ್ ಕಾರುಬಾರು!!

✍ ಹೆಚ್.ಕೆ. ಮಹದೇವ್


ಜೋಯಲ್ ಕಾಬೊಂಗ್

ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಲು ಪಣ ತೊಟ್ಟಿರುವ ಆಯಾ ಠಾಣೆಗಳ ಹಾಗೂ ಸಿಸಿಬಿಯ ನಾರ್ಕೊಟಿಕ್ ವಿಭಾಗದ ಪೊಲೀಸರು, ರಾಜಧಾನಿಯ ಗಲ್ಲಿ ಗಲ್ಲಿಗಳಲ್ಲೂ ಬಿಡದೆ ಮಾದಕ ವಸ್ತು ಮಾರಾಟ ಜಾಲದ ಮೇಲೆ ಭರ್ಜರಿ ಕಾರ್ಯಾಚರಣೆ ನಡೆಸಿತ್ತಿದ್ದಾರೆ.

ಕಳೆದ ಮೇ ತಿಂಗಳೊಂದರಲ್ಲೇ ಸುಮಾರು 69 ಮಂದಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿ ಜೈಲಿಗೆ ದಬ್ಬಲಾ



ಗಿತ್ತು. ಇದೀಗ ಬೆಂಗಳೂರಿನ ವಿವಿಧ ಠಾಣೆಗಳ ಪೊಲೀಸರು ಹತ್ತಾರು ಮಂದಿ ಪೆಡ್ಲರ್‌ಗಳನ್ನು ಬಂಧಿಸಿ, ಕೋಟ್ಯಂತರ ರೂ ಮೌಲ್ಯದ ಮಾಧಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಈ ಪೈಕಿ ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿರುವ ಕಾಂಗೋ ಮೂಲದ ಡ್ರಗ್ ಪೆಡ್ಲರ್ ಜೋಯಲ್ ಕಾಬೊಂಗ್ ಮತ್ತವನ ಗೆಳತಿ ಜೋಯ್ ಸಂಡೇ ಕೇಸ್ ಸ್ವಲ್ಪ ವಿಶೇಷವಾಗಿದೆ. ಇವರಿಬ್ಬರೂ ಚಿತ್ರ ನಟರು ಎಂಬುದೇ ಆ ವಿಶೇಷ! ಬ್ರೇಕಿಂಗ್ ನ್ಯೂಸ್ ಏನೆಂದರೆ, ಜೋಯಲ್ ದುನಿಯಾ ವಿಜಯ್ ಅವರ ಭೀಮ ಚಿತ್ರದಲ್ಲಿ ಆಫ್ರಿಕನ್ ಡ್ರಗ್ ಪೆಡ್ಲರ್ ಆಗಿಯೇ ನೈಜ ನಟನೆ ಮೆರೆದಿದ್ದಾನೆ!

ಈತ ದುನಿಯಾ ವಿಜಯ್ ಗೆ ಹೇಗೆ ಸಿಂಕ್ ಆದ? ಬಹುಷಃ ಸುಧಾಮ ನಗರದ ಸ್ಲಂಗಳಲ್ಲಿ ಭೀಮ ಶೂಟಿಂಗ್ ನಡೆವಾಗ ಭೇಟಿ ಆಗಿ ತನಗೊಂದು ಪಾತ್ರ ಕೇಳಿರಬೇಕು.... ರಿಯಲೆಸ್ಟಿಕ್ ಬಯಸುವ ವಿಜಿ ಚಾನ್ಸ್ ಕೊಟ್ಟಿರಬೇಕು... ಅದಿರಲಿ, ಭೀಮ ಚಿತ್ರದ ಸಹನಟ ಜೋಯಲ್ ಕಾಬೊಂಗ್ ಮತ್ತವನ ಗೆಳತಿ ಜೋಯಲ್ ಸಂಡೇಯನ್ನು ಬಂಧಿಸಿರುವ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು, ಐದು ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ!

ಕಾಂಗೋ ಮೂಲದ ಜೋಯಲ್ ವಿದ್ಯಾರಣ್ಯಪುರದಲ್ಲಿ ಬಾಡಿಗೆ ರೂಮ್ ಮಾಡಿಕೊಂಡು ನೆಲೆಸಿದ್ದ. ಜೆಪಿ ನಗರದ ಪುಟ್ಟೇನಹಳ್ಳಿಯಲ್ಲಿದ್ದ ಜೋಯ್ ಸಂಡೇ ಈತನ ಗರ್ಲ್ ಫ್ರೆಂಡ್. ಜೋಯಲ್ ಈಗ್ಗೆ 12 ವರ್ಷದ ಹಿಂದೆ ಇಸವಿ 2013ರಲ್ಲಿ ವಿದ್ಯಾರ್ಥಿ ವೀಸಾ ಅಡಿ ಬೆಂಗಳೂರಿಗೆ ಬಂದಿದ್ದ. ಜೋಯ್ 2022ರಲ್ಲಿ ಬಂದಿದ್ದಳು. ಇಬ್ಬರೂ ಅದ್ಯಾವ ಕಾಲೇಜ್‌ನಲ್ಲಿ ಅದೇನು ಕಿಸಿದಿದ್ದಾರೋ.... ಗೊತ್ತಿಲ್ಲ, ಇಬ್ಬರೂ ದಿವಿನಾಗಿ ಡ್ರಗ್ಸ್ ದಂಧೆ ಮಾಡಿಕೊಂಡು ಲಿವಿಂಗ್ ಟ್ಯೂಗೆದರ್ - ಬಿಂದಾಸ್ ಲೈಫ್ ಎಂಜಾಯ್ ಮಾಡುತ್ತಿದ್ದರು! ಇದರ ಮಧ್ಯೆ ಜೋಯಲ್ 'ಭೀಮ' ಸಿನಿಮಾದಲ್ಲಿಯೂ ನಟಿಸಿ ಹೆಸರು ಮಾಡಿದ್ದ!

### ಸಿನಿಮಾದಲ್ಲೂ ವಿದೇಶಿ ಪೆಡ್ಲರ್

ಅಸಲಿ ಮಾತ್ರವಲ್ಲ ಕನ್ನಡ ಚಲನಚಿತ್ರವೊಂದರಲ್ಲಿ ಸಹ ಪೆಡ್ಲರ್ ಪಾತ್ರದಲ್ಲೇ ಕಾಂಗೋ ದೇಶದ ಜೋಯಲ್ ಕಾಬೊಂಗ್ ನಟಿಸಿದ್ದ ಕುತೂಹಲಕಾರಿ ಸಂಗತಿ ಬೆಳಕಿಗೆ ಬಂದಿದೆ. ದುನಿಯಾ ವಿಜಯ್ ನಟಿಸಿ ನಿರ್ದೇಶಿಸಿದ್ದ ಭೀಮ ಸಿನಿಮಾದಲ್ಲಿ ಜೋಯಲ್ ನಟಿಸಿದ್ದ. (ಪೊಲೀಸರು ಡ್ರಗ್ ಪೆಡ್ಲರ್‌ನೊಬ್ಬನನ್ನು ಬಂಧಿಸಿದ ಬಗ್ಗೆ ಶಾಸಕರಿಗೆ ಹೇಳುವಾಗ ಖಳನಾಯಕ ಡ್ರ್ಯಾಗನ್ ಜತೆ ಜೋಯಲ್ ನಿಂತಿರುತ್ತಾನೆ) ಶೂಟಿಂಗ್ ಸ್ಪಾಟ್, ಸ್ಟುಡಿಯೋ ಸುತ್ತಿಕೊಂಡೆ ಬಣ್ಣದ ಲೋಕಕ್ಕು ಡ್ರಗ್ಸ್ ಸಪ್ಲೈ ಮಾಡಿದ್ದಾನ ಎಂಬ ಡೌಟ್ ಇದೆ! ಸದ್ಯ, ಎಲೆಕ್ಟ್ರಾನಿಕ್ ಪೊಲೀಸರು ಈತನನ್ನು ಸಖಿಯ ಸಮೇತ ಲಾಕ್ ಮಾಡಿದ್ದಾರೆ!

ಎಲೆಕ್ಟ್ರಾನಿಕ್ ಸಿಟಿ ಯಿಂದ ಬನ್ನೇರುಘಟ್ಟಕ್ಕೆ ತೆರಳುವ ರಸ್ತೆಯಲ್ಲಿ ಪೋಡು, ಮೈಲಸಂದ್ರ, ಬೆಟ್ಟದಾಸನಪುರ, ಬಿಂಗಿಪುರ, ಹೊಮ್ಮದೇವನ ಹಳ್ಳಿ, ಬಸವನಪುರ, ಕಮ್ಮನಹಳ್ಳಿ ಮುಂತಾದ ಊರುಗಳು ಬರುತ್ತವೆ. ಮೊದಲೆಲ್ಲ



ಮಹದೇವಪುರ, ಇಂದಿರಾ ನಗರ, ರಾಮಮೂರ್ತಿ ನಗರ, ಬಾಣಸವಾಡಿ, ಕೃಷ್ಣರಾಜ ಪುರದ ಕಡೆಗಳಲ್ಲಿ ಗುಂಪು ಗುಂಪಾಗಿ ನೆಲೆಸಿದ್ದ ಆಫ್ರಿಕನ್ ನೀಗ್ರೋಸ್ ಈಗೀಗ ಬೆಂಗಳೂರು ಮಹಾನಗರದ ತುಂಬೆಲ್ಲ ಹರಡಿಕೊಂಡಿದ್ದಾರೆ! ಎಲೆಕ್ಟ್ರಾನಿಕ್ ಸಿಟಿ ಏರಿಯಾದಲ್ಲಿ ತುಂಬಾ ಕಮ್ಮಿ. ಆದರೆ, ಸುತ್ತಮುತ್ತಲ ಗ್ರಾಮಗಳಲ್ಲಿ, ಹೊಲ ಗದ್ದೆಯಲ್ಲಿರುವ ವಸತಿಗಳಲ್ಲಿ ಕದ್ದು ಮುಚ್ಚಿ ವಾಸಿಸುತ್ತಾರೆ! ಡ್ರಗ್ ಪೆಡ್ಲರ್ ಜೋಯಲ್ ವಿದ್ಯಾರಣ್ಯಪುರದಿಂದ ಇಲ್ಲಿಗೆಲ್ಲಾ ಬಂದು ಡ್ರಗ್ಸ್ ವ್ಯಾಪಾರ ಮಾಡ್ತಿದ್ದ ನೋಡಿ!

ಮೊನ್ನೆ ಈತ ತನ್ನ ಸಖಿ ಜೋಯಾಳನ್ನು ಕರೆದುಕೊಂಡು ಬಂದು ರೌಂಡ್ ಹೊಡೆದಿದ್ದಾನೆ. ಬೆಟ್ಟದಾಸನಪುರದ 'ಕೇರಳ ಮಸೀದಿ' ರಸ್ತೆಯಲ್ಲಿರುವ ಮಹಾಲಕ್ಷ್ಮಿ ಬಡಾವಣೆಯ ಖಾಲಿ ಮೈದಾನಕ್ಕೆ ತನ್ನ ಗಿರಾಕಿಗಳನ್ನು ಕರೆಸಿಕೊಂಡು 'ಡ್ರಗ್ಸ್' ವಿತರಿಸುತ್ತಿದ್ದಾಗ ಜೋಯ್-ಜೋಯಲ್ ಇಬ್ಬರನ್ನೂ ಇನ್ಸ್‌ಪೆಕ್ಟರ್ ಜಿ.ಎಂ. ನವೀನ್ ಮತ್ತು ತಂಡ ಹಿಡಿದಾಕಿದೆ! ವಿಚಾರಣೆಯ ವೇಳೆ ಇವರಿಬ್ಬರೂ ಯಾವ ಕಾಲೇಜಿಗೂ ಪ್ರವೇಶ ಪಡೆಯದೆ, ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ನೆಲೆಸಿದ್ದರು ಎಂಬ ಅಘಾತಕಾರಿ ಅಂಶ ಪತ್ತೆಯಾಗಿದೆ!

ಬೆಂಗಳೂರು ಸಿಟಿಯೊಳಗೆ ಅಲ್ಲಲ್ಲಿ ನೆಲೆಸಿರುವ ಬಹುತೇಕ ಆಫ್ರಿಕನ್ಸ್ ಕತೆ ಇದೇನೇ!! ಸುಲಭವಾಗಿ ಹಣ ಸಂಪಾದನೆ ಮಾಡಲು ಡ್ರಗ್ಸ್ ದಂಧೆಗಿಳಿದಿದ್ದಾರೆ. ಕೆಲವರು ಪೊಲೀಸರನ್ನು ಹಾಗೂ ರೌಡಿ ಶೀಟರ್‌ಗಳನ್ನು ಫಳಗಿಸಿಕೊಂಡು ಆರಾಮವಾಗಿ ದಂಧೆ ಮಾಡುತ್ತಾರೆ! 'ಭೀಮ' ನಟ ಜೋಯಲ್ ಮತ್ತವನ ಗೆಳತಿ ಜೋಯ್ ಸಂಡೇಗೆ ದೆಹಲಿಯ ಮಾದಕ ವಸ್ತು ಮಾರಾಟ ಜಾಲದ ಸಂಪರ್ಕವಿತ್ತು ಎನ್ನಲಾಗಿದೆ.


ಜೋಯ್ ಸಂಡೇ

### ಬ್ಲ್ಯಾಕ್ ಸೆಕ್ಸಿ ಜೋಯ್

ಅಲ್ಲಿಂದ ಕಡಿಮೆ ಬೆಲೆಗೆ ಎಂಡಿಎಂಎ ಖರೀದಿಸಿ, ನಗರದಲ್ಲಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದಳು! ಇವಳ ವ್ಯವಹಾರವೆಲ್ಲ ಆನ್‌ಲೈನ್ ಮೂಲಕವೇ ಆಗುತ್ತಿತ್ತು! ಅವಳು ಸೂಚಿಸಿದ ಸ್ಥಳಕ್ಕೆ ಬಾಯ್ ಫ್ರೆಂಡ್ ಜೋಯಲ್ ಹೋಗಿ ಡ್ರಗ್ಸ್ ತೆಗೆದುಕೊಂಡು, ಹೇಳಿದ್ದಲ್ಲಿಗೆ ತೆರಳಿ ಡ್ರಗ್ಸ್ ಕೊಟ್ಟು ಬರುತ್ತಿದ್ದ! ಕೆಲವರು ಇಲ್ಲಿಗೆ ಬನ್ನಿ ಅಂತೇಳಿ ಲೋಕೇಷನ್ ಕಳುಹಿಸಿದರೆ, ಅಲ್ಲೊಂದು ಖಾಲಿ ಪ್ರದೇಶ ಹುಡುಕಿ, ಅದನ್ನು ಗಿರಾಕಿಗಳಿಗೆ ತಿಳಿಸಿ ಅಲ್ಲಿ ಡ್ರಗ್ಸ್ ಅಡಗಿಸಿಟ್ಟು ಬರುತ್ತಿದ್ದ! ಹಣ ಗೂಗಲ್ ಪೇ, ಫೋನ್ ಪೇನಲ್ಲೇ ಸಂದಾಯವಾಗುತ್ತಿತ್ತು. ಅವನು ಮಾಲು ಇಟ್ಟಿದ್ದೇನೆ ಎಂದು ಹೇಳಿ ಜಾಗ ಖಾಲಿ ಮಾಡಿದ ನಂತರ ಆ ಜಾಗಕ್ಕೆ ಹೋಗಿ ಡ್ರಗ್ಸ್ ಎತ್ತಿಕೊಂಡು ಹೋಗ್ತಿದ್ದ ಗ್ರಾಹಕ! ಹೀಗಾಗಿ, ಜೋಯಲ್‌ಗೆ ಗ್ರಾಹಕರ ನೇರಾ ನೇರ ಪರಿಚಯ ಇರಲಿಲ್ಲ. ಇವರದ್ದು ಒಂಥರಾ ಸ್ಪೆಷಲ್ ವಿಲೇವಾರಿ! ಇವರಿಬ್ಬರೂ ನಗರದ ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಈ ದಂಧೆ ನಡೆಸುತ್ತಿದ್ದರು ಎಂದು ಡಿಸಿಪಿ ನಾರಾಯಣ್ ಅವರು ತಿಳಿಸಿದ್ದಾರೆ. ಸದ್ಯ, ಇವರಿಂದ 2.15 ಕೆಜಿ ಎಂಡಿಎಂಎ ಜಪ್ತಿ ಮಾಡಲಾಗಿದೆ. ಇವರ ಸಹಚರರಿಬ್ಬರು ತಲೆಮರೆಸಿಕೊಂಡಿದ್ದು ಅವರ ಪತ್ತೆ ಕಾರ್ಯ ಸಾಗಿದೆ.

ಡಿಸಿಪಿ ಎಂ.ನಾರಾಯಣ್, ಎಸಿಪಿ ಕೆ.ಎಂ. ಸತೀಶ್ ನೇತೃತ್ವದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜಿ.ಎಂ. ನವೀನ್ ಈ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ್ದು, ಆರೋಪಿಗಳನ್ನು ಬಂಧಿಸುವಲ್ಲಿ ಪಿಎಸ್‌ಐಗಳಾದ ರವಿಚಂದ್ರ, ದರ್ಶನ್ ಅಲಗೂರ ಮತ್ತು ಸಿಬ್ಬಂದಿ ವರ್ಗ ಸಹಕರಿಸಿದ್ದು, ಸಿಪಿ ಸೀಮಂತ್‌ಕುಮಾರ್ ಸಿಂಗ್ ಎಲ್ಲರನ್ನೂ ಪ್ರಶಂಸಿಸಿರುತ್ತಾರೆ.

### ಜಾನ್ ಡಿ ಕೋಸ್ಟ ಅರೆಸ್ಟ್!

ಇನ್ನೊಂದೆಡೆ, ಸಿಸಿಬಿ ಮಾದಕ ದ್ರವ್ಯ ದಳದ ಪೊಲೀಸ್ ಅಧಿಕಾರಿಗಳು ಕುಖ್ಯಾತ ಡ್ರಗ್ ಪೆಡ್ಲರ್ ಜಾನ್ ಡಿ ಕೋಸ್ಟನನ್ನು ಲಾಕ್ ಮಾಡಿದ್ದಾರೆ. ಈತ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದು ನಗರದಲ್ಲಿ ಮಾದಕ ಪದಾರ್ಥ ಮಾರಾಟ ಮಾಡುತ್ತಿದ್ದ. ಆಫ್ರಿಕಾ ಖಂಡದವನಾದ ಜಾನ್ ಡಿ ಕೊಸ್ಟಾ ಕರ್ನಾಟಕ ಆಂಧ್ರ ತಮಿಳು ನಾಡು ಕೇರಳ ಮುಂಬೈ ಕೊಲ್ಕತ್ತಾ ಮುಂತಾದ ಕಡೆಗಳಲ್ಲಿ ಅಕ್ಕಪಕ್ಕದ ಬೀದಿಗಳಲ್ಲಿ ಸುತ್ತಾಡಿದ ಹಾಗೆ ಸುತ್ತಾಡುತ್ತಾ ಡ್ರಗ್ಸ್ ದಂಧೆ ಮಾಡುತ್ತಿದ್ದ ಎನ್ನಲಾಗಿದೆ. ಈತನ ಮೇಲೆ ಬಹುಕಾಲದಿಂದ ನಿಗಾ ಇಟ್ಟಿದ್ದ ಸಿಸಿಬಿಯ ಮಾದಕ ನಿಗ್ರಹ ದಳದ ಪೊಲೀಸರು ಇದೀಗ ಬೆಂಗಳೂರಲ್ಲೇ ಬಂಧಿಸಿದ್ದಾರೆ.

2024ರಲ್ಲಿ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಕೋಸ್ಟ ಮೊದಲು ದೆಹಲಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದನಂತೆ. ಅದರಲ್ಲಿ ಛಿ ಏನೂ ಗಿಟ್ಟುವುದಿಲ್ಲ ಎಂದುಕೊಂಡು ದಿಢೀರ್ ಶ್ರೀಮಂತನಾಗುವ ಉಮ್ಮೇದಿಯಿಂದ ಡ್ರಗ್ಸ್ ದಂಧೆ ಶುರುವಾಚ್ಚಿಕೊಂಡಿದ್ದಾನೆ. ಈತ







ದೆಹಲಿಯಿಂದ ಬೆಂಗಳೂರಿಗೆ ಬಂದು ಮೈಸೂರು ರೋಡ್ ಆವಲಹಳ್ಳಿ ವ್ಯಾಪ್ತಿಯಲ್ಲಿ ನೆಪಕ್ಕೆ ಬಟ್ಟೆ ವ್ಯಾಪಾರ ಮಾಡುತ್ತ, ಮಾದಕ ವಸ್ತುಗಳ ಮಾರಾಟ ದಂಧೆಯಲ್ಲಿ ತೊಡಗಿದ್ದ!

ಸದ್ಯ ಈತನನ್ನು ಬಂಧಿಸಿದ್ದು ಆರೋಪಿಯಿಂದ ಸುಮಾರು 40 ಲಕ್ಷ ರೂ. ಮೌಲ್ಯದ 255 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಹಾಗೂ ಒಂದು ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಜಪ್ತಿ ಮಾಡಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

### ಕೋರಮಂಗಲ ಹೆಚ್‌ಎಸ್‌ಆರ್ ಪೊಲೀಸ್

ಕೋರಮಂಗಲ ಠಾಣೆಯ ಪೊಲೀಸರು ಡ್ರಗ್ಸ್

☞13





**ಸೋದರನೊಬ್ಬ ಅಕ್ಕನಿಗೆ ಸೈಟ್‌ವೊಂದನ್ನು ಮಾರಾಟ ಮಾಡಿ ಹಣ ತೆಗೆದುಕೊಂಡು ರಿಜಿಸ್ಟರ್ ಮಾಡಿಕೊಡುವುದಾಗಿ ಹೇಳಿ, ಜಾಗವನ್ನು ಅವರ ಸ್ವಾಧೀನಕ್ಕೆ ಬಿಟ್ಟಿದ್ದರು. ಸೈಟ್ ರಿಜಿಸ್ಟರ್ ವಿಚಾರಕ್ಕೆ ತಕರಾರು ತೆಗೆದ ಸೋದರಮಾವನ ಮಗ ಸೈಟ್ ಕೊಡಲ್ಲ, ಹಣ ವಾಪಸ್ಸು ಕೊಡುತ್ತೇವೆಂದನು. ಅದಕ್ಕೆ ಅತ್ತೆ ಮಗ ಹಣ ಬೇಡ, ಸೈಟ್ ಬೇಕೆಂದು ಹಠಕ್ಕೆ ಬಿದ್ದನು. ಆಗ ಇಬ್ಬರ ನಡುವೆ ಜಗಳವಾಗಿ ನ್ಯಾಯ ಪಂಚಾಯಿತಿವರೆಗೂ ಹೋಗಿತ್ತು. ಅತ್ತೆ ಮಗನ ಮೇಲೆ ದ್ವೇಷ ಸಾಧಿಸುತ್ತಿದ್ದ ಮಾವನ ಮಗ ಒಂದು ದಿನ ರಾತ್ರಿ ಊಟ ಮಾಡಿ ಮನೆ ಮುಂದೆ ವಾಕ್ ಮಾಡುತ್ತಿದ್ದ ಅತ್ತೆ ಮಗನ ಜೊತೆ ಜಗಳ ತೆಗೆದು ಚಾಕುವಿನಿಂದ ಹೊಟ್ಟೆಗೆ ತಿವಿದು ಸಾಯಿಸಿ ಪರಾರಿಯಾಗಿದ್ದ ಆರೋಪಿ ಸೋದರಮಾವನ ಮಗನನ್ನು ಚಿಂತಾಮಣಿ ತಾಲ್ಲೂಕು ಕೆಂಚಾರ್ಲಹಳ್ಳಿ ಪೊಲೀಸರು ಬಂಧಿಸಿದ್ದಾರೆ.**


ಆರೋಪಿ ನರೇಶ್

# ಸೈಟ್ ರಿಜಿಸ್ಟರ್ ವಿಚಾರಕ್ಕೆ ತಕರಾರು ಮಾವನ ಮಗನಿಂದ ಕೊಲೆಯಾದ ಶಿವು!

ಚಿಕ್ಕಬಳ್ಳಾಪುರ
✍ ಕೋಲಾರ ಮಂಜು



ಶಿವಕುಮಾರ್ ಬದುಕಿದ್ದಾಗ


**ಚಿ**ಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಭೂಮಿಶೆಟ್ಟಿಹಳ್ಳಿ ಗ್ರಾಮದ ವಾಸಿ ಶ್ರೀನಿವಾಸಪ್ಪ ಮತ್ತು ಈಶ್ವರಮ್ಮ ದಂಪತಿಗಳಿಗೆ ಶಿವಕುಮಾರ್ ಅಲಿಯಾಸ್ ಶಿವು ಎಂಬ ಮಗನಿರುತ್ತಾನೆ. ಮೂಲತಃ ತಾಲ್ಲೂಕಿನ ಯನುಮಲ ಪಾಡಿ ಗ್ರಾಮದವರಾದ ಇವರು ಕಳೆದ 20 ವರ್ಷಗಳ ಹಿಂದೆ ಈಶ್ವರಮ್ಮನ ಸಹೋದರ ಭೂಮಿಶೆಟ್ಟಿ ಗ್ರಾಮದ ವೆಂಕಟೇಶಪ್ಪ ತನ್ನ ಅಕ್ಕ ಮತ್ತು ಬಾವನಿಗೆ ನೀವು ವಾಸವಿರುವ ಯನುಮಲಪಾಡಿ ಗ್ರಾಮದಲ್ಲಿ ಸ್ವಂತ ಮನೆ, ಜಮೀನು ಇರುವುದಿಲ್ಲ. ನಮ್ಮ ಊರಿಗೆ ಬಂದುಬಿಡಿ, ಇಲ್ಲಿಯೇ ವಾಸವಾಗಿ ಕೂಲಿನಾಲಿ ಮಾಡಿಕೊಂಡು ನಮ್ಮಗಳ ಜೊತೆ ಇರುವಂತೆ ಹೇಳಿ ಕರೆಸಿಕೊಂಡರು. ಅದರಂತೆ ಶ್ರೀನಿವಾಸಪ್ಪ ಹೆಂಡತಿ, ಮಗನೊಂದಿಗೆ ಭೂಮಿಶೆಟ್ಟಿಹಳ್ಳಿಗೆ ಬಂದು ವೆಂಕಟೇಶಪ್ಪನಿಗೆ ಸೇರಿದ ಚಿಕ್ಕದೊಂದು ಮೆಯಲ್ಲಿ ವಾಸವಾಗಿ ಭೂಮಿಶೆಟ್ಟಿಹಳ್ಳಿ ಸುತ್ತಮುತ್ತಿನ ತೋಟಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ತಮ್ಮ ಕುಟುಂಬದೊಂದಿಗೆ ಸುಖವಾಗಿ ಜೀವನ ಮಾಡಿಕೊಂಡಿದ್ದರು. ಕೆಲವು ವರ್ಷಗಳ ನಂತರ ಶ್ರೀನಿವಾಸಪ್ಪ ತನ್ನ ಬಾವಮೈದುನ ವೆಂಕಟೇಶಪ್ಪನಿಗೆ ಸೇರಿದ ಗ್ರಾಮದಲ್ಲಿ ಮನೆ ಪಕ್ಕದ ಜಾಗದಲ್ಲಿ 1 ಗುಂಟೆ ಜಮೀನನ್ನು ತೆಗೆದುಕೊಂಡು ಅದರಲ್ಲಿ ಮನೆಯೊಂದನ್ನು ಕಟ್ಟಿಕೊಂಡು ವಾಸವಾಗಿದ್ದರು.



ಕೊಲೆಯಾದ ಶಿವಕುಮಾರ್


ಈಗ್ಗೆ ಸುಮಾರು 10 ವರ್ಷಗಳ ಹಿಂದೆ ಶ್ರೀನಿವಾಸಪ್ಪ ಮತ್ತು ಈಶ್ವರಮ್ಮ ತನ್ನ ಮಗ ಶಿವಕುಮಾರ್‌ಗೆ ತಾಲ್ಲೂಕಿನ ಮುಂಗಾನಹಳ್ಳಿ ಗ್ರಾಮದ ವಾಸಿ ಅಂಬಿಕಾ ಎಂಬುವವರ ಜೊತೆ ಮದುವೆ ಮಾಡಿದ್ದು, ಇವರಿಗೆ ಇಬ್ಬರು ಗಂಡು ಮಕ್ಕಳಿರುತ್ತಾರೆ. ಚಿಕ್ಕ ಸಂಸಾರ ದೊಡ್ಡದಾಗುತ್ತಿದ್ದಂತೆ ತನ್ನ ಮಗ ಶಿವಕುಮಾರ್‌ಗೆ ಇಬ್ಬರು ಗಂಡು ಮಕ್ಕಳಿರುವುದರಿಂದ ಈಗ ಇರುವ ಮನೆಯ ಜೊತೆಗೆ ಇನ್ನೊಂದು ಗುಂಟೆ ಜಮೀನು ತೆಗೆದುಕೊಂಡು ಮುಂದೆ ಅದರಲ್ಲೊಂದು ಮನೆಯನ್ನು ಕಟ್ಟಿಬಿಟ್ಟರೆ ಇಬ್ಬರು ಮೊಮ್ಮಕ್ಕಳಿಗೆ ಒಂದೊಂದು ಮನೆಗಳಾಗುತ್ತದೆನ್ನುವ ಉದ್ದೇಶದಿಂದ ಈಶ್ವರಮ್ಮ ತನ್ನ ತಮ್ಮ ವೆಂಕಟೇಶಪ್ಪನಿಗೆ ನಾವು ವಾಸವಾಗಿರುವ ಮನೆಗೆ ಉತ್ತರ ದಿಕ್ಕಿಗೆ ಒಂದು ಸೈಟ್‌ನ್ನು ಕೊಡುವಂತೆ ಕೇಳಿದರು. ಅದರಂತೆ ಸಹೋದರ ವೆಂಕಟೇಶಪ್ಪ ಅಕ್ಕನ ಮಾತಿಗೆ ಕಟ್ಟುಬಿದ್ದು ಕಡಿಮೆ ಬೆಲೆಗೆ ಸೈಟ್‌ವೊಂದನ್ನು ಕೊಡುವುದಾಗಿ ಹೇಳಿದರು. ಈಶ್ವರಮ್ಮನ ಮನೆಯವರೆಲ್ಲ ಸೇರಿಕೊಂಡು ಕೂಲಿ ನಾಲಿ ಮಾಡಿ ಉಳಿಸಿದ್ದ ಹಣವನ್ನೆಲ್ಲ ಸೇರಿಸಿ ವೆಂಕಟೇಶಪ್ಪನಿಗೆ ಕೊಟ್ಟು ಅಗ್ರಿಮೆಂಟ್ ಮಾಡಿಕೊಂಡರು. ನಂತರ ಸಹೋದರ ವೆಂಕಟೇಶಪ್ಪ ಸೈಟ್ ರಿಜಿಸ್ಟರ್‌ಗೆ ಹಣವನ್ನು ಸೇರಿಸಿಕೊಂಡು ಹೇಳಿ, ರಿಜಿಸ್ಟರ್ ಮಾಡಿಸಿ ಕೊಡುತ್ತೇನೆಂದು ಹೇಳಿ ಸೈಟ್‌ನ ಜಾಗವನ್ನು ಅಕ್ಕನ ಸ್ವಾದೀನಕ್ಕೆ ಬಿಟ್ಟಿದ್ದರು. ಈಶ್ವರಮ್ಮ ಈಗ ಸದ್ಯಕ್ಕೆ ಮನೆ ಕಟ್ಟಲು ಹಣವಿಲ್ಲ, ಈಗಾಗಲೇ ಕಷ್ಟಪಟ್ಟು ಸೈಟ್ ತೆಗೆದುಕೊಂಡಿದ್ದೇವೆ ಮುಂದೆ ಹಣವನ್ನು ಕೂಡಿಸಿಕೊಂಡು ಮನೆಯನ್ನು ಕಟ್ಟುತ್ತೇವೆಂದು ಆ ಜಾಗದಲ್ಲಿ ಸೌದೆ ಮತ್ತು ಇತರೆ ಉಪಯೋಗಕ್ಕೆ ಬರದ ವಸ್ತುಗಳನ್ನು ಹಾಕಿಕೊಂಡಿದ್ದರು.

ವರ್ಷಗಳೇ ಕಳೆದರೂ ಸೈಟ್ ರಿಜಿಸ್ಟರ್ ಮಾಡಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ, ಮುಂದೆ ಹೋಗುತ್ತಲೇ ಇತ್ತು. ಸ್ವಾದೀನದಲ್ಲಿದ್ದರೂ ಸೈಟ್ ರಿಜಿಸ್ಟರ್ ಆಗದೇ ಇರುವುದು ವೆಂಕಟೇಶಪ್ಪನ ಮಗ ನರೇಶನಿಗೆ ಸೈಟ್ ಕೊಡಲು ಇಷ್ಟವಿರಲಿಲ್ಲ. ಕಾರಣ ಈಗಾಗಲೇ ಒಂದು ಗುಂಟೆಯನ್ನು ಕೊಟ್ಟಿದ್ದು ಅದರಲ್ಲಿ ಮನೆಯೊಂದನ್ನು ಕಟ್ಟಿಕೊಂಡಿದ್ದಾರೆ. ಮತ್ತೆ ತಂದೆಯನ್ನು ಪುಸಲಾಯಿಸಿ ಕಡಿಮೆ ಬೆಲೆಗೆ ಸೈಟ್‌ವೊಂದನ್ನು ಅತ್ತೆ ಈಶ್ವರಮ್ಮ ತೆಗೆದುಕೊಂಡಿದ್ದಾರೆ. ಈಗ ಭೂಮಿಯ ಬೆಲೆಗೆ ಹೆಚ್ಚಾಗಿರುವುದರಿಂದ ಒಂದು ಸೈಟ್‌ನ್ನು ಮಾರಾಟ ಮಾಡಿದರೆ ಲಕ್ಷಾಂತರ ರೂ.ಗಳು ಬರುತ್ತದೆ. ಅದಕ್ಕೆ ತಂದೆ ವೆಂಕಟೇಶಪ್ಪನಿಗೆ ಯಾವುದೇ ಕಾರಣಕ್ಕೂ ಸೈಟನ್ನು ರಿಜಿಸ್ಟರ್ ಮಾಡಿಕೊಡಬಾರದೆಂದು ಹೇಳಿದನಲ್ಲದೆ ನೀವು ರಿಜಿಸ್ಟರ್ ಮಾಡಿಕೊಡುವುದಾದರೆ ರಿಜಿಸ್ಟರ್ ಆಫೀಸ್‌ಗೆ ಬಂದು ತಕರಾರು ತೆಗೆಯುವುದಾಗಿ ತಂದೆ ಜೊತೆ ಜಗಳ ತೆಗೆದನು. ಸೈಟ್ ವಿಷಯಕ್ಕೆ ತಂದೆ ಮತ್ತು ಮಗನ ನಡುವೆ ಮನಸ್ತಾಪ ಉಂಟಾಗಿ ಇಬ್ಬರು ಮುನಿಸಿಕೊಂಡಿದ್ದರು. ತಂದೆ ಮತ್ತು ಮಗನ ನಡುವೆ ಕಲಹಕ್ಕೆ ಕಾರಣರಾದವರನ್ನು ಸುಮ್ಮನೆ ಬಿಡುವುದಿಲ್ಲ. ಅವರಿಗೊಂದು ಗತಿ ಕಾಣಿಸುವುದಾಗಿ ಹೇಳಿಕೊಂಡು ತಿರುಗಾಡುತ್ತಿದ್ದನಲ್ಲದೆ ಆತ್ಮೀಯನಾಗಿದ್ದ ಅತ್ತೆ ಮಗ ಶಿವಕುಮಾರ್ ಜೊತೆ ಸೈಟ್ ರಿಜಿಸ್ಟರ್ ಮಾಡಿಕೊಡುವ ವಿಷಯಕ್ಕೆ ಜಗಳ ಮಾಡಿಕೊಂಡು ದೂರವಾಗಿದ್ದನು.


ಎಸ್ಪಿ ಕುಶಾಲ್ ಚೌಕ್ಸೆ


ಎಎಸ್ಪಿ ರಾಜಾ ಇಮಾಮ್ ಖಾಸಿಂ


ಡಿವೈಎಸ್ಪಿ ಮುರುಳಿಧರ


ಪಿಎಸ್ಐ ಶಿವಕುಮಾರ್


ಆಸ್ಪತ್ರೆ ಮುಂದೆ ಸೇರಿರುವ ಮೃತನ ಕುಟುಂಬಸ್ಥರು

**ಶಿವಕುಮಾರ್ ಕೊಲೆ ಬಗ್ಗೆ ಪತ್ನಿಯಿಂದ ದೂರ**

ಶಿವಕುಮಾರ್‌ರವರ ಪತ್ನಿ ಅಂಬಿಕಾರವರು ಚಿಂತಾಮಣಿ ತಾಲ್ಲೂಕು ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ 10 ವರ್ಷಗಳ ಹಿಂದೆ ಶಿವಕುಮಾರ್‌ರವರನ್ನು ಮದುವೆಯಾಗಿದ್ದು, ನಮಗೆ ಇಬ್ಬರು ಮಕ್ಕಳಿರುತ್ತಾರೆ. 20 ವರ್ಷಗಳ ಹಿಂದೆ ಅತ್ತೆ ಈಶ್ವರಮ್ಮನ ತಮ್ಮ ವೆಂಕಟೇಶಪ್ಪನ ಬಳಿ ಸೈಟ್‌ವೊಂದನ್ನು ತೆಗೆದುಕೊಂಡು ಮನೆ ಕಟ್ಟಿಕೊಂಡು ವಾಸವಾಗಿರುತ್ತೇವೆ. ಮನೆಗೆ ಉತ್ತರ ದಿಕ್ಕಿನಲ್ಲಿ ಮತ್ತೊಂದು ಸೈಟನ್ನು ವೆಂಕಟೇಶಪ್ಪನವರಿಂದ ತೆಗೆದುಕೊಂಡು ಅದರಲ್ಲಿ ಸೌದೆ ಮತ್ತು ಇತರೆ ವಸ್ತುಗಳನ್ನು ಹಾಕಿಕೊಂಡಿದ್ದು ಸದರಿ ಸೈಟ್ ಅನ್ನು ರಿಜಿಸ್ಟರ್ ಮಾಡಿಕೊಡಲು ವೆಂಕಟೇಶಪ್ಪನ ಮಗ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಕೂಲಿ ಕೆಲಸ ಮಾಡಿಕೊಂಡಿರುವ ಬಿ.ವಿ. ನರೇಶ್ (26)ರವರು ತಕರಾರು ತೆಗೆದು ತನ್ನ ಗಂಡ ಶಿವಕುಮಾರ್‌ರವರ ಬಳಿ ಸದರಿ ಸೈಟ್ ಹಣವನ್ನು ವಾಪಸ್ಸು ಕೊಡುತ್ತೇವೆಂದು ಈಗ್ಗೆ ಆರು ತಿಂಗಳ ಹಿಂದೆ ನೀವು ಖರೀದಿ ಮಾಡಿರುವ ಸ್ಥಳದಲ್ಲಿ ಸೌದೆ ಹಾಕಬಾರದೆಂದು ಗಲಾಟೆ ಮಾಡಿದ್ದು ಆಗ ತಮ್ಮ ಗ್ರಾಮದ ಹಿರಿಯರಾದ ಝಡ್.ಪಿ. ವೆಂಕಟೇಶಣ್ಣ ಮತ್ತು ಇತರರು ಸೇರಿಕೊಂಡು ಬುದ್ಧಿ ಹೇಳಿದರಲ್ಲದೆ ಕೂಡಲೇ ಸೈಟ್‌ನ್ನು ರಿಜಿಸ್ಟರ್ ಮಾಡಿಕೊಡುವಂತೆ ಸೂಚಿಸಿದರು. ಆದರೂ ಸಹ ನರೇಶ್ ತನ್ನ ಗಂಡ ಶಿವಕುಮಾರ್



ಮೇಲೆ ಆಗಾಗ ಗಲಾಟೆ ಮಾಡುತ್ತಿದ್ದರು.

ಮೇ. 30ರಂದು ರಾತ್ರಿ 9 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಊಟ ಮಾಡಿದ ನಂತರ ನನ್ನ ಗಂಡ ಹೊರಗಡೆ ಓಡಾಡಿಕೊಂಡು ಬರುವುದಾಗಿ ಹೇಳಿ ಹೋದರು. ನಂತರ ರಾತ್ರಿ 9.30 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಮಾರುತಿರವರು ಮನೆಯ ಬಳಿ ಬಂದು ನಿನ್ನ ಗಂಡ ಶಿವಕುಮಾರ್‌ರವರಿಗೆ ನಿಮ್ಮ ಸಂಬಂಧಿ ನರೇಶ್ ಚಾಕುವಿನಿಂದ ಚುಚ್ಚಿರುವುದಾಗಿ ತಿಳಿಸಿದ್ದು, ಕೂಡಲೇ ನಾನು ನಮ್ಮ ಮನೆ ಪಕ್ಕದ ಸುನಿಲ್, ಹರೀಶ್‌ರವರೊಂದಿಗೆ ಸ್ಥಳಕ್ಕೆ ಹೋಗಿ ನೋಡಲಾಗಿ ನಮ್ಮ ಗ್ರಾಮದ ಸಾಧಮ್ಮರವರ ಮನೆಯ ರಸ್ತೆಯ ಬಳಿ ನರೇಶ್‌ರವರು ಚಾಕುವಿನಿಂದ ನನ್ನ ಗಂಡನ ಎದೆಯ ಕೆಳ ಭಾಗದ ಎಡಗಡೆ ಹೊಟ್ಟೆಯ ಬಳಿ ಚುಚ್ಚಿ ಓಡಿ ಹೋಗಿರುತ್ತಾನೆಂದು ರಸ್ತೆಯ ಅಕ್ಕಪಕ್ಕದ ಮನೆಯವರು ತಿಳಿಸಿರುತ್ತಾರೆ. ನನ್ನ ಗಂಡ ನರೇಶ್‌ರವರ ಜಮೀನಿನಲ್ಲಿ ಸೈಟ್ ಖರೀದಿಸಿರುವ ವಿಚಾರದಲ್ಲಿ ವೈಷಮ್ಯ ಇಟ್ಟುಕೊಂಡು ತನ್ನ ಗಂಡನನ್ನು ನರೇಶ್‌ರವರು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾರೆ. ನಾನು ಮತ್ತು ನಮ್ಮ ಗ್ರಾಮದವರು ನನ್ನ ಗಂಡ ಬದುಕಿರಬಹುದೆಂದು ವೆಂಕಟೇಶಣ್ಣರವರ ಕಾರಿನಲ್ಲಿ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದು, ಶಿವಕುಮಾರ್‌ರವರನ್ನು ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ತನ್ನ ಗಂಡನನ್ನು ಕೊಲೆ ಮಾಡಿದ್ದ ನರೇಶ್‌ರವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿ ಕೋರಿದ್ದರ ಮೇರೆಗೆ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಶಿವಕುಮಾರ್‌ರವರು ಮೊ.ಸಂ. 105/2025 ಕಲಂ 103 ಬಿಎನ್‌ಎಸ್ 2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ವರದಿಯನ್ನು ಇಲಾಖೆಯ ಮೇಲಾಧಿಕಾರಿಗಳಿಗೆ ನೀಡಿ ನಿವೇದಿಸಿಕೊಂಡಿರುತ್ತಾರೆ.


ಆಸ್ಪತ್ರೆ ಬಳಿ ಮಹಜರ್ ನಡೆಸುತ್ತಿರುವ ಪೊಲೀಸರು


ಸಂಬಂಧಿಕರಿಂದ ಹೇಳಿಕೆ ಪಡೆಯುತ್ತಿರುವ ಪೊಲೀಸರು


ಮೃತ ಶಿವಕುಮಾರ್‌ನ ಪತ್ನಿ

**ಆರೋಪಿ ನರೇಶ್ ಬಂಧನ**

ಕೊಲೆಯ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಚಿಕ್ಕಬಳ್ಳಾಪುರ ಜಿಲ್ಲಾ ರಕ್ಷಣಾಧಿಕಾರಿ ಕುಶಾಲ್ ಚೌಕ್ಸೆ, ಎಎಸ್ಪಿ ರಾಜಾ ಇಮಾಮ್ ಖಾಸಿಂ, ಡಿವೈಎಸ್ಪಿ ಮುರಳಿಧಟ, ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯ ಪಿಐ ಪಿ.ಆರ್. ಜನಾರ್ಧನ್ ಮತ್ತು ಸಿಬ್ಬಂದಿ ವರ್ಗದವರು ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಮೃತನ ಶವವನ್ನು ವೀಕ್ಷಣೆ ನಂತರ ಕೃತ್ಯ ನಡೆದಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪಂಚರಾದ ವೆಂಕಟೇಶ್, ವೆಂಕಟರಮಣ, ನರಸಿಂಹಪ್ಪರವರ ಸಮಕ್ಷಮದಲ್ಲಿ ಮೃತದೇಹದ ಪಂಚನಾಮೆ ನಡೆಸಿದ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ಮೇಲೆ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು.

ಶಿವಕುಮಾರ್‌ನನ್ನು ಕೊಲೆ ಮಾಡಿ ಪರಾರಿಯಾಗಿರುವ ಆರೋಪಿ ಮಾವನ ಮಗ ನರೇಶ್‌ನ ಪತ್ತೆಗಾಗಿ ಎಸ್ಪಿ ಕುಶಾಲ್ ಚೌಕ್ಸೆ, ಡಿವೈಎಸ್ಪಿ ಮುರಳಿಧರರವರ ಮಾರ್ಗದರ್ಶನದಲ್ಲಿ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯ ಪಿಐ ಪಿ.ಆರ್. ಜನಾರ್ಧನ್‌ರವರ ನೇತೃತ್ವದಲ್ಲಿ ತನಿಖಾ ಸಹಾಯಕ ಎಸ್.ಕೆ. ಶ್ರೀನಾಥ್, ಪೊಲೀಸ್ ಸಿಬ್ಬಂದಿಯವರಾದ ಅಂಬರೀಶ್, ಎಂ.ಎಲ್. ಲಕ್ಷ್ಮಿಪತಿ, ಕೆ. ನಾರಾಯಣ, ವಿಶ್ವನಾಥ್‌ರವರ ತಂಡವನ್ನು ರಚಿಸಲಾಗಿದ್ದು, ಮೊದಲಿಗೆ ಮೃತನ ತಾಯಿ ಈಶ್ವರಮ್ಮ, ಸಾಕ್ಷಿದಾರರಾದ ನರಸಿಂಹಮೂರ್ತಿ, ನರಸಿಂಹಪ್ಪ ಮುಂತಾದವರ ಬಳಿ ಹೇಳಿಕೆಗಳನ್ನು ಪಡೆದ ನಂತರ ತಲೆಮರೆಸಿಕೊಂಡಿರುವ ಆರೋಪಿಯ ಪತ್ತೆಗಾಗಿ ಬಲೆ ಬೀಸಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಮೇ 31ರಂದು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಚಿಂತಾಮಣಿ ನಗರದ ಚೇಳೂರು ಸರ್ಕಲ್‌ನಲ್ಲಿ ಆರೋಪಿ ನರೇಶ್‌ನನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಸೈಟ್ ರಿಜಿಸ್ಟರ್ ಮಾಡಿಕೊಡುವ ವಿಚಾರದಲ್ಲಿ ಶಿವಕುಮಾರ್‌ನ ಮೇಲೆ ದ್ವೇಷ ಬೆಳೆಸಿಕೊಂಡು ಅವನಿಗೊಂದು ಗತಿಕಾಣಿಸಬೇಕೆಂದು ಕಾಯುತ್ತಿದ್ದೆನು. ಆ ರಾತ್ರಿ ಅವನು ಒಂಟಿಯಾಗಿ ನಡೆದುಕೊಂಡು ಬರುವಾಗ ಮನೆಗೆ ಹೋಗಿ ಚಾಕುವನ್ನು ತೆಗೆದುಕೊಂಡು ಬಂದು ಅವನ ಜೊತೆ ಜಗಳ ತೆಗೆದು ಏಕಾಏಕಿ ಚಾಕುವಿನಿಂದ ಹೊಟ್ಟೆಗೆ ತಿವಿದು ಕೊಲೆ ಮಾಡಿರುವುದಾಗಿ ಹೇಳಿದರಲ್ಲದೆ ಕೃತ್ಯಕ್ಕೆ ಬಳಸಿದ್ದ ಚಾಕುವನ್ನು ಬಡಗವಾರಹಳ್ಳಿ ಕ್ರಾಸ್ ಸಮೀಪ ಇರುವ ನಿರ್ಮಾಣ ಹಂತದಲ್ಲಿರುವ ಬಿಲ್ಡಿಂಗ್‌ನಲ್ಲಿ ಬಚ್ಚಿಟ್ಟಿದ್ದ ಸ್ಥಳದಿಂದ ಪಂಚರ ಸಮಕ್ಷಮದಲ್ಲಿ ತೆಗೆದುಕೊಟ್ಟಿದ್ದು ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.


ತನಿಖಾ ಸಹಾಯ ಎಸ್.ಕೆ. ಶ್ರೀನಾಥ್, ಪಿಸಿಗಳಾದ ಕೆ. ನಾರಾಯಣ, ಎಂ.ಎಲ್. ಲಕ್ಷ್ಮಿಪತಿ ಹಾಗೂ ಅಂಬರೀಶ್

# ಕಾಕ್ ಪಿಟ್ ರೊಮ್ಯಾನ್ಸ್!

**ವಿದೇಶಿ ವಿಮಾನಯಾನ ಸಂಸ್ಥೆಯಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿರುವ ಸುಂದರ ಯುವತಿ 'ಸಿಯೆರಾ ಮಿಸ್ಟ್' ಎಂಬಾಕೆ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಕೆಲವು ಆಘಾತಕಾರಿ ವಿಚಾರಗಳನ್ನು ಬಹಿರಂಗಪಡಿಸಿದ್ದಾಳೆ. ವಿಮಾನ 35 ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿರುವಾಗ ಪೈಲಟ್, ಆಟೋ ಮೋಡ್‌ಗೆ ಹಾಕಿ ವಿಶ್ರಾಂತಿ ಪಡೆಯಲು 'ಕಾಕ್ ಪೀಟ್'ಗೆ ತೆರಳುವಾಗ, ಪ್ರೀಪ್ಲಾನ್‌ನಂತೆ ಗಗನಸಖಿಯನ್ನು ಕರೆದುಕೊಳ್ಳುತ್ತಾರೆ! ಇದು, ಸಹ ಪೈಲಟ್ ಬಿಟ್ರೆ ಹೊರಗಿನ ಪ್ರಯಾಣಿಕರಿಗೆ ತಿಳಿಯುವುದಿಲ್ಲ ಎಂಬ ಕರಾಳ ಕಾಮಕಾಂಡ ರಹಸ್ಯಗಳನ್ನು ಬಟಾ ಬಯಲು ಮಾಡಿಬಿಟ್ಟಿದ್ದಾಳೆ!!**




**ಯೂ** ಟ್ಯೂಬರ್ ಸಿಯಾರ ಮಿಸ್ಟ್ ಜಗತ್ತೇ ಬಿಚ್ಚಿಬೀಳುವಂತ ರಹಸ್ಯವೊಂದನ್ನು ಬಯಲು ಮಾಡಿದ್ದಾಳೆ! ಈಕೆ ಮೊದಲು ವಿಮಾನದಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿದ್ದವಳು. ಗಗನಸಖಿ ಅಂದಮೇಲೆ ಸುಂದರ ಯುವತಿ ಅನ್ನೋದು ಓಪನ್ ಸೀಕ್ರೆಟ್. ಸಿಯಾರ ಈಗ ಬ್ಲಾಸ್ಟ್ ಮಾಡಿರೋ ವಿಚಾರ ವಿಮಾನದಲ್ಲಿ ನಡೆಯುವ ಸೆಕ್ಸ್ ಆಟ ಕುರಿತದ್ದು!



ವಿಮಾನವು ಸಾವಿರಾರು ಅಡಿಗಳ ಮೇಲೆ ಹಾರಾಡುತ್ತ ಆಗಸದಲ್ಲಿರುವಾಗ ಅಲ್ಲಿ ಏನೇನಾಗುತ್ತದೆ ಎಂಬುದನ್ನು ಜಗತ್ತಿಗೇ ಸಾರಿದ್ದಾಳೆ. ಆಕೆಯ ವಿಡಿಯೋ ಇದೀಗ ವ್ಯಾಪಕವಾಗಿ ವೈರಲ್ ಆಗುತ್ತಿದೆ. ಈ ಕುರಿತು ಇಂಡಿಯಾ ಟುಡೆ ವರದಿ ಮಾಡಿದ್ದು, ವಿದೇಶಿ ವಿಮಾನಯಾನ ಸಂಸ್ಥೆಯಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿದ್ದ ಯುವತಿ ಸಿಯೆರಾ ಮಿಸ್ಟ್ ಎಂಬಾಕೆ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಆಘಾತಕಾರಿ ವಿಚಾರಗಳನ್ನು ತನ್ನ ವಿಡಿಯೋದಲ್ಲಿ ಬಹಿರಂಗಪಡಿಸಿದ್ದಾಳೆ.

ಇವು ಸುಮಾರು ಸುಮಾರು ಎರಡು ವರ್ಷಗಳಷ್ಟು ಹಳೆಯ ವಿಡಿಯೋಗಳು ಎನ್ನಲಾಗಿದ್ದು, ಆಕೆ ಕೆಲಸ ಬಿಟ್ಟ ಬಳಿಕ ವಿಡಿಯೋಗಳು ಒಂದೊಂದಾಗಿ ವೈರಲ್ ಆಗುತ್ತಿವೆ. ವಿಮಾನದ ಕಾಕ್‌ಪಿಟ್‌ನ ಮುಚ್ಚಿದ ಬಾಗಿಲುಗಳ ಒಳಗೆ ಏನೆಲ್ಲಾ ನಡೆಯುತ್ತದೆ ಎಂದು ಆಕೆ ಹೇಳಿರುವ ವಿಚಾರ ಮೈ ಜುಮ್ ಜುಮ್ ಎನ್ನಿಸುತ್ತದೆ.



**ಅಸಿಸ್ಟೆಂಟ್ ಔಟ್, ಬ್ಯೂಟಿ ಇನ್!**

ಪೈಲಟ್ ಸಾಮಾನ್ಯವಾಗಿ ವಿಮಾನ ದೂರದ ಸ್ಥಳಗಳಾಗಿ ಪ್ರಯಾಣಿಸುವಾಗ ವಿಮಾನ ನಿಗದಿತ ಎತ್ತರ ತಲುಪುತ್ತಿದ್ದಂತೆ ಪೈಲಟ್‌ಗಳು ವಿಮಾನವನ್ನು ಆಟೋ (Auto Pilot) ಮೋಡ್‌ಗೆ ಹಾಕುತ್ತಾರೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಆ ವೇಳೆ ಅವರು ಸಿಬ್ಬಂದಿ ಜತೆ ರೊಮ್ಯಾನ್ಸ್‌ನಲ್ಲಿ ನಿರತರಾಗಿರುತ್ತಾರೆ ಎಂದು ಸಿಯೆರಾ ಮಿಸ್ಟ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಸಹ ಪೈಲಟ್ ಕಾಕ್ಪಿಟ್‌ನಿಂದ ಹೊರಬಂದಾಗ, ಗಗನಸಖಿಯೊಬ್ಬರು ಅದರೊಳಗೆ ಹೋಗಬಹುದು. ಕೆಲವರು ಇದನ್ನೇ ಸೂಪರ್ ಚಾನ್ಸ್ ಆಗಿ ಬಳಸಿಕೊಂಡು, ಸಹ ಪೈಲಟ್ ಅನ್ನು ಹೊರಗೆ ಕಳುಹಿಸಿ, ಫಿಕ್ಸೆಡ್ ಗಗನಸಖಿಯನ್ನು ಒಳಗೆ ಕರೆಸಿಕೊಳ್ಳುತ್ತಾರೆ. ಇಬ್ಬರೂ ವಿಮಾನ ಆಟೋ ಪೈಲಟ್ ಮೋಡ್‌ನಲ್ಲಿ ಇರುವಷ್ಟು ಹೊತ್ತು ಸರಸ ಸಲ್ಲಾಪಗಳಲ್ಲಿ ತೊಡಗಿರುತ್ತಾರೆ ಎಂದು ಸಿಯೆರಾ ಹೇಳಿದ್ದಾರೆ.

**ವಿಮಾನಗಳಲ್ಲಿ ಪೈಲಟ್ ರೊಮ್ಯಾನ್ಸ್ ಸರ್ವೇ ಸಾಮಾನ್ಯ**

ವಿಮಾನವು ಸಾಮಾನ್ಯವಾಗಿ 35,000 ಅಡಿಗಳಷ್ಟು ಎತ್ತರವನ್ನು ತಲುಪಿದಾಗ ವಿಮಾನವನ್ನು ಆಟೋಪೈಲಟ್ ಮೋಡ್‌ಗೆ ಹಾಕಲಾಗುತ್ತದೆ. ದೀರ್ಘ ಪ್ರಯಾಣದ ಹಾರಾಟದ ಸಮಯದಲ್ಲಿ, ವಿಮಾನಕ್ಕೆ ನಿರಂತರ ಹಸ್ತಚಾಲಿತ ನಿಯಂತ್ರಣ ಅಗತ್ಯವಿರುವುದಿಲ್ಲ. ಆಗ ಕೆಲವೊಮ್ಮೆ ವಿಮಾನದ ಸಿಬ್ಬಂದಿ ಸದಸ್ಯರ ನಡುವೆ ರೋಮ್ಯಾನ್ಸ್ ನಡೆಯುತ್ತದೆ. ಆಟೋ ಪೈಲಟ್ ಆನ್ ಮಾಡಿದ ನಂತರ, ಈಗಾಗಲೇ ಪರಸ್ಪರ ಪ್ರೀತಿ ಹೊಂದಿರುವ ಕೆಲವು ಪೈಲಟ್‌ಗಳು ಮತ್ತು ಕ್ಯಾಬಿನ್ ಸಿಬ್ಬಂದಿ, 'ಹೈ ಮೈಲ್ ಕ್ಲಬ್' ಪಾರ್ಟಿಗಳಲ್ಲಿ ತೊಡಗುತ್ತಾರೆ ಈ ಘಟನೆಗಳು ಅಪರೂಪವಲ್ಲ ಅನೇಕ ದೀರ್ಘ ಪ್ರಯಾಣದ ವಿಮಾನಗಳಲ್ಲಿ ಇದು ಸಾಮಾನ್ಯವಾಗಿ ನಡೆಯುತ್ತಿರುತ್ತದೆ ಎಂದು ಸಿಯೆರಾ ಮಿಸ್ಟ್ ಹೇಳಿದ್ದಾಳೆ.

**ಪರಸ್ಪರ ಒಪ್ಪಿಗೆ ಮೇರೆಗೆ ಸರಸ-ಸಲ್ಲಾಪ**

ಪೈಲಟ್ ಮತ್ತು ನಿರ್ದಿಷ್ಟ ಏರ್‌ಹೋಸ್ಟೆಸ್ ಅಥವಾ ಇತರೆ ಸಿಬ್ಬಂದಿಗಳು ಪರಸ್ಪರ ಒಪ್ಪಿಗೆ ಮೇರೆಗೆ ಕಾಕ್ ಪೀಟ್‌ನಲ್ಲಿ ಸರಸ-ಸಲ್ಲಾಪದಲ್ಲಿ ತೊಡಗುತ್ತಾರೆ. ಪೈಲಟ್ ಮತ್ತು ನಿರ್ಧಿಷ್ಟ ಗಗನಸಖಿ ನಡುವೆ ಪ್ರಣಯ ಸಂಬಂಧವಿದ್ದಂತಹ ಸಂದರ್ಭಗಳಲ್ಲಿ, ಸಹಾಯದ

☞ 14

## ತನ್ನೊಡನೆ ಅನೈತಿಕ ಸಂಬಂಧ ಮುಂದುವರೆಸಲು ನಿರಾಕರಿಸಿದ ಎರಡು ಮಕ್ಕಳ ತಾಯಿಗೆ

# ಚಾಕುವಿನಿಂದ ಇರಿದು ಕೊಲೆಗೈದು... ತಾನು ಅದೇ ಚಾಕುವಿನಿಂದ ಇರಿದುಕೊಂಡು ಆತ್ಮಹತ್ಯೆಗೆ ಶರಣಾದ ಮೂರು ಮಕ್ಕಳ ತಂದೆ ಆನಂದ!


ಅನೈತಿಕ ಸಂಬಂಧಕ್ಕೆ ಪ್ರಿಯಕರನಿಂದಲೇ ಕೊಲೆಯಾದ ರೇಷ್ಮಾ

**ಅಂದ ಹಾಗೇ... ಆಕೆ 29 ವರ್ಷದ ವಿವಾಹಿತೆ. ಎರಡು ಮಕ್ಕಳ ತಾಯಿ ಆದರೂ ಉಕ್ಕುತ್ತಿದ್ದ ಕಾಮವನ್ನು ತಡೆಯದೇ ಮಗ್ಗಲು ಓಣಿಯ 31 ವರ್ಷದ ಮೂರು ಮಕ್ಕಳಿದ್ದ ವಿವಾಹಿತನೊಡನೆ ಸುಮಾರು ವರ್ಷಗಳಿಂದ ಅನೈತಿಕ ಸಂಬಂಧ ಬೆಳೆಸಿ ಸುಖ ಪಡೆಯುತ್ತಿದ್ದಳು. ಗಂಡ-ಹೆಂಡಿರ ಹಾಗೇ ಅನ್ಯೋನ್ಯವಾಗಿದ್ದ ಪ್ರೇಮಿಗಳ ಸಂಬಂಧ ಊರ ತುಂಬಾ ಸುದ್ದಿ ಆಗಿತ್ತು. ಇವರಿಬ್ಬರು ಏಕಾಂತದಲ್ಲಿ ಸಲುಗೆಯಿಂದ ಇರುವಾಗ ಗಂಡನ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕರು. ತನ್ನ ಹೆಂಡತಿ - ಮತ್ತವಳ ಪ್ರಿಯಕರನ ಅನೈತಿಕ ಸಂಬಂಧದ ಕುರಿತು ಪೊಲೀಸರಿಗೆ ದೂರು ನೀಡಿದನು. ಪೊಲೀಸರು ಪ್ರೇಮಿಗಳಿಬ್ಬರನ್ನು ಕರೆಯಿಸಿ 'ನಿಮ್ಮ ಸಂಬಂಧ ಇಲ್ಲಿಗೆ ಮುಗಿಬೇಕು' ಎಂದು ಖಡಕ್ ವಾರ್ನಿಂಗ್ ನೀಡಿ ಕಳಿಸಿದ್ದರು. ಅಂದಿನಿಂದ ವಿವಾಹಿತೆ ತನ್ನ ಪಾಡಿಗೆ ತಾನಿದ್ದಳು. ಪ್ರಿಯಕರನೊಡನೆ ಅನೈತಿಕ ಸಂಬಂಧ ಮುಂದುವರೆಸಲು ಸ್ಪಷ್ಟವಾಗಿ ನಿರಾಕರಿಸಿದಳು. ಆದರೆ ಪ್ರಿಯಕರ ತನ್ನ ಪ್ರೇಯಸಿ ನೀಡುತ್ತಿದ್ದ ಸುಖ ಬಿಟ್ಟಿರಲಾರದೇ ಹುಚ್ಚನಂತಾಗಿ 'ನೀನು ನನ್ನ ಹೆಂಡತಿಯ ಹಾಗೆ ಇರಬೇಕು. ನನಗೆ ನಿನ್ನ ಸುಖ ಬಿಟ್ಟಿರಲು ಸಾಧ್ಯವಿಲ್ಲ' ಎಂದು ದುಂಬಾಲು ಬಿದ್ದನು. 'ಇದೆಲ್ಲ ಇನ್ನು ಮುಂದೆ ಆಗದು' ಎಂದು ಕಡ್ಡಿ ಮುರಿದಂತೆ ವಿವಾಹಿತೆ ಹೇಳಿದಾಗ ಪ್ರಿಯಕರನು ತುಂಬಾ ನೊಂದುಕೊಂಡು ಆಕ್ರೋಶಭರಿತನಾಗಿ 'ನನಗಲ್ಲದ ಈಕೆ ಬದುಕಿರಬಾರದು' ಎಂದು ನಿರ್ಧರಿಸಿ ಚಾಕು ಸಮೇತ ಹಿತ್ತಲ ಬಾಗಿಲಿನಿಂದ ಪ್ರೇಯಸಿ ಮನೆಗೆ ನುಗ್ಗಿ ಆಕೆಯ ಮಗಳ ಮುಂದೆ ಪ್ರೇಯಸಿಗೆ 9 ಬಾರಿ ಚಾಕುವಿನಿಂದ ಚುಚ್ಚಿ... ಚುಚ್ಚಿ ಕೊಲೆಗೈದಿದ್ದಾನೆ. ಕೃತ್ಯ ಕಂಡು ನಡುಗಿ ಹೆದರಿಕೊಂಡು ಅದೇ ಚಾಕುವಿನಿಂದ ಇರಿದುಕೊಂಡು ತಾನು ಆತ್ಮಹತ್ಯೆ ಮಾಡಿಕೊಂಡಿರುವ ದುರಂತ ಘಟನೆ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಬೀಡಿ ಗ್ರಾಮದಲ್ಲಿ ದಿ. 14-08-2025ರಂದು ರಾತ್ರಿ ಜರುಗಿದೆ.**


ಪ್ರೇಯಸಿ ರೇಷ್ಮಾಳ ಕೊಲೆಗೈದು ಆತ್ಮಹತ್ಯೆಗೆ ಶರಣಾದ ಆನಂದ

ಬೆಳಗಾವಿ
✍ ಮನ್ನಾಪೂರ

ಅನೈತಿಕ ಸಂಬಂಧ ಅದೆಂತಹ ಅನಾಹುತವನ್ನು ಸೃಷ್ಟಿಸಬಲ್ಲದು ಎಂಬುದನ್ನು ಊಹಿಸಿಕೊಳ್ಳಲಿಕ್ಕೂ ಆಗದು. ಅನೈತಿಕ ಸಂಬಂಧದ ಸುಳಿಯಲ್ಲಿ ಸಿಲುಕಿದ ಹೆಂಗಸಾಗಲಿ... ಗಂಡಸಾಗಲಿ ಅಷ್ಟು ಸಲೀಸಾಗಿ ಹೊರಬರಲಾರರು. ಅನೈತಿಕ ಸಂಬಂಧವೆಂಬ ತಿರುಗುಣಿ ಮಡುವು ತನ್ನೊಳಗೆ ಸಿಲುಕಿದವರನ್ನು ಮುಳುಗಿಸುವುದೇ ಕೆಲಸ. ಇದರಿಂದ ಪಾರಾಗಿ ತಿರುಗಿ ಸುಖಜೀವನವನ್ನು ನಡೆಸುವವರು ಬಹಳ ವಿರಳ ಎಂದು ಹೇಳಬಹುದು. ಅನೈತಿಕ ಸಂಬಂಧದಲ್ಲಿ ಸಿಕ್ಕವರು ಕ್ರೂರವಾಗಿ ಕೊಲೆಯಾಗುವುದು... ಕೊಲೆ ಮಾಡಿಸುವುದು, ಆತ್ಮಹತ್ಯೆಗೆ ಶರಣಾಗುವುದು. ಮರ್ಯಾದೆಗಂಜಿ ಊರು ತ್ಯಜಿಸುವುದು ಹೀಗೆ ಮುಂದುವರೆಯುವ ಪರ್ವದಲ್ಲಿ ಅನೈತಿಕ ಸಂಬಂಧವೇ ವಿಜೃಂಭಿಸುವುದು ಇತಿಹಾಸವಾಗಿದೆ.

ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಬೀಡಿ ಗ್ರಾಮದಲ್ಲಿ ಅನೈತಿಕ ಸಂಬಂಧ ಹೊಂದಿದ್ದ 29 ವರ್ಷದ ಸ್ಪುರದ್ರೂಪಿ ರೇಷ್ಮಾ ಶಿವಾನಂದ ತೀರವೀರ ಎಂಬಾಕೆ ತನ್ನ ಪ್ರಿಯಕರನಿಂದಲೇ ತನ್ನ ಮನೆಯಲ್ಲಿ ತನ್ನ ಮಗಳ ಮುಂದೆ ಬರ್ಬರವಾಗಿ ಕೊಲೆಯಾಗಿದ್ದಾಳೆ. ಕೊಲೆಗೈದ ಆನಂದ ಸುತಾರ ಎಂಬ ಪ್ರಿಯಕರ ತಾನು ಚಾಕುವಿನಿಂದ ಇರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಆದರೆ ತೀವ್ರ ರಕ್ತಸ್ರಾವದಿಂದ ಪ್ರೇಯಸಿ ರೇಷ್ಮಾಳ ಮನೆಯಲ್ಲಿ ಆಕೆಯ ಶವದ ಸಮೀಪ ನರಳುತ್ತ ಬಿದ್ದುಕೊಂಡಿದ್ದಾನೆ. ಘಟನೆ ನೋಡಲು ಬಂದ ಜನರು ಆನಂದ ಸುತಾರನನ್ನು ಬದುಕಿಸಲು ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಗಂಭೀರವಾಗಿ ಗಾಯಗೊಂಡು ಉಪಚಾರ ಫಲಿಸದೇ ಆನಂದ ಮೃತಪಟ್ಟನು. ಹೀಗೆ ಅನೈತಿಕ ಸಂಬಂಧದಲ್ಲಿ ಪ್ರೇಮಿಗಳಿಬ್ಬರು ಸಾವಿನೊಂದಿಗೆ ಪಯಣಿಸಿದ್ದು ದೊಡ್ಡ ದುರಂತವೇ ಸರಿ.

ಕೊಲೆಯಾದ ರೇಷ್ಮಾಳ ಎರಡು ಮಕ್ಕಳು, ಗಂಡ, ತಂದೆ-ತಾಯಿಗಳು ಅನಾಥರಾಗುವುದರ ಜತೆಗೆ ಈ ಕೃತ್ಯದಿಂದ ಕಂಗಾಲಾಗಿದ್ದಾರೆ. ಪ್ರೇಯಸಿಯ ಕೊಲೆ ಮಾಡಿ ಆತ್ಮಹತ್ಯೆ ಮಾಡಿಕೊಂಡ ಆನಂದ ಸುತಾರನ ಮೂರು ಮಕ್ಕಳು, ತುಂಬು ಗರ್ಭಿಣಿ ಹೆಂಡತಿ, ತಾಯಿ ಇಂದು ಬೀದಿಗೆ ಬಂದಿದ್ದಾರೆ. ಒಂದು ಅನೈತಿಕ ಸಂಬಂಧ ಎಂತಹ ಅನಾಹುತ ಸೃಷ್ಟಿಸಿ ಎರಡು ಕುಟುಂಬಗಳ ಮಾನ-ಮರ್ಯಾದೆ ಬೀದಿಗೆ ತಂದಿದೆ. ಅದಕ್ಕೆ ಹೇಳುವುದು 'ಕಾಮ-ಕುರುಡು' ಎಂದು. ಇದನ್ನೇ 'ಪೊಲೀಸ್ ನ್ಯೂಸ್' ಇಲ್ಲಿ ವರದಿಯಾಗಿಸಿದೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಡಾ. ವೀರಯ್ಯ ಹಿರೇಮಠ

### ರೇಷ್ಮಾ ಎಂಬ ನತದೃಷ್ಟ ಸುಂದರಿ...

ಎಲ್ಲರಂತೆ ತಾನು ಬದುಕಬೇಕು ಎಂಬ ಅದಮ್ಯ ಛಲದ 29 ವರ್ಷದ ಸುಂದರಿ ರೇಷ್ಮಾ ಇನ್ನೂ ಕೇವಲ ನೆನಪು ಮಾತ್ರ. ಜೀವನದಲ್ಲಿ ಗಂಡ... ಮನೆ... ಮಕ್ಕಳು ಎಂದೆಲ್ಲ ಏನಾದರೂ ಸಾಧಿಸಬೇಕು ಎಂದು ಬಣ್ಣ-ಬಣ್ಣದ ಕನಸುಗಳನ್ನು ಕಾಣುತ್ತ , ಬೆಟ್ಟದಷ್ಟು ಭರವಸೆಗಳನ್ನು ಬೆನ್ನ ಮೇಲೆ ಹೊತ್ತುಕೊಂಡಾಕೆ. ಆದರೆ ಬದುಕಿನ ಅದ್ಯಾವ ಮೂಲೆಯಿಂದ 'ಅನೈತಿಕ ಸಂಬಂಧ'ವೆಂಬುದು ಇಣುಕಿ ಇವಳ ಬದುಕನ್ನೇ ಹೊಸಕಿ ಹಾಕಿದ್ದು ನೋಡಿದರೆ ನಿಜಕ್ಕೂ ರೇಷ್ಮಾ ತುಂಬಾ ನತದೃಷ್ಟೆ.

### 11 ವರ್ಷದ ಹಿಂದೆ ರೇಷ್ಮಾ ಮದುವೆ...

ಶಂಕರ ಕೃಷ್ಣಾ ಸಾಳುಂಕೆ ಎಂಬಾತನ ಮಗಳಾಗಿದ್ದ ರೇಷ್ಮಾ ತಕ್ಕಮಟ್ಟಿಗೆ ವಿದ್ಯಾವಂತೆಯಾಗಿದ್ದಳು. ವಯಸ್ಸಿಗೆ ಬಂದಿದ್ದ ಮಗಳನ್ನು ತನ್ನ ಸಹೋದರಿ ಆಗಿದ್ದ ಪಾರ್ವತಿ ತೀರವಿರನ ಒಬ್ಬನೇ ಮಗ ಶಿವಾನಂದನಿಗೆ ಕೊಟ್ಟು ಅತ್ಯಂತ ಸರಳವಾಗಿ ಮದುವೆ ಮಾಡಿದ್ದರು. ಏಷ್ಟೇ ಆದರೂ ತಾಯಿಯ ಸಹೋದರ ತನಗೆ ಸೋದರಮಾವನಾಗಬೇಕು. ಕಣ್ಣಮುಂದೆ ಆಡಿ ಬೆಳೆದ ಹುಡುಗಿ ರೇಷ್ಮಾಳನ್ನು ತನಗೆ ಹೆಂಡತಿಯಾದಳಲ್ಲ ಎಂದು ಖುಷಿ ಶಿವಾನಂದನಿಗಿತ್ತು. ಇತ್ತ ರೇಷ್ಮಾಳಿಗೂ ಗಂಡನ ಮನೆ ಹೊಸದಾಗಿರಲಿಲ್ಲ. ತಂದೆ-ತಾಯಿಯಿಂದ ಎಲ್ಲ ಸಂಸ್ಕಾರವನ್ನು ಕಲಿತುಕೊಂಡಿದ್ದ ರೇಷ್ಮಾ ಅಂಬಲಿ, ಅಡಿಗೆ ಮಾಡಿಕೊಂಡು ಮನೆಗೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದಳು.


ಪ್ರಿಯಕರನ ಆಕ್ರೋಶಕ್ಕೆ ಬರ್ಬರವಾಗಿ ಕೊಲೆಯಾದ ರೇಷ್ಮಾ

### ಎರಡು ಮುದ್ದಾದ ಮಕ್ಕಳು...

ಮನೆಯಲ್ಲಿ ಅತ್ತೆ ಪಾರ್ವತಿ, ಮಾವ ರವಳು, ಗಂಡ ಶಿವಾನಂದ ಈ ರೀತಿಯಾಗಿ ನಾಲ್ಕು ಜನರ ಸಂಸಾರದಲ್ಲಿ ರೇಷ್ಮಾ ಪೂರ್ಣ ಸ್ವತಂತ್ರಳಾಗಿದ್ದಳು. ಗಂಡ ಶಿವಾನಂದ ಒಕ್ಕಲುತನ ಮಾಡುತ್ತಲೇ ಹೈನುಗಾರಿಕೆ ಮಾಡುತ್ತಲಿದ್ದನು. ಜೀವನದಲ್ಲಿ ತುಂಬಾ ಮಹತ್ವಾಕಾಂಕ್ಷೆ ಹೊಂದಿದ್ದಳು ರೇಷ್ಮಾ. ದಿನವಿಡೀ ಮನೆಗೆಲಸ ಮಾಡಿ, ರಾತ್ರಿಯಾದರೆ ಸಾಕು, ಗಂಡ ಶಿವಾನಂದನ ತೋಳಲ್ಲಿ ಬೆತ್ತಲೆಯಾಗಿ ಆತನ ಹಿತವಾದ ಬಿಸಿಯಪ್ಪುಗೆಯ ಸ್ಪರ್ಶದಲ್ಲಿ ನವಿರಾಗಿ ನರಳುತ್ತ ದಾಂಪತ್ಯ ಸುಖ ಅನುಭವಿಸುತ್ತಿದ್ದಳು. ಪ್ರತಿ ರಾತ್ರಿ ಗಂಡ ಶಿವಾನಂದ 'ಸಾಕು... ಸಾಕು...' ಎಂದರೂ ನನಗಿನ್ನೂ 'ಬೇಕು... ಬೇಕು' ಎಂದು ರೇಷ್ಮಾ ಪಟ್ಟು ಹಿಡಿದು ಸುಖ ಪಡುತ್ತಿದ್ದಳು. ಇವರಿಬ್ಬರ ಉತ್ತಮ ದಾಂಪತ್ಯ ಜೀವನದ ಪರಿಣಾಮ ವರ್ಷಕ್ಕೊಂದರಂತೆ ಒಂದು ಹೆಣ್ಣು, ಒಂದು ಗಂಡು ಸೇರಿದಂತೆ ಎರಡು ಮಕ್ಕಳಾದವು.

ಮಕ್ಕಳ ಲಾಲನೆ-ಪಾಲನೆ, ಪೋಷಣೆಯಲ್ಲಿ ದಿನಗಳು ಉರುಳಿದ್ದೇ ಸುಂದರಿ ರೇಷ್ಮಾಳಿಗೆ ಗೊತ್ತಾಗಲಿಲ್ಲ. ಈ ನಡುವೆ ಮಕ್ಕಳು ಬೆಳೆದು ಶಾಲೆಗೆ ಹೊರಟು ನಿಂತಾಗಲೇ ರೇಷ್ಮಾಳಿಗೆ ದಿನಗಳು ಕಳೆದು ಹೋಗಿದ್ದು ಗೊತ್ತಾಯಿತು. ಇದೆಲ್ಲದರ ನಡುವೆ ಗಂಡ ಶಿವಾನಂದನಿಗೆ ತನ್ನ ಮೇಲೆ ಆಸಕ್ತಿ ಕಡಿಮೆಯಾಗಿದೆ ಎಂದು ರೇಷ್ಮಾಳಿಗೆ ಅನ್ನಿಸಿದಾಗ ಯಾಕೋ... ಏನೋ ಒಂಟಿತನದ ಭಾವನೆ ಅವಳನ್ನು ಕಿತ್ತು ತಿನ್ನತೊಡಗಿತ್ತು. ಕೆಲವೊಂದು ರಾತ್ರಿ ಶಿವಾನಂದ ಊಟ ಮಾಡಿ ಗಡದ್ದಾಗಿ ಗೊರಕೆ ಹೊಡೆಯುತ್ತ ಬೆನ್ನು ತಿರುವಿ ಮಲಗತೊಡಗಿದ್ದನು. ಇದರಿಂದ ರೇಷ್ಮಾ ತೀವ್ರ ತೆರನಾದ ಮೂಕ ವೇದನೆ ಅನುಭವಿಸತೊಡಗಿದ್ದಳು.


ಪ್ರೇಯಸಿ ರೇಷ್ಮಾಳನ್ನು ಕೊಲೆಗೈದು ಆಕೆಯ ಮನೆಯಲ್ಲಿ ತಾನು ಹೆಣವಾಗಿ ಹೋದ ಪ್ರಿಯಕರ ಆನಂದ ಸುತಾರ

### ಅತ್ತೆ-ಮಾವನ ನಡುವೆ ವಿರಸ...

ರೇಷ್ಮಾಳ ಮಾವ ರವಳು, ಅತ್ತೆ ಪಾರ್ವತೆವ್ವನ ನಡುವೆ ಯಾವುದೂ ಸರಿಯಿರಲಿಲ್ಲ. 'ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆಯಿತು' ಎಂಬಂತಾಗಿತ್ತು. ಹೀಗಾಗಿ ಮಾವನಾದ ರವಳು ಬೆಳಗಾವಿಯ ಸಮೀಪ ಕಣಬರಗಿ ಗ್ರಾಮದಲ್ಲಿನ ಅವರ ಅಕ್ಕನ ಮನೆಯಲ್ಲಿದ್ದನು. ಇನ್ನು ಅತ್ತೆ ಪಾರ್ವತೆವ್ವ ಹುಬ್ಬಳ್ಳಿಯಲ್ಲಿ ಪ್ರತಿಷ್ಠಿತ ವೈದ್ಯರೊಬ್ಬರ ಮನೆಯಲ್ಲಿ ಮನೆಕೆಲಸ ಮಾಡಿಕೊಂಡು ಇದ್ದಳು. ಇದರಿಂದ ರೇಷ್ಮಾ ದಿನವಿಡೀ ಮನೆಯಲ್ಲಿ ಒಬ್ಬಳೇ ಇದ್ದುಕೊಂಡು ಅದು-ಇದು ಎಂದು ಮಾಡಿಕೊಂಡಿದ್ದಳು. ಈ ನಡುವೆ ಗಂಡ ಶಿವಾನಂದ ತೀರವಿರ ಹೈನುಗಾರಿಕೆ ಮತ್ತು ಬೇಸಾಯ ಎಂದುಕೊಂಡು ಹೆಂಡತಿ ರೇಷ್ಮಾಳತ್ತ ಗಮನಹರಿಸಲಿಲ್ಲ. ಉಣ್ಣಲು-ಉಡಲು, ತೊಡಲು ಏನೇನೂ ಕಡಿಮೆಯಿರಲಿಲ್ಲ. ಆದರೆ ಇದ್ಯಾವುದು ಆಕೆಗೆ ಬೇಕಾಗಿರಲಿಲ್ಲ. ಪ್ರತಿರಾತ್ರಿ ಗಂಡನಾದವನು ತನ್ನ ಮೈ-ಮೂಳೆ ಮುರಿಯುವಂತೆ ಬಿಗಿದಪ್ಪಿಕೊಂಡು ಸುಖ ನೀಡಿದರೆ ಸಾಕಾಗಿತ್ತು. ಆದರೆ ಗಂಡ ಶಿವಾನಂದ ರೇಷ್ಮಾಳ ಮನದಿಂಗಿತವನ್ನು ಅರ್ಥ ಮಾಡಿಕೊಳ್ಳದೇ ಹೋದ ಪರಿಣಾಮ ರೇಷ್ಮಾಳೇ ಮುಂದಾಗಿ ಅನೈತಿಕ ಸಂಬಂಧದ ಕಸುಬಿಗೆ ಇಳಿದುಬಿಟ್ಟಳು. ಗಂಡನಾದವನ ಸೊಂಟದ ಕಸುವು ಎನ್ನುವುದು ಆರಿದಾಗಲೇ 'ಅನೈತಿಕ ಸಂಬಂಧ' ಎನ್ನುವುದು ನಿಧಾನವಾಗಿ ಬಾಗಿಲಿನಲ್ಲಿ ಬಂದು ನಿಲ್ಲುತ್ತದೆ.


ಇನ್ಸ್‌ಪೆಕ್ಟರ್ ಎಸ್.ಸಿ. ಪಾಟೀಲ


ಪಿಎಸ್ಐ ಎಸ್.ಎಸ್. ಬದಾಮಿ

☞ 11

10 ☞

### ಆನಂದನತ್ತ ಆಕರ್ಷಿತಳಾದ ರೇಷ್ಮಾ...

ಕಟ್ಟುಮಸ್ತಾದ ನೋಡಲು ಸ್ಪುರದ್ರೂಪಿಯಾಗಿದ್ದ ಯುವಕ ಆನಂದ ರಾಜು ಸುತಾರ. ಅದಾಗಲೇ ಈತನಿಗೆ ಮದುವೆಯಾಗಿ ಮೂರು ಮಕ್ಕಳಿದ್ದರು. ಮನೆಯಲ್ಲಿ ಈತನು ಹೆಂಡತಿ ಮತ್ತು ತಾಯಿ ಇರುತ್ತಿದ್ದರು. ಈತನ ತಂದೆ ರಾಜು ಇತ್ತೀಚಿಗೆ ತೀರಿಕೊಂಡಿದ್ದಾನೆ. ಈತ ಫರ್ನಿಚರ್ ಅಂಗಡಿಯಲ್ಲಿ ಕಾರ್ಪೆಂಟರ್ ಆಗಿ ಕೆಲಸ ಮಾಡಿಕೊಂಡಿದ್ದನು. ರೇಷ್ಮಾಳ ಮನೆಯ ಹಿಂದಿನ ಓಣಿಯಲ್ಲಿ ವಾಸವಾಗಿದ್ದನು. ಕಳೆದ ಸುಮಾರು ನಾಲ್ಕು ವರ್ಷಗಳ ಹಿಂದೆ ಯಾವುದೋ ಪ್ರಸಂಗವೊಂದರಲ್ಲಿ ರೇಷ್ಮಾಳನ್ನು ನೋಡಿದ್ದನು. 'ಹಾಯ್... ಹಲೋ' ಎಂದು ಆರಂಭವಾದ ಮಾತುಕತೆ ಮೊಬೈಲ್ ನಂಬರ್ ಪರಸ್ಪರ ಬದಲಾವಣೆ ಮಾಡಿಕೊಳ್ಳುವವರೆಗೆ


ಬೀಡಿ ಗ್ರಾಮದಲ್ಲಿ ರೇಷ್ಮಾಳ ಕೊಲೆ ನಡೆದಿದ್ದನ್ನು ಪರಿಶೀಲಿಸುತ್ತಿರುವ ಪೊಲೀಸರು

ಹೋಯಿತು. ಆನಂದ ಸುತಾರ ಅರಳು ಹುರಿದಂತೆ ಪಟ...ಪಟನೇ ಮಾತನಾಡುತ್ತ ಎದುರಿಗಿದ್ದವರನ್ನು ಕ್ಷಣಾರ್ಧದಲ್ಲಿ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದನು. ಹೀಗಾಗಿ ರೇಷ್ಮಾಳು ಆನಂದ ಸುತಾರನತ್ತ ಆಕರ್ಷಿತಳಾದಳು. ಮೇಲಿಂದ ಮೇಲೆ ಮೊಬೈಲ್‌ನಲ್ಲಿ ಮಾತನಾಡುತ್ತ ಒಬ್ಬರಿಗೊಬ್ಬರು ಹತ್ತಿರವಾದರು. ವ್ಯಾಟ್ಸಪ್‌ನಲ್ಲಿ ಚಾಟಿಂಗ್ ಆರಂಭಿಸಿ ತಮ್ಮ ಮನದಿಂಗಿತವನ್ನು ಹಂಚಿಕೊಂಡರು. ಆಗ ಆನಂದ ಮುಂದಾಗಿ 'ರೇಷ್ಮಾ ಐ ಲವ್ ಯೂ' ಎಂದನು. ಆಗ ತಕ್ಷಣ ರೇಷ್ಮಾ 'ಐ ಲವ್ ಯೂ ಟು' ಎಂದಾಗ ಆನಂದನಿಗೆ ಎಲ್ಲಿಲ್ಲದ ಸಂತಸ. ಮೊದಲೇ ರೇಷ್ಮಾಳಿಗೆ 'ಕ್ಲಿನ್ ಬೋಲ್ಡ್' ಆಗಿದ್ದ ಆನಂದ ಸುತಾರ ಇನ್ನಿಲ್ಲದಂತೆ ರೇಷ್ಮಾಳತ್ತ ಆಕರ್ಷಿತನಾದನು. 'ಅನ್ನ ಹಳಸಿತ್ತು... ನಾಯಿ ಹಸಿದಿತ್ತು' ಎನ್ನುವ ರೀತಿ ಇಬ್ಬರ ಪರಿಸ್ಥಿತಿಯಾಗಿತ್ತು. ಇಬ್ಬರು ಒಂದೆಡೆ ಸೇರಿ ಸುಖ ಪಡುವ ನಿರ್ಧಾರಕ್ಕೆ ಬಂದಿದ್ದರು.

### ರೇಷ್ಮಾಳ ಮನೆಯಲ್ಲಿ ಮಿಲನ...

ಈಗ ಸುಮಾರು ಮೂರು ವರ್ಷಗಳ ಹಿಂದಿನ ಮಾತಿದು. ಅದೊಂದು ದಿನ ರೇಷ್ಮಾಳೇ ಗಂಡ ಮನೆಯಲ್ಲಿ ಇರದಿರುವುದನ್ನು ಆನಂದ ಸುತಾರನಿಗೆ ತಿಳಿಸಿ ತಮ್ಮ ಮನೆಯ ಹಿತ್ತಲ ಬಾಗಿಲಿನಿಂದ ಬರುವಂತೆ ತಿಳಿಸಿದಳು. ಆ ದಿನಕ್ಕಾಗಿ ಆನಂದ ಸುತಾರ ಚಡಪಡಿಸುತ್ತಿದ್ದನು. ಅಂದು ಓಣಿಯಲ್ಲಿ ಯಾರು ಇರದಿರುವುದನ್ನು ಖಚಿತಪಡಿಸಿಕೊಂಡು ಕಳ್ಳಬೆಕ್ಕಿನಂತೆ ಹಿಂಬಾಗಿಲಿನಿಂದ ರೇಷ್ಮಾಳ ಮನೆಯನ್ನು ಆನಂದ ಸುತಾರ ಪ್ರವೇಶಿಸಿದ್ದನು. ಯಾವಾಗ ಆನಂದ ಬಂದನೋ ಆಗಲೇ ಓಡೋಡಿ ಬಂದು ಬಿಗಿದಪ್ಪಿಕೊಂಡು ಮುತ್ತಿನ ಮಳೆಗರೆದಳು. ಆನಂದನೂ ಕೂಡಾ ಅವಳ ಕ್ರಿಯೆಗೆ ಹೆಚ್ಚಾಗಿಯೇ ಪ್ರತಿಕ್ರಿಯಿಸಿದನು. 'ಯಾರಾದರೂ ಬಂದಾರು ಬೇಗ ಬೇಗ ಮುಗಿಸು' ಎಂದು ಲಗುಬಗೆಯಿಂದ ಇಬ್ಬರೂ ಒಂದಾದರು. ಆನಂದನಿಗೆ ಬರ ಗೆಟ್ಟಿದ್ದ ರೇಷ್ಮಾ ತನ್ನದೆಲ್ಲವನ್ನು ಸಮರ್ಪಿಸಿದಳು. ಆನಂದನೂ ಕೂಡಾ ಸಾಕು... ಸಾಕು ಎನ್ನುವಂತೆ ವಿಜೃಂಭಿಸಿ ಬೆವರಿಳಿಸಿದನು. ಪ್ರಥಮ ಮಿಲನದಂದು ಇಬ್ಬರು ಮಿಂದೆದ್ದರು. ಇಬ್ಬರೂ ಆಣೆ ಪ್ರಮಾಣ ಮಾಡಿ ಒಬ್ಬರನ್ನೊಬ್ಬರು ಬಿಟ್ಟಿರುವುದಿಲ್ಲವೆಂದರು. ಹೀಗೆಯೇ ಸಮಯ ಸಿಕ್ಕಾಗ ಆನಂದ ರೇಷ್ಮಾ ಒಂದಾಗ ತೊಡಗಿದರು. ಇತ್ತೀಚಿಗೆ ಇವರ ಅನೈತಿಕ ಸಂಬಂಧ ಎಷ್ಟೇ ಗೌಪ್ಯವಾಗಿದ್ದರೂ ಬಹಿರಂಗ ಆಗಿತ್ತು. ಆನಂದ ರೇಷ್ಮಾ ಸಮಯ ಸಿಕ್ಕಾಗ ಬೇರೆ ಕಡೆಗಳಲ್ಲಿ ಹೋಗಿ ಒಂದಾಗುತ್ತಿದ್ದರು. ಇವರಿಬ್ಬರು ಗಂಡ-ಹೆಂಡಿರಂತೆ ಎಂಬಂತೆ ಸಂಬಂಧ ಬೆಳೆಸಿ ಕೊಂಡರು. ಆನಂದನ ಖರ್ಚಿಗೆಂದು ರೇಷ್ಮಾ ಆಗಾಗ ಕೂಡಿಟ್ಟ ದುಡ್ಡು ಕೊಡತೊಡಗಿದ್ದಳು. ಪರಸ್ಪರ ಪ್ರೇಮಿಗಳಿಬ್ಬರು ಮೊಬೈಲ್ ಕರೆಗಳಲ್ಲಿ, ವಾಟ್ಸಪ್ ಚಾಟಿಂಗ್‌ನಲ್ಲಿ ಬ್ಯುಸಿಯಾಗಿ ರುತ್ತಿದ್ದರು. ಇತ್ತಿತ್ತಲಾಗಿ ಹೆಂಡತಿಯ ವರ್ತನೆಯಲ್ಲಿ ಅಗಾಧವಾದ ಬದಲಾವಣೆಯಾಗುತ್ತಿರುವುದನ್ನು ಕಂಡ ಗಂಡ ಶಿವಾನಂದನಿಗೆ ಇರಿಸು, ಮುರಿಸಾಗತೊಡಗಿತ್ತು.

### ಗಂಡನಿಗೆ ಸಂಶಯ... ಕಿರಿಕಿರಿ...

ರೇಷ್ಮಾಳ ಗಂಡ ಶಿವಾನಂದ ತೀರವಿರನಿಗೆ ಹೆಂಡತಿಯ ಮೇಲೆ ಸಂಶಯ ಬರತೊಡಗಿತ್ತು. ಇತ್ತಿತ್ತಲಾಗಿ ಗಂಡನನ್ನು ರೇಷ್ಮಾ ಸೇರುತ್ತಿರಲಿಲ್ಲ. ಆತನ ಊಟ... ಉಡುಗೆ ಬಗ್ಗೆ ಲಕ್ಷ ಕೊಡದೇ ಬರಿ ಮೊಬೈಲ್‌ನಲ್ಲಿ ಕಾಲ ಕಳೆಯುತ್ತಿದ್ದಳು. ಅದ ರಲ್ಲೂ ಊರಿನ ಸಂದಿ ಗೊಂದಿಗಳಲ್ಲಿ ರೇಷ್ಮಾ ಮತ್ತು ಆನಂದನ ಅನೈತಿಕ ಸಂಬಂಧದ ಬಗ್ಗೆ ಮಾತುಗಳು ಹೆಚ್ಚಾಗಿ ಕೇಳಿಬರ ತೊಡಗಿದ್ದವು. ಕೆಲವು ಜನ ಶಿವಾನಂದ ತೀರವಿರನಿಗೆ ಬೇಕಾದ ವರು 'ಆನಂದ ಸುತಾರ ಯಾಕೋ ನಿಮ್ಮ ಮನೆ ಕಡೆ ಬಹಳ ಬರಾತಾನು' ಎಂದಾಗ ಶಿವಾನಂದನ ತಲೆಯಲ್ಲಿ ಹುಳುಗಳು ಹರಿ ದಾಡತೊಡಗಿದವು. ಯಾಕೋ... ಆತನ ಸಂಶಯ ನಿಜವೇನೋ ಅನಿಸತೊಡಗಿತ್ತು. ಹೀಗಾಗಿ ಹೆಂಡತಿ ರೇಷ್ಮಾಳಿಗೆ ನೇರವಾಗಿ ಆನಂದನ ಕುರಿತು ಸಂಶಯ ವ್ಯಕ್ತಪಡಿಸುತ್ತ ಇನ್ನಿಲ್ಲದ ಕಿರಿಕಿರಿ ಮಾಡತೊಡಗಿದನು. ಇದನ್ನು ರೇಷ್ಮಾ ತನ್ನ ಪ್ರಿಯಕರ ಆನಂದನಿಗೆ ಹೇಳಿ ಗೋಳೊ ಎಂದು ಅಳತೊಡಗಿದ್ದಳು. 'ನಾವಿಬ್ಬರೂ ಹುಷಾರಾಗಿರೋಣ ನನ್ನ ಗಂಡನಿಗೆ ಸಂಶಯ ಬಂದಿದೆ' ಎಂದಿ ದ್ದಳು. ಶಿವಾನಂದ ಹೆಂಡತಿ ಮತ್ತು ಆಕೆಯ ಪ್ರಿಯಕರನ ಮೇಲೆ ಒಂದು ಕಣ್ಣಿರಿಸಿದ್ದನು. ಆದರೆ ಗಂಡನ ಕಣ್ತಪ್ಪಿಸಿ ಚಾಲಾಕಿ ಹೆಂಗಸು ರೇಷ್ಮಾ ತನ್ನ ಪ್ರಿಯಕರ ಆನಂದನೊಡನೆ ಸೇರುತ್ತಿದ್ದಳು. ಸಲುಗೆಯಿಂದ ಆನಂದನ ಜತೆ ಮಾತನಾಡು ವಾಗ ನೇರವಾಗಿ ಹೆಂಡತಿಗೆ ಶಿವಾನಂದ 'ಇದೆಲ್ಲಾ ಬೇಡಾ ಸರಿಯಲ್ಲ' ಎಂದು ಎಚ್ಚರಿಸಿದ್ದನು. ಶಿವಾನಂದನನ್ನು ಕಂಡು ಆನಂದ ಕೂಡಾ ತಲೆ ತಗ್ಗಿಸಿ ಸರ ಸರನೇ ನಡೆದು ಹೋಗುತ್ತಲಿ ದ್ದನು.

### ರೆಡ್ ಹ್ಯಾಂಡಾಗಿ ಗಂಡನ ಕೈಗೆ ಸಿಕ್ಕರು...

ತನ್ನ ಹೆಂಡತಿ ರೇಷ್ಮಾ ಮತ್ತು ಆನಂದ ಸುತಾರ ಮೇಲೆ


ಘಟನೆಯ ಕುರಿತು ಮಾಹಿತಿ ಪಡೆಯುತ್ತಿರುವ ಇನ್‌ಸ್ಪೆಕ್ಟರ್ ಎಸ್.ಸಿ. ಪಾಟೀಲ

ತೀವ್ರ ಸಂಶಯವಿದ್ದ ಶಿವಾನಂದ ತೀರವಿರ ಮೈಯೆಲ್ಲ ಕಣ್ಣಾಗಿರಿಸಿಕೊಂಡು ಏನಾದರೂ ಸರಿ ಹೆಂಡತಿ ಮತ್ತವಳ ಪ್ರಿಯಕರನನ್ನು ರೆಡ್ ಹ್ಯಾಂಡಾಗಿ ಹಿಡಿಯಲೇಬೇಕೆಂಬ ಹಠಕ್ಕೆ ಬಿದ್ದನು. ಇದಕ್ಕಾಗಿ ಸಮಯ ತಪ್ಪಿಸಿ ಮನೆಗೆ ಬರತೊಡಗಿ ದನು. ಕಾಮ... ಪ್ರೇಮದ ಅಮಲಿನಲ್ಲಿದ್ದ ರೇಷ್ಮಾ ತನ್ನ ಪ್ರಿಯ ಕರ ಆನಂದನನ್ನು ಕರೆಯಿಸಿಕೊಂಡು ಮನೆಯ ಹಿಂದಿದ್ದ ಹಿತ್ತಲಲ್ಲಿ ಒಬ್ಬರಿಗೊಬ್ಬರು ಮೈಗೈ ಮೈ ತಾಗಿಸಿಕೊಂಡು ತೀರಾ ಸಲುಗೆಯಿಂದ ಮಾತನಾಡಿಕೊಳ್ಳುತ್ತ ಮೈ ಮರೆತಿದ್ದರು. ಆಗ ಸದ್ದಿಲ್ಲದೇ ರೇಷ್ಮಾಳ ಗಂಡ ಶಿವಾನಂದ ಬಂದು ಮುಂದೆ ನಿಂತಾಗ ಒಮ್ಮೆಲೇ ಗಾಭರಿಗೊಂಡು ಆನಂದ ಸರಸರನೇ ಓಡಿ ದನು. ರೇಷ್ಮಾ ಮುಖ ಕೆಳಗೆ ಹಾಕಿ ಕುಳಿತುಬಿಟ್ಟಳು. ಆಗ ಶಿವಾನಂದ ಹೆಂಡತಿ ರೇಷ್ಮಾಳನ್ನು ತೀವ್ರ ತರಾಟೆಗೆ ತೆಗೆದು ಕೊಂಡು ಬಾಯಿಗೆ ಬಂದಂತೆ ಬಯ್ದು ಒಂದೆರಡು ಏಟು ಕೂಡಾ ಬಿಗಿದು ಇದೇ ಕೊನೆ ಇನ್ನು ಮುಂದೆ ನಿಮ್ಮ ಆಟ ಮುಂದುವರೆಸಿದರೆ ಹುಷಾರ್ ಎಂದಿದ್ದನು. ಇದರಿಂದ ತೀವ್ರ ಅವಮಾನಿತಳಾದ ರೇಷ್ಮಾ ತನ್ನ ಹಳೇ ಚಾಳಿ ಮುಂದುವರೆಸಿ ತನ್ನ ಪ್ರಿಯತಮನೊಂದಿಗೆ ಸಲುಗೆ ಮುಂದುವರೆಸಿದ್ದಳು. ಶಿವಾ ನಂದ ತೀರವಿರನನ್ನು ನೋಡಿದೊಡನೆ ಆನಂದ ಓಡಿ ಹೋಗುತ್ತಲಿದ್ದನು.


ಅನೈತಿಕ ಸಂಬಂಧಕ್ಕೆ ಹೆಣವಾಗಿರುವ ಪ್ರೇಮಿಗಳಾದ ರೇಷ್ಮಾ ಮತ್ತು ಆನಂದನ ಶವಗಳು ಒಂದೆಡೆ ಬಿದ್ದಿರುವುದು

### ಪೊಲೀಸರಿಗೆ ದೂರು... ರಾಜಿ ಸಂಧಾನ...

ಇತ್ತೀಚಿಗೆ ರೇಷ್ಮಾಳ ಗಂಡ ತೀರಾ ವ್ಯಗ್ರನಾಗಿದ್ದನು. ನಿನ್ನಿಂದ ಊರಲ್ಲಿ ಮುಖವೆತ್ತಿ ತಿರುಗದಂತಾಗಿದೆ. ನೀನು ಆತನ ಸಲುಗೆ ಬಿಡಬೇಕು ಎಂದಾಗ ಆಗಷ್ಟೇ 'ತಪ್ಪಾಗಿದೆ' ಎಂದು ಹೇಳುತ್ತಿದ್ದಳು. ಇತ್ತೀಚಿಗೆ ದಿನಾಂಕ 05-08-2025ರಂದು ಮಧ್ಯಾಹ್ನ ಗಂಡ ಹೊಲಕ್ಕೆ ಹೋದಾಗ ಪ್ರಿಯಕರ ಆನಂದನ ಜತೆಗೆ ಹರಟುತ್ತ ಮೈಮರೆತಿದ್ದಳು ರೇಷ್ಮಾ. ಆಗ ಶಿವಾನಂದ ಒಮ್ಮೆಲೆ ಬಂದಾಗ ಕೈಯಲ್ಲಿದ್ದ ಮೊಬೈಲ್ ತಕ್ಷಣ ಮೂಲೆಗೆ ಬಿಸಾಕಿದ್ದಳು. ತಕ್ಷಣ ಶಿವಾನಂದ ಮೊಬೈಲ್ ತೆಗೆದುಕೊಂಡು ಪರಿಶೀಲಿಸಲಾಗಿ ಅದು ಆನಂದ ಸುತಾರನ ಮೊಬೈಲ್ ನಂಬರ್ ಅದಾಗಿತ್ತು. ಸಿಟ್ಟಿಗೆದ್ದ ಶಿವಾನಂದ ಎರಡೇಟು ರೇಷ್ಮಾಳನ್ನು ಥಳಿಸಿ ಬಾಯಿಗೆ ಬಂದಂತೆ ಬಯ್ದನು. ಸದರಿ ಸಂಗತಿಯನ್ನು ಶಿವಾನಂದ ತಮ್ಮ ಸಂಬಂಧಿಕರ ಮುಂದೆ ತಿಳಿಸಿದನು. ಅವರ ನಿರ್ದೇಶನದಂತೆ ದಿನಾಂಕ 10-08-2025ರಂದು ನಂದಗಡ ಪೊಲೀಸ್ ಠಾಣೆಗೆ ತೆರಳಿ ಕರ್ತವ್ಯದ ಮೇಲಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಎಸ್.ಸಿ. ಪಾಟೀಲರನ್ನು ಕಂಡು ತನ್ನ ಹೆಂಡತಿ ರೇಷ್ಮಾ ಮತ್ತು ಆನಂದ ಸುತಾರ ಇವರಿಬ್ಬರ ಅನೈತಿಕ ಸಂಬಂಧದ ಕುರಿತು ಎಳೆ ಎಳೆಯಾಗಿ ವಿವರಿಸಿ ರೇಷ್ಮಾಳ ಪ್ರಿಯಕರ ಆನಂದ ಸುತಾರ ಮೇಲೆ ದೂರು ನೀಡಿದನು.

ಪೊಲೀಸ್ ಇನ್‌ಸ್ಪೆಕ್ಟರ್ ಎಸ್.ಸಿ. ಪಾಟೀಲ ತುಂಬಾ ಕುಶಾಗ್ರಮತಿ ಅಧಿಕಾರಿ. ದಿನಾಂಕ 11-08-2025ರಂದು ರೇಷ್ಮಾ ಮತ್ತವಳ ಪ್ರಿಯಕರ ಆನಂದ ಸುತಾರನನ್ನು ಠಾಣೆಗೆ ಕರೆಯಿಸಿದರು. ರೇಷ್ಮಾ ಮತ್ತವಳ ಪ್ರಿಯಕರನಿಗೆ ವಾಸ್ತವತೆಯ ಅರಿವು ಮೂಡಿಸಿ ಸೂಕ್ತ ತಿಳುವಳಿಕೆ ಹಾಗೂ ಕಠಿಣ ಕ್ರಮದ ಎಚ್ಚರಿಕೆ ನೀಡಿ ಇನ್ನು ಮುಂದೆ ನೀವಿಬ್ಬರೂ ನಿಮ್ಮ ಹೊಲಸು ಚಾಳಿ ಬಿಟ್ಟು ಒಳ್ಳೆಯವರಾಗಿ ಬದುಕಲು ಕಲಿಯಿರಿ ಎಂದು ತಿಳಿ ಹೇಳಿದರು. ಇನ್‌ಸ್ಪೆಕ್ಟರ್ ಎಸ್.ಸಿ. ಪಾಟೀಲರ ಬುದ್ಧಿಮಾತುಗಳಿಗೆ ಇಬ್ಬರೂ ಒಪ್ಪಿಕೊಂಡು ನಮ್ಮಿಂದ ತಪ್ಪಾಗಿದೆ ಇನ್ನೂ ಮುಂದೆ ಒಳ್ಳೆಯವರಾಗುತ್ತೇವೆಂದು ಹೇಳಿ ರಾಜಿ ಸಂಧಾನ ಮಾಡಿಕೊಂಡು ತಮ್ಮ ಮನೆಗಳಿಗೆ ಬಂದರು. ಇತ್ತ ರೇಷ್ಮಾ ಗಂಡನ ಕಾಲು ಹಿಡಿದು ಇದೊಂದು ಸಲ ಕ್ಷಮಿಸಿ ಎಂದು ಕಣ್ಣೀರು ಇಟ್ಟಳು.

### ಅನೈತಿಕ ಸಂಬಂಧ ನಿರಾಕರಿಸಿದಳು...

ರೇಷ್ಮಾಳನ್ನು ಬಿಟ್ಟಿರಲಾರದ ಪ್ರಿಯಕರ ಆನಂದ ರಾಜು ಸುತಾರ ತುಂಬಾ ಒದ್ದಾಡಿದನು. ಹಲವಾರು ಸಲ ಮೊಬೈಲ್ ಕರೆ ಮಾಡಿ 'ಪ್ಲೀಸ್ ರೇಷ್ಮಾ ನಿನ್ನ ಬಿಟ್ಟಿರಲಾಗದು. ಮತ್ತೇ ಮೊದಲಿನಂತೆ ನನ್ನ ಹೆಂಡತಿಯ ತರಹ ನಾನು ಹೇಳಿದಂತೆ ಕೇಳುತ್ತ ಇದ್ದುಬಿಡು' ಎಂದು ಹಲುಬಿದನು. ಇದಕ್ಕೆ ರೇಷ್ಮಾ ಕಡ್ಡಿ ತುಂಡು ಮಾಡಿದಂತೆ 'ಬೇಡಾ ಆನಂದ ಇನ್ನು ಮುಂದೆ ಬಲವಂತ ಮಾಡಬೇಡ. ಅದದ್ದಾಗಿದೆ ಇನ್ನು ಮುಂದೆ ನಿನ್ನ ಬದುಕು ನಿನಗೆ...ನನ್ನ ಬದುಕು ನನಗೆ ಯಾವುದೇ ಕಾರಣಕ್ಕೂ ಅನೈತಿಕ ಸಂಬಂಧ ಮುಂದುವರೆಸುವುದು ಖಂಡಿತಾ ಬೇಡ... ಮತ್ತು ಪದೇ... ಪದೇ ಈ ಕುರಿತು ಮೊಬೈಲ್ ಕರೆ ಮಾಡಬೇಡ' ಎಂದು ಹೇಳಿದಾಗ ಆನಂದ ಸುತಾರ ಹುಚ್ಚನಂತಾಗಿಬಿಟ್ಟನು. ನನಗೆ ಸಿಗದ ರೇಷ್ಮಾ ಇನ್ನು ಮುಂದೆ ಬದುಕಿರಬಾರದು ಎಂದು ನಿರ್ಧರಿಸಿಬಿಟ್ಟನು.

### 9 ಬಾರಿ ಚುಚ್ಚಿ... ಚುಚ್ಚಿ ಕೊಂದನು...

ಅಂದು ದಿನಾಂಕ 14-08-2025ರಂದು ಗುರುವಾರ ಸಮಯ ರಾತ್ರಿ 9.30 ಆಗಿತ್ತು. ಇತ್ತ ರೇಷ್ಮಾಳ ಗಂಡ ಹಾಲು ಹಾಕಲು ಡೈರಿಗೆ ಹೋಗಿದ್ದನು. ಮಕ್ಕಳು ಮನೆಯಲ್ಲಿದ್ದರು. ರೇಷ್ಮಾ ಅಡಿಗೆ ಮಾಡುತ್ತಿದ್ದಳು. ಇದೇ ಸಮಯದಲ್ಲಿ ಹಿತ್ತಲ ಬಾಗಿಲಿನಿಂದ ಏಕಾಏಕಿ ನುಗ್ಗಿದ ಆನಂದ ಸುತಾರ ರೇಷ್ಮಾಳ ಹತ್ತಿರ ಬಂದು ಅವಳನ್ನು ಎಳೆದಾಡಿ 'ನೀನು ನನ್ನ ಸಂಬಂಧ ನಿರಾಕರಿಸುತ್ತಿರುವೆ... ಅದಕ್ಕಾಗಿ ನೀನು ಬದುಕಬಾರದು' ಎಂದವನೇ ಸಪ್...ಸಪ್... ಎಂದು ಒಂದಲ್ಲ ಒಂಬತ್ತು ಸಾರಿ ಚಾಕುವಿನಿಂದ ಹೊಟ್ಟೆಗೆ, ಕಾಲಿಗೆ, ಕುತ್ತಿಗೆಗೆ, ಎದೆಗೆ ಬರ್ಬರವಾಗಿ ಇರಿದನು. 'ಅಯ್ಯೋ... ಅಮ್ಮಾ... ಸತ್ತೆ...' ಎಂದು ಚೀರುತ್ತಾ ತೀವ್ರ ರಕ್ತಸ್ರಾವದಿಂದ ವಿಲವಿಲನೇ ಒದ್ದಾಡುತ್ತ ಜೀವ ಬಿಟ್ಟಳು. ಮಕ್ಕಳ ಮುಂದೆ ರೇಷ್ಮಾ ಪ್ರಾಣ ಕಳೆದು ಕೊಂಡಳು.

### ತಾನು ಕೂಡಾ ಚಾಕುವಿನಿಂದ ಇರಿದುಕೊಂಡ...

ಇತ್ತ ಕಣ್ಣ ಮುಂದೆಯೇ ಬಿಟ್ಟಿರ ಲಾರದಷ್ಟು ಪ್ರೀತಿಸಿದ್ದ ಪ್ರೇಯಸಿ ರೇಷ್ಮಾ ತನ್ನ ಕೈಯಿಂದಲೇ ಉಸಿರು ಚಲ್ಲಿ ಕೊಲೆ ಯಾಗಿ ಹೋಗಿರುವುದನ್ನು ಕಂಡು ಆನಂದ ನಿಂತಲ್ಲಿಯೇ ನಡುಗಿ ಹೋದನು. ವಿಪರೀತವಾಗಿ ಹೆದರಿದ್ದ ಆತ ತಾನು ಬದುಕಿರಬಾರದು ಎಂದುಕೊಂಡು ಅದೇ ಚಾಕು ತೆಗೆದು ಕೊಂಡು ಮೂರ್ನಾಲ್ಕು ಬಾರಿ ಹೊಟ್ಟೆಗೆ ಇರಿದುಕೊಂಡನು. ಇರಿತದಿಂದ ಹೊಟ್ಟೆಯಲ್ಲಿನ ಕರುಳು ಹೊರ ಬಂದಿತ್ತು. ಪ್ರೇಯಸಿಯ ಶವದ ಪಕ್ಕದಲ್ಲಿ ಬಿದ್ದು ಹೊರಳಾಡುತ್ತಿದ್ದನು. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಕೊಲೆಯಾದ ರೇಷ್ಮಾ ಪತಿ ಶಿವಾನಂದ ಮತ್ತು ಸಂಬಂಧಿಕರು ಊರವರು ಬಂದು ರೇಷ್ಮಾಳ ಕೊಲೆ ಕಂಡು ನಡುಗಿದರು. ತೀವ್ರ ಗಂಭೀರ ಗಾಯಗಳಿಂದ ನರಳುತ್ತಿದ್ದ ಪ್ರಿಯಕರ ಆನಂದನನ್ನು ಖಾಸಗಿ ಆಸ್ಪತ್ರೆಗೆ ಸಾಗಿಸಿದರು.

### ಪೊಲೀಸರಿಗೆ ದೂರು... ಪಂಚನಾಮೆ...

ತನ್ನ ಹೆಂಡತಿ ರೇಷ್ಮಾಳನ್ನು ಕೊಲೆಗೈದು ತಾನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ ಆನಂದ ರಾಜು ಸುತಾರನ ಮೇಲೆ ನಂದಗಡ ಪೊಲೀಸ್ ಠಾಣೆಗೆ ತೆರಳಿ ದೂರನ್ನು ಶಿವಾ ನಂದ ತೀರವಿರ ನೀಡಿದನು. ದೂರು ಸ್ವೀಕರಿಸಿದ ಪಿಎಸ್‌ಐ ಎಸ್.ಎಸ್. ಬದಾಮಿ ತಕ್ಷಣ ಇನ್‌ಸ್ಪೆಕ್ಟರ್ ಎಸ್.ಸಿ. ಪಾಟೀಲ, ಬೈಲಹೊಂಗಲ ಡಿವೈಎಸ್ಪಿ ಡಾ. ವೀರಯ್ಯ ಹಿರೇಮಠ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ನಂದಗಡ ಠಾಣೆಯಲ್ಲಿ ದೂರು ದಾಖಲಿಸಿಕೊಂಡರು. ಮುಂದೆ ಇನ್‌ಸ್ಪೆಕ್ಟರ್ ಎಸ್.ಸಿ. ಪಾಟೀಲ ಮತ್ತು ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಧಾವಿಸಿ ಕೊಲೆಯಾಗಿ ಬಿದ್ದಿದ್ದ ರೇಷ್ಮಾಳ ಶವದ ಪಂಚನಾಮೆ ಮತ್ತು ಸಂಬಂಧಿಕರ, ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ಪಡೆದುಕೊಂಡು ಶವದ ಮರಣೋತ್ತರ ಪರೀಕ್ಷೆ ಜರುಗಿಸಿ ಶವವನ್ನು ವಾರಸುದಾರರಿಗೆ ಒಪ್ಪಿಸಿದರು. ಅದೇ ದಿನ ರಾತ್ರಿ ಡಿವೈಎಸ್ಪಿ ಡಾ. ವೀರಯ್ಯ ಹಿರೇಮಠ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸೂಕ್ಷ್ಮ ಪರಿಶೀಲನೆ ನಡೆಸಿ ತನಿಖಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

### ಪ್ರಿಯತಮ ಆನಂದ ಬದುಕಲಿಲ್ಲ...

ಪ್ರೇಯಸಿ ರೇಷ್ಮಾಳನ್ನು ಬರ್ಬರವಾಗಿ ಕೊಲೆಗೈದು ತಾನು ಚಾಕು ಇರಿದುಕೊಂಡು ತೀವ್ರ ಗಾಯಗೊಂಡು ಬೆಳಗಾವಿಯ ಖಾಸಗಿ ಆಸ್ಪತ್ರೆಯಲ್ಲಿ ಉಪಚಾರ ಫಲಿಸದೇ ಆನಂದ ರಾಜು ಸುತಾರ ಕೂಡಾ ಮೃತಪಟ್ಟನು. ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳಿಗೆ ಡಿವೈಎಸ್ಪಿ ಡಾ. ವೀರಯ್ಯ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾ ಶಂಕರ ಗುಳೇದ ನಿರ್ದೇಶನಗಳನ್ನು ನೀಡಿದ್ದಾರೆ. ರೇಷ್ಮಾ ಮತ್ತು ಆನಂದನ ಕುಟುಂಬ ವರ್ಗದವರ ದುಃಖ ಹೇಳತೀರದಾಗಿದೆ. ಅನೈತಿಕ ಸಂಬಂಧ ಎಂತಹ ಅನಾಹುತ ಮಾಡುತ್ತದೆ ಎನ್ನುವುದಕ್ಕೆ ಈ ವರದಿಯೇ ಒಂದು ದೊಡ್ಡ ಉದಾಹರಣೆ.

ರೇಷ್ಮಾಳ ಕೊಲೆಗೈದು ತಾನು ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ತನಿಖಾಧಿಕಾರಿಗಳಿಗೆ ಎಎಸ್‌ಐ ಬಿ.ಬಿ. ಆರೇರ, ಸಿಬ್ಬಂದಿಗಳಾದ ಆರ್.ಎಸ್. ಖೇಮಲಿ, ಶಿವಕುಮಾರ ತುರಮಂದಿ, ಎನ್.ಬಿ. ಬೆಳವಡಿ, ಬಸಯ್ಯ ಕರವಿನಕೊಪ್ಪ, ಅನಿಲ ಕೆಸರಕೊಪ್ಪ, ಎನ್.ಎ. ಚಂದರಗಿ ನೆರವಾಗಿದ್ದಾರೆ.

# ಬ್ರೂಟಲ್ ಮರ್ಡರ್ ಇನ್ ಮಾಗನೂರ್ ಸಿದ್ದೇಶ್ವರ ಬಾರ್!

6 ☞

ಜೊತೆ ಜಗಳ ಆಗಿತ್ತು! ಈ ಚಿಲ್ಲರೆ ವಿಚಾರವನ್ನ ಕೌಶಿಕ್ ತನ್ನ ಸ್ನೇಹಿತನಾಗಿದ್ದ ಯೋಗೇಶನಿಗೆ ತಿಳಿಸಿ, ಪಟೇಲ (ಮನೋಜ) ನನಗೆ ಹೊಡೆದು ಅವಮಾನ ಮಾಡ್ಬಿಟ್ಟ ಕನ್ಲಾ.... ಅವನ್ನ ಸುಮ್ನೆ ಬಿಡಬಾರ್ದು... ಅಂತ ಹೇಳಿ ಅವನ ಕಿವಿ ಕಚ್ಚಿ ಪಟೇಲನ ವಿರುದ್ಧ ಎತ್ತಿ ಕಟ್ಟಿಬಿಟ್ಟಿದ್ದ. ಮಾರನೇ ದಿವಸ ಯೋಗಿ ಮಳವಳ್ಳಿ ಪಟ್ಟಣದ ಬಾಲಾಜಿ ಬಾರ್ ನಲ್ಲಿ ಕುಳಿತುಕೊಂಡು, ಮನೋಜನನ್ನು ಅಲ್ಲಿಗೆ ಕರೆಸಿಕೊಂಡು ಪಬ್ಲಿಕ್‌ನಲ್ಲಿ ಅವನಿಗೆ ಚೆನ್ನಾಗಿ ಹೊಡಿದು ಬಿಟ್ಟಿದ್ದ. ಒದೆ ತಿಂದು ಅವಮಾನಿತನಾಗಿದ್ದ ಪಟೇಲ (ಮನೋಜ) ಅಂದಿನಿಂದ ಯೋಗೇಶನ ಮೇಲೆ ಜಿದ್ದು ಸಾಧಿಸುತ್ತ ಬಂದಿದ್ದು, ಕಳೆದ ಆಗಸ್ಟ್ 8ನೇ ತಾರೀಖು ಪಕ್ಕಾ ಪ್ಲಾನ್ ಮಾಡಿಕೊಂಡು ಯೋಗಿ ಕತೆ ಕ್ಲೋಸ್ ಮಾಡಿಬಿಟ್ಟಿದ್ದಾನೆ.



ಯೋಗೇಶನ ತಂದೆ ಮಧು, ತಾಯಿ ಸಿದ್ದಮ್ಮ ಹಾಗೂ ಸೋದರಿ ಶೃತಿ

## ಪ್ರೀ ಪ್ಲಾನ್ ಮರ್ಡರ್

ಅನುಮಾನವೇ ಇಲ್ಲಾ, ಇದು ಪ್ರೀಪ್ಲಾನ್ ಮರ್ಡರ್. ಅಂಥ ಪೈಲ್ವಾನ್ ದೇಹದ ಯೋಗೇಶನನ್ನು ಕೊಲ್ಲುವುದು ನರಪೇತಲ ಹೈದ ಪಟೇಲನಿಗೆ ಸಾಧ್ಯವೇ ಇರಲಿಲ್ಲ, ಅದು ಆಗುವಂತಿದ್ದರೆ ಯಾವಾಗಲೋ ಆಗಬೇಕಿತ್ತು. ಯೋಗಿ ಹೆಣ ಎಂದೋ ಬೀಳಬೇಕಿತ್ತು. ಆದರೆ, ಈ ನರ ಪೇತಲ ಪಟೇಲ ವರ್ಷದಿಂದಲೂ ಪ್ಲಾನ್ ಮಾಡ್ತನೇ ಇದ್ದ. ಉಗ್ರಾಣಪುರದ ದೊಡ್ಡಿ ಶ್ಯಾಮ ಯೋಗಿಯ ಬೆಸ್ಟ್ ಫ್ರೆಂಡ್. ಅವನನ್ನೇ ತನ್ನ ಬುಟ್ಟಿಗೆ ಕೆಡವಿ ಫಳಗಿಸಿಕೊಂಡಿದ್ದ ಪಟೇಲ, ಒಂದಿನ ಮುಂಚೆಯೇ ಯೋಗಿ ಮನೆಗೆ ಅವನನ್ನು ಕಳುಹಿಸಿ, ಅಲ್ಲೇ ತಂಗುವಂತೆ ಮಾಡಿ, ಬೆಳಿಗ್ಗೆ ಇನ್ನೊಬ್ಬನಿಂದ ಫೋನ್ ಮಾಡಿಸಿ, ಸಿದ್ದೇಶ್ವರ ಬಾರ್‌ಗೆ ಎಣ್ಣೆ ಪಾರ್ಟಿಗೆ ಕರೆಸಿಕೊಂಡು, ದುಷ್ಮನ್ ಯೋಗಿಯನ್ನು ಆರಾಮವಾಗಿ ಕತ್ತರಿಸಿ ಕೊಂದಿದ್ದಾನೆ.



ಶವಗಾರದ ಮುಂದೆ ಕುಟುಂಬಸ್ಥರ ರೋಧನ

ಚೂರು ಏರು ಪೇರಾಗಿದ್ರು ಇವರೆಲ್ಲರ ಹೆಣವನ್ನ ಅವನೊಬ್ಬನೇ ಕೆಡವುತ್ತಿದ್ದನೋ ಏನೋ. ಭೂ ಋಣ ಮುಗಿದು ಬಂದಿತ್ತಲ್ಲ... ಅಷ್ಟು ಗಟ್ಟಿ ಮುಟ್ಟಾಗಿದ್ದ 26ರ ಪ್ರಾಯದ ಪೈಲ್ವಾನ ಯೋಗೇಶ, ನರಪೇತಲರಿಂದ ಕೊಲೆಯಾಗಿ ಹೋಗಿದ್ದಾನೆ. ಅದಕ್ಕೇ ಹೇಳಿದ್ದು ಯಾರೇ ಆದರೂ ಜಾಸ್ತಿ ಮೆರೆಯಬಾರದು ಅಂತ.





ಕಿವಿ ಮತ್ತು ತಲೆ ಕೊಯ್ದಿರುವುದು

ಪಾಪ, ಯೋಗೇಶನ ತಂದೆ ಮಧು ಗಾರೆ ಕೆಲಸ ಮಾಡಿ ಬದುಕು ಸವೆಸುತ್ತಾರೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಇಬ್ಬರಿಗೂ ಮದುವೆ ಮಾಡಿ ಮರ್ಯಾದೆಯಾಗಿ ಬದುಕುತ್ತಿದ್ದರು. ಇವನೊಬ್ಬ ಉಡಾಳ ಮಗ ಯೋಗೇಶ ಓದು ಬರಹವನ್ನು ಅರ್ಧಕ್ಕೆ ಬಿಟ್ಟು, ಕ್ಯಾಬ್ ಓಡಿಸಿಕೊಂಡು ಸುತ್ತುತ್ತಾ, ಮುಕ್ಕಾಲು ಭಾಗ ಸಂಪಾದನೆಯನ್ನು ಎಣ್ಣೆಗೆ ಸುರಿದು, ಉಳಿದಿದ್ದನ್ನು ಅಪ್ಪನಿಗೆ ಕೊಡುತ್ತಿದ್ದನಂತೆ.

ಈತ ಹಗಲು ಹೊತ್ತೆ ಕುಡಿದು ಗಲಾಟೆ ಮಾಡಿಕೊಳ್ಳುತ್ತಿದ್ದ ವಿಚಾರ ಮಧು ಅವರಿಗೆ ಗೊತ್ತಿತ್ತು.ಕ್ಯಾಬ್ ಸಹವಾಸ ಬ್ಯಾಡ ಕಲಾ... ಬೇರೆ ಏನಾದ್ರೂ ಮಾಡುವಂತೆ ಬಿಟ್ಟಿಡು ಅದನ್ನ... ನೀ ಗೆಯ್ಯದೆ ಇದ್ರು ಪರವಾಗಿಲ್ಲ ಮರ್ಯಾದೆಯಾಗಿ ಮನೇಲಿರು... ನಾನು ದುಡಿದು ಹಾಕ್ತೇನೆ ಅಂತಿದ್ದರಂತೆ. ಆದರೆ, ಈ ಉಡಾಳ ಪಾಳೇಗಾರ ಮಗ ಅಪ್ಪ ಅಮ್ಮರ ಮಾತನ್ನು ಕೇಳಲಿಲ್ಲ, ಅಕ್ಕ ಬಾವರ ಮಾತನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ, ತನಗಿಷ್ಟ ಬಂದಂಗೆ ನಡೆದ. ಕಡೆಗೆ, ಇಂಥ ದುರ್ಮರಣ!



ಪತ್ರಿಕಾಗೋಷ್ಠಿಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮತ್ತು ಟೀಮ್

ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಡಿಷನಲ್ ಎಸ್ಪಿ ತಿಮ್ಮಯ್ಯ, ಮಳವಳ್ಳಿ ಉಪ ವಿಭಾಗದ ಡಿವೈಎಸ್ಪಿ ಕೃಷ್ಣಪ್ಪನವರ ಮಾರ್ಗದರ್ಶನ ಹಾಗೂ ನೇತೃತ್ವದಲ್ಲಿ ಸಿಪಿಐ ಮಹೇಶ್ ಯೋಗೇಶ್ ಕೊಲೆ ಪ್ರಕರಣವನ್ನು ಭೇದಿಸಿ, ಆರೋಪಿಗಳಾದ ಮನೋಜ್ (ಪಟೇಲ) ನಂದನ್, ಗುರುಪ್ರಸಾದ್ (ಡಾಲಿ) ಹಾಗೂ ಶ್ಯಾವ್ ನಾಲ್ವರನ್ನು ಬಂಧಿಸಿದ್ದಾರೆ. ತನಿಖೆ ಮುಂದುವರೆದಿದ್ದು, ಇನ್ನೂ ಕೆಲವರ ಬಂಧನವಾಗಬೇಕಿದ್ದು, ಅವರ ಪತ್ತೆಕಾರ್ಯ ಮುಂದುವರೆದಿದೆ.

---



ಡಾ. ಚಂದ್ರಗುಪ್ತ



ಶಾಂತರಾಜು



ಕಲಾ ಕೃಷ್ಣಸ್ವಾಮಿ



ಡಾ. ರಾಮಕೃಷ್ಣ



ಎನ್. ವೆಂಕಟೇಶ್



ಪ್ರಕಾಶ್ ರಾಥೋಡ್



ಬದರಿನಾಥ್

## ರಾಷ್ಟ್ರಪ್ರಶಸ್ತಿ ಪುರಸ್ಕೃತ ಪೊಲೀಸ್ ಅಧಿಕಾರಿಗಳಿಗೆ 'ಪೊಲೀಸ್ ನ್ಯೂಸ್' ವಾರಪತ್ರಿಕೆಯ ಶುಭಾಶಯಗಳು



ಪ್ರವೀಣ್‌ಬಾಬು



ಬಿ.ಎಸ್. ಸತೀಶ್



ಶಾಂತಾರಾಮ



ಎಡ್ವಿನ್ ಪ್ರದೀಪ್



ಝೂನ್ಸಿರಾಣಿ



ಸುಜನ ಶೆಟ್ಟಿ





ಗುರುರಾಜ



ರಾಕೇಶ್



ಸಂಶುದ್ದೀನ್



ಶಂಕರ ವೈ.



ಅಲಂಕಾರ ರಾಕೇಶ್



ರವಿ ಎಲ್.

# ತಿಗಳರಪೇಟೆಯಲ್ಲಿ ಒಂದೇ ಕುಟುಂಬದ ಐವರು ಸಜೀವ ದಹನವಾದರಲ್ಲೋ...

**ತಿಗಳರ ಪೇಟೆಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಗೃಹೋಪಯೋಗಿ ವಸ್ತುಗಳ ವ್ಯಾಪಾರಿ ಕುಟುಂಬದ ಐವರು ಸಜೀವ ದಹನಗೊಂಡಿರುವ ದಾರುಣ ಘಟನೆ ರಾಜಧಾನಿಯ ವಾಣಿಜ್ಯ ಚಟುವಟಿಕೆಗಳ ಕೇಂದ್ರವಾದ ಚಿಕ್ಕಪೇಟೆ ಒಡಲಿನ ನಗರ್ತ ಪೇಟೆ/ತಿಗಳರಪೇಟೆಯಲ್ಲಿ ನಡೆದಿದೆ...**





ಅದೇನು ಆಕಸ್ಮಿಕವೋ ಅಥವಾ ಯಾರಾದರೂ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿದ್ದೋ ಕಾಣೆ! ನಸುಕಿನ ಜಾವ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಗೃಹೋಪಯೋಗಿ ವಸ್ತುಗಳ ವ್ಯಾಪಾರಿ,ಪತ್ನಿ,ಇಬ್ಬರು ಮಕ್ಕಳು ಹಾಗೂ ಸಂಬಂಧಿ ಸೇರಿದಂತೆ ಒಟ್ಟು ಐವರು



ಸಜೀವ ದಹನಗೊಂಡಿರುವ ದಾರುಣ ಘಟನೆ ವಾಣಿಜ್ಯ ಚಟುವಟಿಕೆಗಳ ಕೇಂದ್ರ ಪ್ರದೇಶವಾದ ನಗರ್ತ ಪೇಟೆಯಲ್ಲಿ ಶನಿವಾರ ನಸುಕಿನಲ್ಲಿ ನಡೆದಿದೆ!

ತಿಗಳರಪೇಟೆ ನಿವಾಸಿಗಳಾದ ಮದನ್‌ಕುಮಾರ್ ಪುರೋಹಿತ್ (36), ಪತ್ನಿ ಸಂಗೀತಾ ದೇವಿ (34), ಮಕ್ಕಳಾದ ಮಿಥೇಶ್ (8), ವಿಹಾನ್ (5) ಹಾಗೂ ಸಂಬಂದಿ ಸುರೇಶ್ (23) ಮೃತ ದುರ್ದೈವಿಗಳು. ಅದೃಷ್ಟ ವಾಶಾತ್ ಇದೇ ಕಟ್ಟಡದಲ್ಲಿ ನೆಲೆಸಿದ್ದ ಮತ್ತೊಂದು ವ್ಯಾಪಾರಿ ಕುಟುಂಬದ ಐವರು ಆ ಕಟ್ಟಡದಿಂದ ಬೇರೊಂದು ಕಟ್ಟಡಕ್ಕೆ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮನೆ ಕಟ್ಟಡಗಳಲ್ಲೇ ಇದ್ದ ಗೋದಾಮಿನಲ್ಲಿ ನಸುಕಿನ ಜಾವ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದ್ದು,ಅಕ್ಕಪಕ್ಕದ ಎರಡು ಕಟ್ಟಡಗಳಿಗೆ ಅಗ್ನಿ ಜ್ವಾಲೆ ಆವರಿಸಿವೆ. ಆ ವೇಳೆ ಕಟ್ಟಡದಲ್ಲೇ ಇದ್ದ ಮದನ್ ಕುಮಾರ್, ಅವರ ಕುಟುಂಬ ಹಾಗೂ ಪಕ್ಕದ ಕಟ್ಟಡದ ಗೋದಾಮಿನಲ್ಲಿ ಮಲಗಿದ್ದ ಸುರೇಶ್ ಅವರು ಅಗ್ನಿಗೆ ಆಹುತಿಯಾಗಿದ್ದಾರೆ. ಘಟನಾ ಸ್ಥಳಕ್ಕೆ ತೆರಳಿದ ಅಗ್ನಿಶಾಮಕ ದಳ ಸಿಬ್ಬಂದಿ ಸತತ 15 ತಾಸು ಕಾರ್ಯಾಚರಣೆ ಬಳಿಕ ಬೆಂಕಿ ನಂದಿಸಿದ್ದಾರೆ.

**ಮನೆಗಳೇ ಗೋದಾಮು!**

ರಾಜಸ್ಥಾನ ಮೂಲದ ಮದನ್ ಕುಮಾರ್ ಬಾಲ್ಯದಲ್ಲೇ ನಗರಕ್ಕೆ ವಲಸೆ ಬಂದಿದ್ದು, ತಮ್ಮ ಸಂಬಂಧಿಕರ ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆಯಲ್ಲಿ ಕೆಲಸಕ್ಕಿದ್ದರು. ನಂತರ ತಾವೇ ಸ್ವಂತ ಉದ್ದಿಮೆ ಸ್ಥಾಪಿಸಿ ಹದಿನೈದು ವರ್ಷಗಳ ಹಿಂದೆ ಸ್ವತಂತ್ರವಾಗಿ ವ್ಯಾಪಾರ ಶುರು ಮಾಡಿದ್ದು, ತಿಗಳರಪೇಟೆಯ ಮುಖ್ಯರಸ್ತೆಯಲ್ಲಿ ಮಹಾಲಕ್ಷ್ಮಿ ಹೋಂ ಅಪ್ಲೈನ್ಸ್ ಹೆಸರಿನಲ್ಲಿ ಅಂಗಡಿ ತೆರೆದಿದ್ದರು.



ತಮ್ಮ ಅಂಗಡಿ ಸಮೀಪದ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಎರಡನೇ ಮಹಡಿಯಲ್ಲಿ ಒಂದು ರೂಮ್ ಅನ್ನು ಬಾಡಿಗೆಗೆ ಪಡೆದುಕೊಂಡು ಅಲ್ಲಿ ಕುಟುಂಬದ ಜತೆ ನೆಲೆಸಿದ್ದರು. ಈ ನಾಲ್ಕು ಅಂತಸ್ತಿನ ಕಟ್ಟಡದ 1, 2ನೇ ಮನೆಗಳನ್ನು ಗೋದಾಮು ಮಾಡಿಕೊಂಡಿದ್ದ ಮದನ್, ಅದೇ ಕಟ್ಟಡದ 3ನೇ ಮನೆಯಲ್ಲಿ ತಾವು ನೆಲೆಸಿದ್ದರು. ನಾಲ್ಕನೇ ಹಂತದಲ್ಲಿ ಬೇರೊಬ್ಬ ವ್ಯಾಪಾರಿ ಕುಟುಂಬ ನೆಲೆಸಿತ್ತು.

ಇದೇ ಕಟ್ಟಡಕ್ಕೆ ಅಂಟಿಕೊಂಡಿದ್ದ ಮೂರನೇ ಅಂತಸ್ತಿನ ಕಟ್ಟಡದ ಕೆಳ ಹಂತದಲ್ಲಿಯೂ ಅಂಗಡಿಗಳಿವೆ. ಇನ್ನುಳಿದ ಮೂರು ಹಂತದಲ್ಲಿ ಗೋದಾಮುಗಳಿದ್ದವು. ಇದರಲ್ಲೊಂದು ಗೋದಾಮು ಸುರೇಶ್ ಅವರಿಗೆ ಸೇರಿತ್ತು. ತಿಗಳರಪೇಟೆಯ ಮುಖ್ಯರಸ್ತೆಯಲ್ಲಿ ಶ್ರೀ ಮಂಜು ಗ್ಲಾಸ್ ಆ್ಯಂಡ್ ಕ್ರೋಕರಿ ಹೆಸರಿನ ಅಂಗಡಿಯನ್ನು ಅವರ ಸಂಬಂದಿಕ ಸುರೇಶ್ ನಡೆಸುತ್ತಿದ್ದು, ಪ್ರತಿದಿನ ರಾತ್ರಿ ಗೋದಾಮಿಗೆ ಬಂದು ಇಲ್ಲಿಯೇ ಮಲಗುತ್ತಿದ್ದರು.

**ಬೀಗ ಹಾಕಿದ್ದ ಮದನ್!**

ಮನೆ ಕೆಳಗೆಯೇ ಗೋದಾಮು ಇದ್ದ ಕಾರಣ ಮದನ್ ರಾತ್ರಿ ಪತ್ನಿ ಹಾಗೂ ಮಕ್ಕಳು ಮಲಗಿದ ಬಳಿಕ ಮನೆ ಬಾಗಿಲಿಗೆ ಬೀಗ ಹಾಕಿಕೊಂಡು ಬಂದು ಗೋದಾಮಿನಲ್ಲಿ ಪ್ಯಾಕಿಂಗ್ ಕೆಲಸ ಮಾಡುತ್ತಿದ್ದರು. ಅಂತೆಯೇ ಶುಕ್ರವಾರ ಮಧ್ಯರಾತ್ರಿ ಸಹ ಗೋದಾಮಿನಲ್ಲಿ ಪ್ಯಾಕಿಂಗ್ ಕೆಲಸದಲ್ಲಿ ನಿರತರಾಗಿದ್ದರು. ಆ ವೇಳೆ ನಸುಕಿನಲ್ಲಿ ಸುಮಾರು 2.45ಕ್ಕೆ ಶಾರ್ಟ್ ಸರ್ಕ್ಯೂಟ್ ನಿಂದ ಬೆಂಕಿ ಕಿಡಿ ಹೊತ್ತಿಕೊಂಡಿದ್ದು, ಅಲ್ಲಿ ತುಂಬಿಡಲಾಗಿದ್ದ ಪ್ಲ್ಯಾಸ್ಟಿಕ್ ಹಾಗೂ ಮರದ ವಸ್ತುಗಳಿಗೆ ಬೆಂಕಿಯ ತೀವ್ರತೆ ಹೆಚ್ಚಾಗಿದೆ ಎನ್ನಲಾಗಿದೆ! ಬಳಿಕ ಬೆಂಕಿ ಕೆನ್ನಾಲಿಗೆ ಇಡೀ ಕಟ್ಟಡವನ್ನು ಕ್ಷಣಾರ್ಧದಲ್ಲಿ ವ್ಯಾಪಿಸಿದ್ದು ಏನಾಯಿತು ಎಂದು ಅರಿಯುವ ವೇಳೆಗೆ ಮದನ್ ಅವರೇ ಬೆಂಕಿಗೆ ಆಹುತಿಯಾಗಿದ್ದಾರೆ!

**ಕಟ್ಟಡಕ್ಕೆ ಜಿಗಿದು ಜೀವ ಉಳಿಸಿಕೊಂಡರು!**

ಇತ್ತ ಬಾಗಿಲಿಗೆ ಬೀಗ ಹಾಕಿದ್ದ ಪರಿಣಾಮ,



ಮನೆಯಿಂದ ಹೊರಬರಲಾಗದೆ ಮದನ್ ಪತ್ನಿ ಸಂಗೀತಾ ದೇವಿ ಹಾಗೂ ಮಕ್ಕಳೂ ಬೆಂಕಿಯಲ್ಲಿ ಬೆಂದು ಹೋಗಿದ್ದಾರೆ! ಪಕ್ಕದ ಕಟ್ಟಡಕ್ಕೂ ಅಗ್ನಿ ವ್ಯಾಪಿಸಿದ್ದರಿಂದ ಆ ಗೋದಾಮಿನಲ್ಲಿ ಮಲಗಿದ್ದ ಸುರೇಶ್ ಕೂಡ ಅಗ್ನಿಗೆ ಅಹುತಿಯಾಗಿದ್ದಾರೆ. ಆದರೆ, ಮದನ್ ಮನೆಯ ನಾಲ್ಕನೇ ಹಂತದಲ್ಲಿ ನೆಲೆಸಿದ್ದ ವ್ಯಾಪಾರಿ ಕುಟುಂಬದ ಐವರು, ಅನಾಹುತವನ್ನು ಅರಿತ ಕೂಡಲೇ ಮೇಲಿನ ಮಹಡಿಗೆ ಓಡಿ ಹೋಗಿ, ಅಲ್ಲಿಂದ ಪಕ್ಕದ ಕಟ್ಟಡಕ್ಕೆ ಜಿಗಿದು ಜೀವ ಉಳಿಸಿಕೊಂಡಿದ್ದಾರೆ! ☯

---

7 ☞

ಮಾರಾಟ ಮಾಡಿ ಪೊಲೀಸರಿಗೆ ಸಿಕ್ಕಿ ಬೀಳುವ ಭಯದಲ್ಲಿ ಹೊರರಾಜ್ಯಕ್ಕೆ ಪರಾರಿಯಾಗಿ ತಮಿಳುನಾಡಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಆರೋಪಿಯಿಂದ ರೂ. 16 ಲಕ್ಷ ಮೌಲ್ಯದ ವಿವಿಧ ಕಂಪನಿಯ 48 ಮಾದರಿಯ ಮೊಬೈಲ್‌ಫೋನ್ ಜಪ್ತಿ ಮಾಡಿದ್ದಾರೆ. ಇತ್ತ ಎಚ್‌ಎಸ್‌ಆರ್ ಲೇಔಟ್ ಠಾಣೆಯ ಗಾಂಜಾ ಗಿರಾಕಿಯೊಬ್ಬನ ಬಂಧಿಸಿದ್ದು 13.40 ಲಕ್ಷ ರೂ. ಮೌಲ್ಯದ ಗಾಂಜಾವನ್ನು ಜಪ್ತಿ ಹೊಡೆದಿದ್ದಾರೆ. ಅತ್ತ ಯಲಹಂಕ ಕಡೆ ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ 3.40 ಲಕ್ಷ ರೂ. ಮೌಲ್ಯದ ಡ್ರಗ್ಸ್ ಅನ್ನು ಜಪ್ತಿ ಮಾಡಿದ್ದಾರೆ.

**ಮೂಲ ವ್ಯಕ್ತಿ ಹುಡುಕುವುದೇ ಸವಾಲ್!**

ರಾಜ್ಯದಲ್ಲಿ ಡ್ರಗ್ಸ್ ದಂಧೆ ದಿನೇ ದಿನೇ ವ್ಯಾಪಕವಾಗಿ ಹರಡುತ್ತಿದ್ದು ಇದನ್ನು ಮಟ್ಟ ಹಾಕಲು ಆಡಳಿತ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿದ್ದು ದಂಧೆಯಲ್ಲಿ ತೊಡಗುವವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಿರುವುದಾಗಿ ಇತ್ತೀಚೆಗಷ್ಟೇ ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದ್ದರು. ಅಂಕಿ-ಅಂಶಗಳ ಪ್ರಕಾರ ಈ ಎರಡು ವರ್ಷಗಳಲ್ಲಿ 13171 ಮಾದಕ ದ್ರವ್ಯ ಪ್ರಕರಣಗಳು ದಾಖಲಾಗಿವೆ. ಪೊಲೀಸರು ಮಾದಕ ವ್ಯಸನಿಗಳನ್ನು ಪತ್ತೆ ಹಚ್ಚಿ ಬಂಧಿಸುತ್ತಿದ್ದಾರೆಯೇ ಹೊರತು ಡ್ರಗ್ ಪೆಡ್ಲರ್‌ಗಳು ಸುಲಭದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿಲ್ಲ.

**ಈ ಜಾಲದ ಮೂಲ ಪತ್ತೆಯೇ ಸವಾಲಾಗಿದೆ....**

ಈ ನಡುವೆ ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಮಾಧಕ ವಸ್ತು ಸಾಗಣೆ, ಸೇವನೆ ಆರೋಪದಡಿಯಲ್ಲಿ 13,171 ಪ್ರಕರಣಗಳು ದಾಖಲಾಗಿದ್ದು, 12,076 ಆರೋಪಿಗಳ ಬಂಧನವಾಗಿದೆ. ರಾಜ್ಯದಲ್ಲಿ ಡ್ರಗ್ಸ್ ದಂಧೆಯನ್ನು ಸಂಪೂರ್ಣವಾಗಿ ಮಟ್ಟ ಹಾಕುವ ಬಗ್ಗೆ ಸರ್ಕಾರ ಹೊರಡಿಸಿದ್ದ ಆದೇಶವನ್ನು ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಪ್ರಶ್ನಿಸಿದ್ದರು. ರಾಜ್ಯದ ಪ್ರತಿಷ್ಠಿತ ಕಾಲೇಜುಗಳಲ್ಲಿ ಎಗ್ಗಿಲ್ಲದೆ ಡ್ರಗ್ಸ್ ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಇದೆಯೇ ಎಂದು ಪ್ರಶ್ನೆ ಮಾಡಿದ್ದರು. ಅಲ್ಲದೆ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಪ್ರಶ್ನಿಸಿದ್ದರು.



ಇದಕ್ಕೆ ಗೃಹ ಇಲಾಖೆ, ಮಾದಕ ವಸ್ತುಗಳ ಮಾರಾಟ ಜಾಲವನ್ನು ಪತ್ತೆ ಹಚ್ಚಿ ಅವರ ಮೊಬೈಲ್ ಸಿಡಿಆರ್ ಅನ್ನು ವಿಶ್ಲೇಷಣೆ ಮಾಡಿ ಮಾದಕ ವಸ್ತುಗಳ ಮಾರಾಟದ ಮೂಲಕ ಬಗ್ಗೆ ಮಾಹಿತಿ ಸಂಗ್ರಹಿಸಿ ನೀಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿತ್ತು.

**ಬಾರ್ ಕ್ಲಬ್‌ಗಳ ಮೇಲೆ ನಿಗಾವಹಿಸಿ**

ಯುವಕರು ಹೆಚ್ಚಾಗಿ ಸೇರುವ ಬಾರ್ ಅಂಡ್ ರೆಸ್ಟೋರೆಂಟ್, ಕಾಫಿ ಡೇ, ಪಬ್ ಮುಂತಾದ ಸ್ಥಳಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ಮಾಹಿತಿ ಸಂಗ್ರಹಿಸಿ, ನಗರದಲ್ಲಿರುವ ಬಾರ್ ರೆಸ್ಟುರಾಂಟ್‌ಗಳು, ಕ್ಲಬ್‌ಗಳ ಮೇಲೆ ಹೆಚ್ಚಿನ ನಿಗಾ ವಹಿಸಿ ಡ್ರಗ್ಸ್ ದಂಧೆಕೋರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೂಡ ಗೃಹ ಸಚಿವಾಲಯ ತಿಳಿಸಿದೆ. ಗಮನಿಯ ವಿಚಾರ ಏನೆಂದರೆ, ಇತ್ತೀಚಿಗೆ ಎಂಡಿಎಂ ಮಾತ್ರೆ, ಪುಡಿ ಮಾತ್ರವಲ್ಲದೆ ವಿವಿಧ ನಮೂನೆಯಲ್ಲಿ ಬಣ್ಣ ಬಣ್ಣದಲ್ಲಿ ಡ್ರಗ್ಸ್ ಮಾರು ಕಟ್ಟೆಗೆ ಲಗ್ಗೆ ಇಟ್ಟಿರುವುದು ಆತಂಕ ಕಾರಿಯಾಗಿದೆ! ಈ ಬಗ್ಗೆ ವಿಧಾನಸಭೆ ಕಲಾಪ ದಲ್ಲಿ ಚರ್ಚೆಯಗುತ್ತಿದೆ. ಡ್ರಗ್ಸ್ ದಂಧೆಗೆ ಕಡಿವಾಣ ಹಾಕುವ ಬಗ್ಗೆ ಯಾರೇ ಪ್ರಶ್ನೆ ಕೇಳಿದರೂ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಮಾತ್ರ ಸಿದ್ದ ಉತ್ತರ ನೀಡುತ್ತಲೇ ಬಂದಿದೆ ಒರತು, ದಂಧೆಗೆ ಬ್ರೇಕ್ ಬಿದ್ದಿಲ್ಲ!

ಅಲ್ಲದೆ, ದಂಧೆಗೆ ಕಡಿವಾಣ ಹಾಕುವ ಭರವಸೆ ನೀಡುತ್ತಾ, ದಿನೇ ದಿನೇ ಮಾದಕ ವ್ಯಸನಿಗಳನ್ನು ಬಂಧಿಸುತ್ತಲೇ ಇದೆ! ಅದರ ಹೊರತಾಗಿ ಇದರ ಮೂಲ ಭೇದಿಸುವ ಕೆಲಸ ಪೊಲೀಸ್ ಇಲಾಖೆಯಿಂದ ಕರಾರುವಾಕ್ಕಾಗಿ ನಡೆಯುತ್ತಿಲ್ಲ ಎಂಬ ದೂರು ಸಾರ್ವಜನಿಕ ವಲಯದಿಂದ ಪ್ರತಿಧ್ವನಿಸುತ್ತಲೇ ಇದೆ. ಈ ನಿಟ್ಟಿನಲ್ಲಿ ಗೃಹ ಇಲಾಖೆ, ಪೊಲೀಸ್ ಇಲಾಖೆ ಇನ್ನಷ್ಟು ಎಚ್ಚೆತ್ತುಕೊಳ್ಳಬೇಕಾಗಿದೆ! ☯





# ಆನ್‌ಲೈನ್ ವಂಚಕರಿಂದ 36 ಲಕ್ಷ ರೂ ಪಂಗನಾಮ!

ಬಾಗಲಕೋಟೆ

✍ ಮಂಜುನಾಥ ಈಶ್ವರ ಕರೋಳಿ

ಸೈಬರ್ ಕ್ರೈಂ ಇತ್ತೀಚಿನ ದಿನಗಳಲ್ಲಿ ಆನಲೈನ್ ವಂಚಕರು ಡಿಜಿಟಲ್ ನೆಟವರ್ಕ್ ಸಾಧನಗಳನ್ನು ಬಳಸಿಕೊಂಡು ಹ್ಯಾಕಿಂಗ್ ಅಥವಾ ದೂರವಾಣಿ ಸಂಪರ್ಕದಿಂದ ಅಮಾಯಕರನ್ನು ನಂಬಿಸಿ ಅವರ ಖಾತೆಗಳಿಂದ ಹಣ ಲಪಟಾಯಿಸುವುದು ಸರ್ವೇಸಾಮಾನ್ಯವಾಗಿದೆ. ಈ ಸೈಬರ್ ವಂಚಕರು ನಾವು ಬ್ಯಾಂಕ್‌ನಿಂದ ಕರೆ ಮಾಡುತ್ತಿದ್ದೀವಿ ನಿಮ್ಮ ಖಾತೆಯನ್ನು ನವೀಕರಣ ಮಾಡಲಾಗುವುದು. ನಿಮ್ಮ ಮೊಬೈಲ್ ಸಂಖ್ಯೆಗೆ ಒಂದು ಒಟಿಪಿ ಸಂದೇಶ ಬಂದಿದೆ. ಆ ನಂಬರನ್ನು ನಮಗೆ ಹೇಳಿ ಅಂತ ಕ್ಷಣಾರ್ಧದಲ್ಲೇ ಅವರ ಖಾತೆಯನ್ನು ಖಾಲಿ ಮಾಡುವರು. ಮತ್ತೊಂದು ಬಗೆಯಲ್ಲಿ ಅಮಾಯಕರಿಗೆ ಕರೆ ಮಾಡಿ ನಿಮ್ಮ ಹೆಸರಿನಲ್ಲಿ ಒಂದು ಆಫರ್ ಬಂದಿದೆ ಅಥವಾ ನೀವು ಒಂದಿಷ್ಟು ಹಣ ಹೂಡಿಕೆ ಮಾಡಿದರೆ ಅದನ್ನು ಡಬಲ್ ಮಾಡಿಕೊಡುತ್ತೇವೆ ಅಂತಾ ಹಣ ಲಪಟಾಯಿಸಿ ವಂಚಿಸುತ್ತಿದ್ದಾರೆ.


ಎಸ್ಪಿ ಸಿದ್ಧಾರ್ಥ ಗೋಯಲ್‌ಅ


ಅ॥ ಎಸ್ಪಿ ಪ್ರಸನ್ನ ದೇಸಾಯಿ

ಇದರ ಬಗ್ಗೆ ಪೊಲೀಸ್ ಇಲಾಖೆ, ಸೈಬರ್ ಅಪರಾಧ ವಿಭಾಗ ಇಲಾಖಾ ಜಾಗೃತಿ ಕಾರ್ಯಕ್ರಮಗಳನ್ನು ಜನರಲ್ಲಿ ಮೂಡಿಸುತ್ತಿದ್ದರೂ ಈ ಆನ್‌ಲೈನ್ ವಂಚಕರ ಜಾಲ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಅದೇ ರೀತಿಯಲ್ಲಿ ಬಾಗಲಕೋಟ ಜಿಲ್ಲೆಯ ಮುಧೋಳ ಠಾಣಾ ವ್ಯಾಪ್ತಿಗಳಲ್ಲಿ ಎರಡು ಪ್ರತ್ಯೇಕ ಪ್ರಕರಣದಲ್ಲಿ ಬರೋಬ್ಬರಿ ಸುಮಾರು 36,63,616, ರೂ. ಪಂಗನಾಮ ಹಾಕಿದ್ದಾರೆ

ಬಾಗಲಕೋಟ ಜಿಲ್ಲೆಯ ಮುಧೋಳದಲ್ಲಿ ಒಂದೇ ವಾರದಲ್ಲಿ ಈ ಆನಲೈನ್ ವಂಚಕರು ಸುಮಾರು 36 ಲಕ್ಷ ರೂಪಾಯಿಗಳನ್ನು ಯುವಕರಿಂದ ವಂಚನೆ ಮಾಡಿದ್ದಾರೆ. ಆನ್‌ಲೈನ್ ವಂಚಕರಿಂದ ಜಾಗೃತರಾಗಿರಿ ಎಂದು ಪೊಲೀಸ್ ಇಲಾಖೆ ನಿತ್ಯ ನಿರಂತರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರೂ ವಂಚನೆಗೊಳಗಾಗುವರ ಸಂಖ್ಯೆ ಮಾತ್ರ ಕಡಿಮೆಯಾಗುತ್ತಿಲ್ಲ, ಮುಧೋಳ ಪೊಲೀಸ್ ಠಾಣೆಯಲ್ಲಿ ಒಂದೇ ವಾರದ ಅಂತರದಲ್ಲಿ ಎರಡು ಆನಲೈನ್ ವಂಚನೆ ಪ್ರಕರಣ ದಾಖಲಾಗಿದ್ದು ಬರೋಬ್ಬರಿ 36,63,616 ಲಕ್ಷ ರೂಪಾಯಿಗಳನ್ನು ಇಬ್ಬರೂ ಅಮಾಯಕ ಯುವಕರು ಕಳೆದುಕೊಂಡಿದ್ದಾರೆ.

**6 ತಿಂಗಳಿಂದ ನಿರಂತರ ವಂಚನೆ**

ಮುಧೋಳ ನಗರದ ಯುವಕನಿಗೆ ವಾಟ್ಸ್‌ಅಪ್ ವಿಡಿಯೋ ಕಾಲ್ ಮೂಲಕ ಪರಿಚಯವಾಗಿದ್ದ ಝಾರ್ಖಂಡ್‌ನ ರಾಜಕುಮಾರ್, ಸ್ವಪ್ನಾಕುಮಾರಿ, ಶೌರ್ಯದೀಪ, ರಿಯಾಜ್ ಅಹ್ಮದ್, ಗುಲಾಬ


ಡಿವೈಎಸ್ಪಿ ರೋಷನ್ ಜಮೀರ್


ಸಿಪಿಐ ಎಂ.ಎನ್. ಶಿರಹಟ್ಟಿ

ಮತ್ತೋರ್ವ ಅಪರಿಚಿತ ಹಾಗೂ ಮುಧೋಳ ಸಮೀಪದ ಮುದ್ದಾಪೂರ ಗ್ರಾಮದ ನಿವಾಸಿ ಈತ ಸದ್ಯ ಝಾರ್ಖಂಡ್‌ನ ರಾಂಚಿಯಲ್ಲಿ ವಾಸವಿರುವ ಆದಿಲಾ ಸೈಯ್ಯದ್ ಮತ್ತು ಈತನ ಸಹೋದರಿ ಅಮೀನ್ ಬೇಗಂ ತಂಡ ನಿರಂತರವಾಗಿ ಮುಧೋಳದ ಯುವಕನೊಂದಿಗೆ ಸಂಪರ್ಕ ಸಾಧಿಸಿ ಲಕ್ಷಾಂತರ ರೂಪಾಯಿ ವಂಚಿಸಿದ್ದಾರೆ. ನಿರಂತರ ಸಂಪರ್ಕದಲ್ಲಿದ್ದ ಈ ವಂಚಕರು ಯುವಕನಿಗೆ ಒಂದೇ ತಿಂಗಳಲ್ಲಿ ಹಣ ದ್ವಿಗುಣಗೊಳಿಸುವುದಾಗಿ ನಂಬಿಸಿ ಹಣ ಪಡೆದು ಮೋಸ ಮಾಡಿದ್ದಾರೆ.

ಹಾಗೂ ಆ ಯುವಕನೊಂದಿಗೆ ಆತನ ಗೆಳೆಯರಿಗೂ ವಂಚನೆ ಎಸಗಿದ್ದಾರೆ. ಆರಂಭದಲ್ಲಿ ಆ ಯುವಕನಿಗೆ ಪುಸಲಾಯಿಸಿದ್ದ ವಂಚಕರು ತಿಂಗಳಾಂಗತ್ಯಯದಲ್ಲಿ ಹಣ ಡಬಲ್‌ಗೊಳಿಸಿ ಕೊಡುತ್ತೆವೆ ನಿಮ್ಮ ಆಪ್ತರಿಗೂ ತಿಳಿಸಿ ಎಂದು ವಂಚಕರು ಯುವಕನಿಗೆ ಪ್ರೇರೇಪಿಸಿದ್ದರು. ಅವರ ಮಾತನ್ನ ನಂಬಿ ತನ್ನ ಗೆಳೆಯನನ್ನು ಒಪ್ಪಿಸಿದ ಯುವಕ ವಂಚಕರಿಗೆ ಒಟ್ಟು 24,19,500 ರೂ. ಹಾಕಿದ್ದಾನೆ. ಹಣ ಪಡೆದ ವಂಚಕರ ತಂಡ ಈಗ ಸಂಪರ್ಕಕ್ಕೆ ಸಿಗುತ್ತಿಲ್ಲ, ಕೇವಲ ಒಂದೇ ತಿಂಗಳಿನಲ್ಲಿ ಹಣ ದ್ವಿಗುಣಗೊಳಿಸುವುದಾಗಿ ಮಾತನಾಡಿರುವ ವಂಚಕರು ಯುವಕನಿಗೆ ನಂಬಿಸಲು ಬೇರೆ ಯಾರಿಗೋ ದ್ವಿಗುಣಗೊಳಿರುವ ಬಗ್ಗೆ ವಿಡಿಯೋಕಾಲ್‌ನಲ್ಲಿ ಫೋಟೋ ತೋರಿಸಿ ನಂಬಿಸಿದ್ದಾರೆ. ಮೋಸಗಾರರ ಮಾತನ್ನು ನಂಬಿರುವ ಯುವಕ ಫೋನ್‌ಪೇ ಆರ್‌ಟಿಜಿಎಸ್ ಮೂಲಕ ಲಕ್ಷಾಂತರ ರೂಪಾಯಿ ಹಣ ವರ್ಗಾವಣೆ ಮಾಡಿ ಬಲಿಗೆಯಾಗಿದ್ದಾನೆ

**ಲಿಂಕ್ ಕಳಿಸಿ ವಂಚಿಸಿದ ಯುವತಿ**

ಮತ್ತೊಂದು ಪ್ರತ್ಯೇಕ ಪ್ರಕರಣದಲ್ಲಿ ಓರ್ವ ಯುವತಿ ಮುಧೋಳದ ಯುವ ಉದ್ಯಮಿಗೆ ಲಿಂಕ್ ಕಳಿಸಿ ಸರಿಸುಮಾರು 11 ಲಕ್ಷ ರೂಪಾಯಿ ವಂಚಿಸಿದ್ದಾಳೆ. ವಂದಿದಾ ಶೆಟ್ಟಿ ಎಂಬ ಯುವತಿ ಎಂಬುವಳು ಮುಧೋಳ ಉದ್ಯಮಿಗೆ ಕೆಲ ತಿಂಗಳಿನಿಂದ ಫೇಸ್ ಬುಕ್ ಫ್ರೆಂಡ್ ಆಗಿದ್ದಳು. ಇತ್ತೀಚಿಗೆ ಅವಳು ಶೇರ್ ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು ಎಂದು ಉದ್ಯಮಿಯನ್ನು ನಂಬಿಸಿದ್ದಾಳೆ. ವಂಚಕಿ ಮಾತಿಗೆ ಮರುಳಾಗಿರುವ ಉದ್ಯಮಿ ಹೆಚ್ಚಿನ ಹಣದ ಆಸೆಗೆ ಅವಳು ಕಳಿಸಿರುವ ಲಿಂಕ್ ಕ್ಲಿಕ್ ಮಾಡಿದ್ದಾನೆ. ಆಗ ಟೆಲಿಗ್ರಾಮ್‌ನಲ್ಲಿ ಸಿಎಂಎಸ್ ಗ್ಲೋಬಲ್ ಎಸ್ ಎನ್ನುವ ಖಾತೆ ಓಪನ್ ಆಗಿದೆ. ಅದರಲ್ಲಿ ಉದ್ಯಮಿ ನೊಂದಣಿ ಮಾಡಿಕೊಂಡ ನಂತರ ಯುವತಿ ಹೇಳಿದ ಹಾಗೆ ವಿವಿಧ ಹಂತಗಳಲ್ಲಿ ಒಟ್ಟು 11,72,116 ರೂಪಾಯಿಗಳನ್ನು ಆರ್‌ಟಿಜಿಎಸ್ ಫೋನ್ ಪೇ ಬಳಿಕ ಮೂಲಕ ಹೂಡಿಕೆ ಮಾಡಿದ್ದಾನೆ. ಕೆಲ ದಿನಗಳ ಬಳಿಕ ಹೂಡಿಕೆ ಮಾಡಿರುವ ಹಣವನ್ನು ಮರಳಿ ಕೇಳಿದಾಗ ಯುವತಿ ತಮ್ಮ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದಾಳೆ. ಆನ್‌ಲೈನ್ ವಂಚಕರಿಂದ ಮೋಸ ಹೋಗಿರುವುದು ಅರಿವಿಗೆ ಬರುತ್ತಿದ್ದಂತೆ ಹಣ ಕಳೆದುಕೊಂಡ ಯುವಕ ಹಾಗೂ ಉದ್ಯಮಿ ಹಣ ಮರುಕಳಿಸಿಕೊಡುವಂತೆ ಮುಧೋಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ

ಇದರ ಬಗ್ಗೆ ಮಾತನಾಡಿದ ಮುಧೋಳ ಠಾಣಾ ಸಿಪಿಐ ಮಹಾದೇವ ಶಿರಹಟ್ಟಿ ಆನ್‌ಲೈನ್ ವಂಚಕರ ಜಾಲಕ್ಕೆ ಮರುಳಾಗಬಾರದು ಎಂದು ನಮ್ಮ ಪೊಲೀಸ್ ಇಲಾಖೆಯಿಂದ ನಿರಂತರ ಸಾರ್ವಜನಿಕ ಜಾಗೃತಿ ಮೂಡಿಸಲಾಗುತ್ತಿದೆ. ಆದರೂ ಕೆಲ ಘಟನೆಗಳು ನಡೆಯುತ್ತಿವೆ. ಸಾರ್ವಜನಿಕರು ಹೂಡಿಕೆ ವಾಟ್ಸ್‌ಆಪ್ ವಿಡಿಯೋಕಾಲ್ ಹಾಗೂ ಇನ್ನಿತರ ವಂಚನೆ ಜಾಲಗಳ ಬಗ್ಗೆ ಜಾಗೃತರಾಗಬೇಕೆಂದರು.

ಒಟ್ಟಾರೆಯಾಗಿ ಯುವಕ ಹಣ ದ್ವಿಗುಣಗೊಳ್ಳುತ್ತದೆ ಮತ್ತು ಉದ್ಯಮಿ ಶೇರ್ ಮಾರ್ಕೆಟ್‌ನಲ್ಲಿ ಹಾಕಿದರೆ 10 ಪಟ್ಟು ಜಾಸ್ತಿ ಬರುತ್ತದೆ ಎಂದು ಈ ಆನ್‌ಲೈನ್ ವಂಚಕರಿಂದ ಇಂದು ಹಣವನ್ನು ಕಳೆದುಕೊಂಡು ಕೈ ಕೈ ಹಿಸುಕಿಕೊಳ್ಳುವಂತಾಗಿದೆ.

## ಉಸ್ತುವಾರಿ ಸಚಿವರೇ...

ಜಿಲ್ಲೆಯ ಮುಧೋಳ ಕ್ಷೇತ್ರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಆದಂತಹ ಮಾನ್ಯ ಆರ್.ಬಿ. ತಿಮ್ಮಾಪೂರ ಸಾಹೇಬರೇ ಈ ಆನ್‌ಲೈನ್ ವಂಚಕರಿಂದ ಅದೆಷ್ಟೊ ಅಮಾಯಕರು ಹಣ ದ್ವಿಗುಣ ಮಾಡಿಕೊಳ್ಳಲು ಹೋಗಿ ಮೋಸ ಹೋಗಿದ್ದಾರೆ. ಅದಕ್ಕೆ ತಾವುಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಈ ಆನ್‌ಲೈನ್ ವಂಚಕರಿಂದ ಮೋಸ ಹೋಗುತ್ತಿರುವ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳನ್ನು ನೀಡಬೇಕೆನ್ನುವ ಸಲುವಾಗಿ ಪೊಲೀಸ್ ಇಲಾಖೆಗೆ ಸೂಕ್ತ ನಿರ್ದೇಶನಗಳನ್ನು ನೀಡಿ ಕಟ್ಟುನಿಟ್ಟಿನ ಆದೇಶ ಮಾಡಬೇಕೆಂದು ಈ ಆನ್‌ಲೈನ್ ವಂಚಕರಿಂದ ಮೋಸ ಹೋದವರ ಧ್ವನಿಯಾಗಿದೆ.


ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ

# ಕಾಕ್ ಪಿಟ್ ರೊಮ್ಯಾನ್ಸ್!

9 ☞
ಅಗತ್ಯವಿದೆ ಎಂಬ ನೆಪದಲ್ಲಿ ಖಾಸಗಿ ಕ್ಷಣವನ್ನು ಹೊಂದಲು ಈ ನಿಯಮವನ್ನು ನೆಪವಾಗಿ ಬಳಸಿಕೊಳ್ಳುತ್ತಾರೆ. ಅಂತಹ ಸಂದರ್ಭಗಳಲ್ಲಿ, ಕಾಕ್ಪಿಟ್ ಒಳಗೆ ಒಂದು ಪ್ರಣಯ ವಾತಾವರಣವು ಬೆಳೆಯುತ್ತದೆ. ಇದನ್ನು ವಿಮಾನ ಹಾರಾಟದ ಮೊದಲೇ ಫಿಕ್ಸ್ ಮಾಡಲಾಗುತ್ತದೆ. ಈ ಕಾಕ್ಪಿಟ್ ರೊಮ್ಯಾನ್ಸ್‌ಗಳು ವಿಮಾನ ಹಾರಾಟದ ಅಂತ್ಯದವರೆಗೆ ಅಥವಾ ಆಟೋಪೈಲಟ್ ಆಫ್ ಆಗುವವರೆಗೆ ಮತ್ತು ನಿಯಮಿತ ಮೇಲ್ವಿಚಾರಣೆ ಪ್ರಾರಂಭವಾಗುವವರೆಗೆ ಮುಂದುವರಿಯಬಹುದು ಎಂದು ಸಿಯೆರಾ ಮಿಸ್ಟ್ ಹೇಳಿದ್ದಾಳೆ.



ಪ್ರಮಾಣಿತ ವಾಯುಯಾನ ಪ್ರೋಟೋಕಾಲ್ ಅಡಿಯಲ್ಲಿ, ಮತ್ತೊಬ್ಬ ಪೈಲಟ್ ಹೊರಗೆ ಬಂದಾಗ, ಉದಾಹರಣೆಗೆ, ಶೌಚಾಲಯಕ್ಕೆ ಹೋಗುವಂತಹ ಸಂದರ್ಭದಲ್ಲಿ, ಮತ್ತೊಬ್ಬ ಪೈಲಟ್‌ಗೆ ಫ್ಲೈಟ್ ಅಟೆಂಡೆಂಟ್ ಅನ್ನು ಕಾಕ್ ಪೀಟ್‌ಗೆ ಕರೆಯಲು ಅವಕಾಶವಿದೆ ಎಂದು ಸಿಯೆರಾ ಮಿಸ್ಟ್ ಹೇಳಿದ್ದಾರೆ.

**ಕಾಕ್ ಪೀಟ್ ಸೀಕ್ರೇಟ್ ಸ್ಥಳ**

ಸಿಯೆರಾ ವಿಸ್ಟ್ ಹೇಳಿರುವಂತೆ ದೀರ್ಘ ಪ್ರಯಾಣದ ವಿಮಾನಗಳಲ್ಲಿ ಕ್ಯಾಬಿನ್ ಸಿಬ್ಬಂದಿಗೆ ವಿಶ್ರಾಂತಿ ಪಡೆಯಲು ಮೀಸಲಾಗಿರುವ ಸ್ಥಳವಾದ ಕ್ರೂ ವಿಶ್ರಾಂತಿ ಡೆಕ್ ಅನ್ನು ಈ ರೀತಿಯ ಪ್ರಣಯದಾಟಕ್ಕೆ ಬಳಸಿಕೊಳ್ಳಲಾಗುತ್ತದೆಯಂತೆ. ಈ ಡೆಕ್ ಸಾಮಾನ್ಯವಾಗಿ ವಿಮಾನ ಪ್ರಯಾಣಿಕರಿಗೆ ಗೋಚರಿಸುವುದಿಲ್ಲ ಮತ್ತು ಅಧಿಕೃತ ಸಿಬ್ಬಂದಿಗಳು ಮಾತ್ರ ಇದನ್ನು ಪ್ರವೇಶಿಸಬಹುದು ಎಂದು ಆಕೆ ಹೇಳಿದ್ದಾರೆ.


ಬುರುಡೆ ರಹಸ್ಯ!

ಸುದ್ದಿಯಲ್ಲಿದೆ ಬುರುಡೆ. ಎಪ್ಪತ್ತೈದು ವರ್ಷಗಳ ಹಿಂದೆ ಸಿಕ್ಕಿತ್ತು ಬುರುಡೆ. ಇದರ ಹಿಂದೆ ಹೋಗಿದ್ದರು ಎಸ್.ಐ. ಕೊನೆಗೂ ಆರೋಪಿಯ ಬಂಧನ. ಈ ಪ್ರಕರಣ ನ್ಯಾಯಾಲಯದಲ್ಲಿ ಸಾಬೀತು. ಆರೋಪಿಗೆ ಗಲ್ಲು ಶಿಕ್ಷೆ. ಅತ್ಯಂತ ಕುತೂಹಲಭರಿತ ಕಥಾನಕ...

ಅತೀ ಶೀಘ್ರದಲ್ಲಿ

ಕರ್ನಾಟಕ ಸರ್ಕಾರ
ಗಾಂಧಿ ಭಾರತ

ಸ್ವಾತಂತ್ರ್ಯ
## ಬೆಳಗುತಿದೆ ಭರವಸೆಯ ಬೆಳಕು

ದೇಶಕ್ಕಾಗಿ ಹೋರಾಡಿದ ಮಹನೀಯರನ್ನು ಇಂದು ಸ್ಮರಿಸಿ, ಅವರ ತ್ಯಾಗವನ್ನು ಗೌರವಿಸೋಣ. ಈ ಸ್ವಾತಂತ್ರ್ಯ ಪ್ರತಿಯೊಬ್ಬರ ಬದುಕಿನಲ್ಲಿ ಗೌರವ, ಸಮಾನತೆ ಮತ್ತು ಸಮೃದ್ಧಿಯನ್ನು ತರಲಿ.

**ಕರ್ನಾಟಕ ಸರ್ಕಾರದ 5 ಗ್ಯಾರಂಟಿಗಳು** - **ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ** ಮತ್ತು **ಯುವನಿಧಿ** - ಕನ್ನಡಿಗರ ಜೀವನದಲ್ಲಿ ಭರವಸೆಯ ಹೊಸ ಬೆಳಕು ಮೂಡಿಸಿವೆ. ಇವು ಹಸಿವು, ಕತ್ತಲು, ಅಸಮಾನತೆ ಮತ್ತು ನಿರುದ್ಯೋಗದಿಂದ ಮುಕ್ತಿ ನೀಡಿ, ನಿಜವಾದ ಸ್ವಾತಂತ್ರ್ಯವನ್ನು ಸಾಕಾರಗೊಳಿಸುತ್ತಿವೆ.

ನಾವೆಲ್ಲರೂ ಒಟ್ಟಾಗಿ, ಪ್ರಗತಿಪರ ನವ ಕರ್ನಾಟಕವನ್ನು ಕಟ್ಟೋಣ.

# 79ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು





ಕರ್ನಾಟಕದ ನವ ನಿರ್ಮಾಣಕ್ಕೆ
## ಗ್ಯಾರಂಟಿ ಸರ್ಕಾರ

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

ಕರ್ನಾಟಕ ವಾರ್ತೆ

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 24.8.2025

# ಜನ ಸಾಮಾನ್ಯರ ಜೊತೆ 'ಕ್ಯೂ' ನಿಲ್ಲುತ್ತಿರೋ ವಿಜಿ!



ಇಂಥ ಕೆಟ್ಟ ಪರಿಸ್ಥಿತಿ ಯಾವ ಹೆಣ್ಣು ಮಗಳಿಗೂ ಬರಬಾರದು ಕಣ್ರೀ. ದರ್ಶನ್ ಪತ್ನಿ ವಿಜಯಲಕ್ಷ್ಮಿ ಈ ಮೊದಲು ಯಾವುದೇ ಜೈಲ್‌ಗೆ ಹೋದರೂ ವಿವಿಐಪಿ ಟ್ರೀಟ್‌ಮೆಂಟ್ ಸಿಗುತ್ತಿತ್ತು. ದುಡ್ಡು ಕೊಟ್ಟು ಗಂಡನಿಗೆ ಡ್ರೈ ಫ್ರೂಟ್ಸ್, ಬಿರಿಯಾನಿ ಎಲ್ಲಾ ಕೊಟ್ಟು ಬಿಂದಾಸ್ ಆಗಿ ಮಾತಾಡಿಕೊಂಡು



ಬರುತ್ತಾ ಇದ್ರು. ಅದೇ ಈಗ... ಸುಪ್ರೀಂ ಕೋರ್ಟ್ ಚಾಟಿ ಬೀಸಿದ ಬಳಿಕ ವಿಜಯಮ್ಮ ಸೆಂಟ್ರಲ್ ಜೈಲ್ ಮುಂದೆ ಜನ ಸಾಮಾನ್ಯರ ಜೊತೆ 'ಕ್ಯೂ' ನಿಲ್ಲುತ್ತಿದ್ದಾರೆ! ಎಲ್ಲಾ ಖೈದಿಗಳೂ ಬಂದು ನಿಲ್ಲುವ ತಂತಿ ಗ್ಯಾಲರಿಯಲ್ಲಿ ಆ ಕಡೆ ಗಂಡ, ಈ ಕಡೆ ಹೆಂಡತಿ ನಿಂತು ಮಾತಾಡಿಕೊಳ್ಳಬೇಕು!

ಆ ಗದ್ದಲದಲ್ಲಿ ರಹಸ್ಯ ಮಾಹಿತಿ ಶೇರ್ ಮಾಡಿಕೊಳ್ಳಲು ಆಗುವುದಿಲ್ಲ! ಏನೂ ಮಾಡೋಕೆ ಆಗಲ್ಲ, ಉಪ್ಪು ತಿಂದವರು ನೀರು ಕುಡಿಯಲೇ ಬೇಕು! ಇನ್ನೊಂದೆಡೆ, ರಚ್ಚು ದರ್ಶನ್ ಏನೇ ಮಾಡಲಿ,




ಎಲ್ಲೇ ಇರಲಿ, ನಾನು ಅವರನ್ನು ಬಿಡಲ್ಲ... ಅವರ ಪತ್ನಿ ಕರೆಯದಿದ್ದರೂ ಪರವಾಗಿಲ್ಲ.... ಡೆವಿಲ್‌ಗೆ ಪ್ರಚಾರ ಮಾಡ್ತೀನಿ... ಎಂದು ರಚ್ಚೆ ಹಿಡಿದಿದ್ದಾಳೆ! ತಾನೇ ಹೀರೋಯಿನ್ ಆಗಿ ನಟಿಸಿದ್ದ ಸಂಜು ವೆಡ್ಸ್ ಗೀತಾ-2 ಚಿತ್ರಕ್ಕೆ ಪ್ರಚಾರ ಮಾಡದೇ ಮೋಸ ಮಾಡಿದ ಈಕೆಗೆ 'ಡೆವಿಲ್' ಮೇಲೆ ಯಾಕಿಷ್ಟು ಮೋಹವೋ ಕಾಣೆ....!! ☯




# ಸೂರ್ಯ ದಿ ಗ್ರೇಟ್!

ಅವರೆಲ್ಲ ಕಡುಬಡವರ ಮಕ್ಕಳು, ಕುಡಿತದ ದಾಸನಾದ ಅಪ್ಪ, ಕೂಲಿ ಮಾಡುವ ಅಮ್ಮ, ಗುಡಿಸಲು ವಾಸ, ಮೂರು ಹೊತ್ತಿನ ಕೂಳಿಗೆ ದಿನವಿಡೀ ಮೈಬಗ್ಗಿಸಿ ದುಡಿಯುವ ಬಡ ದಂಪತಿ, ತಂದೆ- ತಾಯಿ ಕಳೆದುಕೊಂಡವರು, ಓದುವ ಆಸೆಯನ್ನು ಕಮರಿಕೊಂಡು ತಾವೂ, ಕೂಲಿ ಮಾಡುತ್ತಾ ಬದುಕು ಸಾಗಿಸುತ್ತಿದ್ದವರು, ಅರ್ಧಕ್ಕೆ ಸ್ಕೂಲ್ ಬಿಟ್ಟ ಹೆಣ್ಮಕ್ಕಳು, ದುಡ್ಡಿಲ್ಲದೇ ಶಾಲೆ ಬಿಟ್ಟವರು. ಹೀಗೆ ಭವಿಷ್ಯವನ್ನೇ ಕಾಣದೇ ಕಂಗಾಲಾಗಿ ನಿಂತವರು ಸಾವಿರಾರು ಮಂದಿ. ಅಂಥ ಮಕ್ಕಳೆಲ್ಲ ಇಂದು ಓದಿ ವಿದ್ಯಾವಂತರಾಗಿದ್ದಾರೆ. ಡಾಕ್ಟರ್, ಎಂಜಿನಿಯರ್ಸ್, ಲೆಕ್ಚರರ್ಸ್ ಹೀಗೆ ಉನ್ನತ ವ್ಯಾಸಂಗ ಮಾಡಿ, ಸುಂದರ ಬದುಕು ಕಟ್ಟಿಕೊಂಡಿದ್ದಾರೆ. ಅಂಥವರ ಸಂಖ್ಯೆ ಒಂದೆರಡಲ್ಲ ಬರೋಬ್ಬರಿ 8 ಸಾವಿರ ಮಂದಿ. ಇವರೆಲ್ಲರ ಭವಿಷ್ಯವನ್ನು ಬೆಳಗಿಸಿದವರು, ವಿದ್ಯೆಯೆಂಬ ಬತ್ತಿಗೆ ಎಣ್ಣೆ ಸುರಿದು ಬೆಳಕು ಹಚ್ಚಿದವರು ಬೇರಾರು ಅಲ್ಲ ತಮಿಳಿನ ಖ್ಯಾತ ನಟ ಸೂರ್ಯ. ಕಳೆದ ಒಂದು ವಾರದಿಂದ ನಟ ಸೂರ್ಯ ಸುದ್ದಿಯಲ್ಲಿದ್ದಾರೆ. ಕಾರಣ ಸೂರ್ಯ ಅವರ ಅಗರಂ ಫೌಂಡೇಷನ್ ಮತ್ತು ಅಲ್ಲಿ ನಡೆದ ಕಾರ್ಯಕ್ರಮ, ಅಲ್ಲಿ ಬಂದ ಸಾವಿರಾರು ಸಾಧಕರು. ಅವರೆಲ್ಲ ಬಾಯಲ್ಲಿ ಬಂದಿದ್ದು ಒಂದೇ ಮಾತು,ಸೂರ್ಯ ಅಣ್ಣ ನಮ್ಮ ಪಾಲಿನ ದೇವರು... ಅಪ್ಪ ಶಿವಕುಮಾರ್ ಹಾದಿಯಲ್ಲಿ ಸಾಗ್ತಿರೋ ಸೂರ್ಯ, ಯಾವುದೇ ವಿವಾದಕ್ಕೆ ಸಿಲುಕದವರು. ನಟನಾಗಿಯೂ ಯಶಸ್ಸು ಗಳಿಸಿದ್ದೂ ತಡವಾಗಿಯೇ ಆದರೂ, ಇಂದು ದೇಶಾದ್ಯಂತ ತನ್ನದೇ ಆದ ದೊಡ್ಡ ಫ್ಯಾನ್ಸ್ ಪಡೆ ಹೊಂದಿದ್ದಾರೆ. ಅಂಥ ಸೂರ್ಯ ಸಮಾಜ ಸೇವೆಯಲ್ಲೂ ಎತ್ತಿದ ಕೈ. ಅವರ ಸಾಮಾಜಿಕ ಕಳಕಳಿ, ಹಿಂದುಳಿದ ವರ್ಗಗಳ, ಬಡವರ ಮಕ್ಕಳ ಮೇಲಿರುವ ಕಾಳಜಿಗೆ ಅಗರಂ ಫೌಂಡೇಷನ್ ಸಾಕ್ಷಿ.

2006ರ, ಸೆಪ್ಟೆಂಬರ್ 25ರಂದು ನಟ ಸೂರ್ಯ ಅಗರಂ ಫೌಂಡೇಷನ್ ಸ್ಥಾಪಿಸಿದರು. 15 ವರ್ಷಗಳನ್ನು ಪೂರೈಸಿದ ಅಗರಂ ಫೌಂಡೇಷನ್ ಈವರೆಗೂ 8 ಸಾವಿರ ಮಕ್ಕಳನ್ನು ಓದಿಸಿದೆ. ಈ ಪೈಕಿ 51 ಮಂದಿ ವೈದ್ಯ ಪದವೀಧರರು, 1880 ಮಂದಿ ಇಂಜಿನಿಯರ್ಸ್. ಇವರೆಲ್ಲ ಕಡುಬಡತನದಿಂದ ಹುಟ್ಟಿ, ಬಡತನವನ್ನೇ ಹಾಸುಹೊದ್ದು, ಓದಲಾರದೇ, ಮುಂದಿನ ಭವಿಷ್ಯ ಕಾಣಲಾರದೇ ಇದ್ದವರು. ಇವರೆಲ್ಲರನ್ನೂ ತನ್ನೆರಡು ಕೈಗಳಿಂದ ಎದೆಗವಚಿಕೊಂಡಿದ್ದು ಸೂರ್ಯ. ಸಿನಿಮಾಗಳಿಂದ ತಾನು ದುಡಿದ ಹಣದಲ್ಲಿ ಅಗರಂ ಫೌಂಡೇಷನ್‌ಗೆ ನೀಡುವ ಪಾಲು ದೊಡ್ಡದು. ಹೇಗಾದರೂ ಸರಿ, ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು, ಅವರಿಗೆ ಬೇಕಾದ ಮಾರ್ಗದರ್ಶ, ಕಾಲೇಜುಗಳಲ್ಲಿ ಸೀಟು, ಕೋಚಿಂಗ್ ಕ್ಲಾಸ್ ಎಲ್ಲವೂ ಸಿಗಬೇಕು ಎಂಬುದು ಸೂರ್ಯ ಕನಸು. ತಾವು ಕಂಡ ಕನಸನ್ನು ಅಗರಂ ಫೌಂಡೇಷನ್ ಮೂಲಕ ಸೂರ್ಯ ನನಸು ಮಾಡಿಕೊಳ್ಳಲು, ಸಾವಿರಾರು ಯುವಕ- ಯುವತಿಯರ ಕನಸಿಗೆ ನೀರೆರೆದರು. ಓದಲು ಹಣ ಕೇಳಿಕೊಂಡು ಬಂದ ಯಾವೊಬ್ಬ ಯುವಕ-ಯುವತಿಯನ್ನೂ ಸೂರ್ಯ ನಿರಾಸೆಗೊಳಿಸಿಲ್ಲ. ಓದಲೇಬೇಕಂಬ ಛಲ ಹೊತ್ತ ಸಾವಿರಾರು ಮಕ್ಕಳಿಗೆ ದಾರಿ ತೋರಿಸಿದವರು ಸೂರ್ಯ. ಅವರ 15 ವರ್ಷಗಳ ನಿರಂತರ ನೆರವು, 8 ಸಾವಿರ ವಿದ್ಯಾರ್ಥಿಗಳ ಜೀವನ ಬೆಳಗಿಸಿದೆ. ಮೊನ್ನೆಯಷ್ಟೇ ತೆರೆಕಂಡ ರೆಟ್ರೋ ಚಿತ್ರದಲ್ಲಿ ಬಂದ ಲಾಭದಲ್ಲಿ 10 ಕೋಟಿಯನ್ನು ತನ್ನ ಫೌಂಡೇಷನ್‌ಗೆ ಕೊಟ್ಟಿದ್ದಾರೆ ಸೂರ್ಯ. ☯



# ಟಾಕ್ಸಿಕ್‌ಗೆ ಐವರು ನಾಯಕಿಯರು!




ಯಶ್ ನಟನೆ ಹಾಗೂ ನಿರ್ಮಾಣದ (ಪಾಲುದಾರಿಕೆ) ಟಾಕ್ಸಿಕ್ ಬಿಡುಗಡೆಗೂ ಮೊದಲೇ ಸಂಚಲನ ಸೃಷ್ಟಿಸುತ್ತಿದೆ. ಕೆಜಿಎಫ್ ನಂತರ 'ಯಶ್' ಮಾಡುತ್ತಿರುವ ಸಿನಿಮಾ ಎಂಬುದು ಒಂದು ಕಾರಣವಾದರೆ, ನ್ಯಾಷನಲ್ ಅವಾರ್ಡಿ ಗೀತು ಮೋಹನ್ ದಾಸ್ ನಿರ್ದೇಶನ ಎರಡನೇ ಕಾರಣ. ಜೊತೆಗೆ, ಇದರಲ್ಲಿ ಬಹುತೇಕ ವಿದೇಶಿ ತಂತ್ರಜ್ಞರ ಕೆಲಸ ಮಾಡ್ತಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ನಿರ್ಮಾಣ ಆಗುತ್ತಿದೆ! ಉಳಿದ ಸುಮಾರು 17 ಭಾಷೆಗಳಿಗೆ ಡಬ್ಬಿಂಗ್ ಮಾಡಲಾಗುತ್ತಿದೆ!









ಈ ಚಿತ್ರದಲ್ಲಿ ಯಶ್ ಸೂಪರ್ ಹೀರೋ ಆದರೂ ಅವರೆದುರು ಐವರು ನಾಯಕಿಯರು ಮಿಂಚಲಿದ್ದಾರೆ! ನಯನ ತಾರಾ, ಹ್ಯೂಮಾ ಖುರೇಷಿ, ತಾರಾ ಸುತಾರಿಯ, ಕಿಯಾರಾ ಅಡ್ವಾಣಿ, ರುಕ್ಮಿಣಿ ವಸಂತ್... ಐವರೂ ಒಬ್ಬರಿಗಿಂತ ಒಬ್ಬರು ಪ್ರತಿಭಾವಂತರು ಮತ್ತು ಸುಂದರಿಯರು! ಸಾಮಾನ್ಯವಾಗಿ, ಸೂಪರ್ ಹೀರೋಗಳ ಚಿತ್ರದಲ್ಲಿ ನಾಯಕಿಯರನ್ನು 'ಗ್ಲಾಮರ್ ಬೊಂಬೆ' ಥರಾ ತೋರಿಸಲಾಗುತ್ತದೆ. ಆದರಿಲ್ಲಿ ಬೇರೆಯೇ 'ಕಥೆ' ಮತ್ತು 'ನಿರೂಪಣೆ' ಇದೆಯಂತೆ! ನಿರ್ಮಾಪಕರು ಅನೌನ್ಸ್ ಮಾಡಿರೋ ಪ್ರಕಾರ 'ಟಾಕ್ಸಿಕ್' ಮಾರ್ಚ್ 19, 2026 ವಿಶ್ವದಾದ್ಯಂತ ಬಿಡುಗಡೆ ಆಗಲಿದೆ... ದಿ ಮೋಸ್ಟ್ ಅವೈಟಿಂಗ್ ಮೂವಿ ಇದು!!

ಮೊದಲಿಗೆ 100 ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಾಗಿ ಘೋಷಿಸಿದ್ದ ಸೂರ್ಯ, 160 ಜನರಿಗೆ ಸಹಾಯ ಮಾಡಬೇಕಾಯಿತಂತೆ. ಅಂದು 160 ವಿದ್ಯಾರ್ಥಿಗಳಿಂದ ಆರಂಭವಾದದ್ದು, ಹದಿನೈದು ವರ್ಷಗಳಲ್ಲಿ 6,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಸೂರ್ಯ ಬೆನ್ನಿಗೆ ಪತ್ನಿ, ನಟಿ ಜ್ಯೋತಿಕಾ ಸಹ ಬೆನ್ನುಲುಬು. ಜತೆಗೆ ಅವರಿಬ್ಬರು ಮಕ್ಕಳು ತಮ್ಮ ಪಾಕೆಟ್ ಮನಿಯನ್ನೂ ಫೌಂಡೇಷನ್‌ಗೆ ನೀಡಿದ್ದಾರಂತೆ. ಡ್ರೈವರ್, ಕೂಲಿ ಕಾರ್ಮಿಕರು, ಪೌರ ಕಾರ್ಮಿಕರು, ಶ್ರೀಲಂಕಾ ನಿರಾಶ್ರಿತರಿಗೂ ಸೂರ್ಯ ಆರ್ಥಿಕ ಬಲ ತುಂಬಿದ್ದಾರೆ ಸೂರ್ಯ.

ಮೊನ್ನೆ ಅಗರಂ ಫೌಂಡೇಷನ್ 15ನೇ ವಾರ್ಷಿಕೋತ್ಸವದ ವೇದಿಕೆಯಲ್ಲಿ ಬಂದ ಸಾವಿರಾರು ಮಂದಿ, ಡಾಕ್ಟರ್, ಎಂಜಿನಿಯರ್, ಟೆಕ್ಕಿ, ಲೆಕ್ಚರರ್ ಆಗಿದ್ದೀನಿ, ಗುಡಿಸಿಲಲ್ಲಿದ್ದವರು ಮನೆ ಕಟ್ಟಿಸಿಕೊಂಡಿದ್ದೀವಿ, ಅಪ್ಪ-ಅಮ್ಮನನ್ನು ಸಾಕುತ್ತಿದ್ದೀವಿ, ತಂಗಿ-ತಮ್ಮನನ್ನು ಓದಿಸುತ್ತಿದ್ದೀವಿ, ಇದಕ್ಕೆಲ್ಲ ಕಾರಣ ಸೂರ್ಯ ಅಣ್ಣ.. ಎಂದು ಕೃತಜ್ಞತೆಯಿಂದ ಹೇಳುತ್ತಿದ್ದರು. ಬಡ ಪೋಷಕರು, ನಮ್ಮ ಪಾಲಿಗೆ ನೀವೇ ದೇವರೆಂದು ಕೈಮುಗಿಯುತ್ತಿದ್ದರು. ಇವರ ಸಾಧನೆ, ಸಂಭ್ರಮ ನೋಡಿ ಸೂರ್ಯ ಭಾವುಕರಾಗಿ, ಕಣ್ಣೀರಾಗುತ್ತಿದ್ದರು. ಕೆಲ ಸ್ಟಾರ್‌ಗಳು 100, 200 ಕೋಟಿ ರೂ. ಸಂಪಾದಿಸುವುದರಲ್ಲಿ ಬ್ಯುಸಿಯಾಗಿದ್ರೆ, ಕೆಲವರು ಕೊಲೆ, ದೌರ್ಜನ್ಯ ಕೇಸ್‌ನಲ್ಲಿ ಕಳೆದುಹೋಗಿದ್ರೆ, ಸೂರ್ಯ ಎಂಬ ಮಾನವೀಯ ಹೃದಯದ ನಟ ಸಾವಿರಾರು ವಿದ್ಯಾವಂತರನ್ನು ಸೃಷ್ಟಿವಂಥ ಸಾಮಾಜಿಕ ಕ್ರಾಂತಿಯ ಚುಕ್ಕಾಣಿ ಹಿಡಿದು ಅಚ್ಚರಿ ಮೂಡಿಸಿದ್ದಾರೆ. ಇದಲ್ಲವೇ ಬದುಕಿನ ಸಾರ್ಥಕತೆ. ದುಡ್ಡು ಕೊಟ್ಟು ಸಿನಿಮಾ ನೋಡಿ, ದೇವರಂತೆ ಆರಾಧಿಸಿದ ಅಭಿಮಾನಿಗಳ ಪಾಲಿಗೆ ನಟನೊಬ್ಬ ಬದುಕಿದ್ದಾಗಲೇ ದೇವರಾಗುವುದು ಹೀಗೇ ಅಲ್ವೇ ? ☯

Vol. 41 No. 12 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com